ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಸೆಪ್ಟೆಂಬರ್ 10 ಬುಧವಾರ 2025

₹4


ಸಂಪುಟ: 46 | ಸಂಚಿಕೆ: 144 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ ಬುಧವಾರ 10 ಸೆಪ್ಟೆಂಬರ್ 2025

ಇಂದು ನಾಡಪ್ರಭು ಕೆಂಪೇಗೌಡ, ರಾಷ್ಟ್ರಕವಿ ಕುವೆಂಪು, ಬಾಲಗಂಗಾಧರನಾಥಸ್ವಾಮೀಜಿ ತ್ರಿರತ್ನ ಜಯಂತ್ಯುತ್ಸವ


ಮೈಸೂರು,ಸೆ.9(ಜಿಎ)–ಮಾನಸಿ ನಗರದ ಕೆಎಸ್‌ಆರ್‌ಟಿಸಿ ಒಕ್ಕಲಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಜಗನ್ಮೋಹನ ಅರಮನೆಯಲ್ಲಿ ಸೆ.10ರಂದು ಮಧ್ಯಾಹ್ನ 3 ಗಂಟೆಗೆ ನಾಡಪ್ರಭು ಕೆಂಪೇಗೌಡ, ರಾಷ್ಟ್ರಕವಿ ಕುವೆಂಪು, ಬಾಲಗಂಗಾಧರ ನಾಥ ಸ್ವಾಮೀಜಿಯ ತ್ರಿರತ್ನ ಜಯಂತ್ಯುತ್ಸವ ಆಯೋಜಿಸಲಾಗಿದೆ ಎಂದು ಸಂಘದ ಸಂಚಾಲಕ ಸಿ.ಡಿ.ವಿಶ್ವನಾಥ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಶ್ರೀನಿವಾಸ್ ಅಧ್ಯಕ್ಷತೆ ವಹಿಸುವರು ಎಂದರು. ಸುಮಾರು 30 ಮಂದಿ ನಿವೃತ್ತರಿಗೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಗೌರವಿಸುವರು. ಸಂಸದ ಯದುವೀರ್ ಒಡೆಯರ್, ಕೆಂಪೇಗೌಡ ಕ್ರಿಕೆಟ್ ಕಪ್ ಪ್ರಶಸ್ತಿ ಪ್ರದಾನ ಮಾಡುವರು. ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಪ್ರಧಾನ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಕೆ.ವೆಂಕಟೇಶ್ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಮಾಜಿ ಉಪಾಧ್ಯಕ್ಷ ಶಿವಲಿಂಗಯ್ಯ, ಸಹಕಾರ್ಯದರ್ಶಿ ದೇವರಾಜಕುಮಾರ್, ಸಂಘಟನಾ ಕಾರ್ಯದರ್ಶಿಗಳಾದ ಸಿ.ಮಾದೇಶ್, ಶಮಂತ್ ಕುಮಾರ್, ನಾಗರಾಜ್ ಉಪಸ್ಥಿತರಿದ್ದರು.

ವೀರೇಂದ್ರ, ವಿನಯ್ ಕುಲಕರ್ಣಿ ಬೆನ್ನಲ್ಲೇ ಕರ್ನಾಟಕ ಕಾಂಗ್ರೆಸ್‌ನ ಸತೀಶ್ ಸೈಲ್ ಬಂಧನ

ಬೆಂಗಳೂರು, ಸೆ. 9: ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿ, ವಿನಯ್ ಕುಲಕರ್ಣಿ ಬಂಧನದ ಬೆನ್ನಲ್ಲೇ ಇದೀಗ ಕಾಂಗ್ರೆಸ್‌ನ ಮತ್ತೋರ್ವ ಶಾಸಕ ಸತೀಶ್ ಸೈಲ್ ಅವರನ್ನು ಇಂದು (ಸೆ. 9) ಬೆಂಗಳೂರಿನಲ್ಲಿ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಬಂಧಿಸಿದ್ದಾರೆ. ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗಿದ್ದ ವೇಳೆ ಕಾರವಾರ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರನ್ನು ಇಡಿ ಅರೆಸ್ಟ್ ಮಾಡಿದೆ. ಇದರೊಂದಿಗೆ ಬಂಧನಕ್ಕೊಳಗಾದ ಕರ್ನಾಟಕ ಕಾಂಗ್ರೆಸ್‌ನ ಮೂರನೇ ಶಾಸಕ.


ಸತೀಶ್ ಸೈಲ್

ಆಗಸ್ಟ್ 13, 14ರಂದು ಇಡಿ ಅಧಿಕಾರಿಗಳಿಂದ ಕಾರವಾರ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ನಿವಾಸದ ಮೇಲೆ ದಾಳಿ ನಡೆದಿತ್ತು. ಈ ವೇಳೆ ಅಕ್ರಮ ಆಸ್ತಿ, ನಗದು ಹಣ, ಚಿನ್ನಾಭರಣ ಪತ್ತೆಯಾಗಿತ್ತು. ಈ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದರು. ಅದರಂತೆ ವಿಚಾರಣೆ ಬಳಿಕ ಶಾಸಕ ಸತೀಶ್ ಸೈಲ್ ಅವರನ್ನ ಬಂಧಿಸಲಾಗಿದೆ.

ಆನ್‌ಲೈನ್ ಬೆಟ್ಟಿಂಗ್ ದಂಧೆ ಪ್ರಕರಣದಲ್ಲಿ ಚಿತ್ರದುರ್ಗ ಕಾಂಗ್ರೆಸ್ ಶಾಸಕ ವಿರೇಂದ್ರಪಪ್ಪಿ ಅಮನ್ನು ಇಡಿ ಬಂಧಿಸಿದ್ದು, ಸದ್ಯ ಅವರು ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಇನ್ನು ಯೋಗೇಶ್ ಗೌಡ ಕೊಲೆ ಕೇಸಿನ ಸಾಕ್ಷ್ಯ ನಾಶ ಸಂಬಂಧ ವಿನಯ್ ಕುಲಕರ್ಣಿ ಜಾಮೀನು ಅರ್ಜಿ ತಿರಸ್ಕೃತವಾಗಿದ್ದು, ಅವರೂ ಸಹ ಪರಪ್ಪನ ಅಗ್ರಹಾರ ಜೈಲಿದ್ದು, ಮಗನ ಆಪರೇಷನ್ ಸಂಬಂಧ ಎರಡು ದಿನಗಳ ಮಟ್ಟಿಗೆ ಅವರಿಗೆ ಕೋರ್ಟ್ ಜಾಮೀನು ನೀಡಿದೆ.

ಇದೀಗ ಅಕ್ರಮ ಆಸ್ತಿ ಪ್ರಕರಣ ಸಂಬಂಧ ಕಾರವಾರ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರನ್ನು ಸಹ ಇಡಿ ಅಧಿಕಾರಿಗಳು ಬಂಧಿಸಿದ್ದು, ಸದ್ಯ ಆರೋಗ್ಯ ತಪಾಸಣೆ ಮಾಡಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಿದ್ದಾರೆ. ಇದರೊಂದಿಗೆ ಕರ್ನಾಟಕ ಕಾಂಗ್ರೆಸ್‌ನ ಮೂರನೇ ಶಾಸಕ ಅರೆಸ್ಟ್ ಆದಂತಾಗಿದೆ.

ನೂತನ ಉಪರಾಷ್ಟ್ರಪತಿಗಳಿಗೆ ಯದುವೀರ್ ಅಭಿನಂದನೆ

ಮೈಸೂರು, ಸೆ.9– ಉಪರಾಷ್ಟ್ರಪತಿ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿರುವ ಎನ್‌ಡಿಎ ಅಭ್ಯರ್ಥಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣ ದತ್ತ ಚಾಮರಾಜ ಒಡೆಯರ್ ಅಭಿನಂದಿಸಿದ್ದಾರೆ.

ರಾಧಾಕೃಷ್ಣನ್ ಅವರ ಆಯ್ಕೆ ನಮ್ಮ ರಾಷ್ಟ್ರಕ್ಕೆ ಹೆಮ್ಮೆ ತಂದಿದ್ದು, ಈ ಗೆಲುವು ನಮ್ಮ ಪ್ರಜಾಪ್ರಭುತ್ವ ಸಂಸ್ಥೆಗಳ ಬಲಿಷ್ಠತೆಗೆ ಸಾಕ್ಷಿಯಾಗಿದೆ. ನಾಯಕತ್ವ, ಸಮಗ್ರತೆ ಮತ್ತು ಸಾರ್ವಜನಿಕ ಸೇವೆಯ ಬಗ್ಗೆ ರಾಧಾಕೃಷ್ಣನ್ ಅವರು ಹೊಂದಿರುವ ಬದ್ಧತೆ ಹಾಗೂ ಅಚಲ ನಂಬಿಕೆಗೆ ಮತ್ತಷ್ಟು ಮೆರುಗು ದೊರೆತಿದೆ. ಉಪರಾಷ್ಟ್ರಪತಿಯಾಗಿ ರಾಧಾಕೃಷ್ಣನ್ ಸಂಸತ್ತಿನ ಘನತೆಯನ್ನು ಎತ್ತಿಹಿಡಿಯುವಲ್ಲಿ ಮತ್ತು ಪ್ರಜಾಪ್ರಭುತ್ವ ಸಂಪ್ರದಾಯಗಳನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರ ಅನುಭವ ಮತ್ತು ದೃಷ್ಟಿಕೋನವು ದೇಶ ವನ್ನು ಸಮಗ್ರ ಬೆಳವಣಿಗೆ ಮತ್ತು ಸ್ಥಿರತೆಯತ್ತ ಕೊಂಡೊಯ್ಯುತ್ತದೆ ಎಂಬ ವಿಶ್ವಾಸ ನನಗಿದೆ.

ಇಂದಿನ ರಾಜಕೀಯ ಮತ್ತು ಸಾಮಾಜಿಕ ವಾತಾವರಣದಲ್ಲಿ ರಾಧಾಕೃಷ್ಣನ್ ಅವರ ನಾಯಕತ್ವ ಅತ್ಯಂತ ಮಹತ್ವ ಹಾಗೂ ಮೌಲ್ಯಯುತ ಆಗಿದೆ. ಜವಾಬ್ದಾರಿ, ಬದ್ಧತೆ, ನಿಷ್ಠೆ ಮತ್ತು ಸಮರ್ಪಣಾ ಭಾವನೆ ಹೊಂದಿರುವ ರಾಧಾಕೃಷ್ಣನ್ ಅವರು ದೇಶಸೇವೆಯಲ್ಲಿ ಯಶಸ್ವಿಯಾಗಲಿದ್ದಾರೆ ಎಂದು ಸಂಸದ ಯದುವೀರ್ ಒಡೆಯರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಿಧನ

ಕೆ.ಕುಮಾರ್



ಮೈಸೂರು,ಸೆ.9–'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಹಿರಿಯ ಪ್ರಿಂಟರ್ ಮತ್ತು ಬನ್ನಿಮಂಟಪ ಹುಡ್ಕೋ 1ನೇ ಹಂತ, ಜಿ.ಜಿ. ಬ್ಲಾಕ್ ನಿವಾಸಿ ಕೆ.ಕುಮಾರ್ (62) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ತುಳಸಿದೇವಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ. ಮಮ್ಮೂಟಿ



ಕೇರಳ ಮುಸ್ಲಿಂ ಜಮಾತ್‌ನ ನಿವೃತ್ತ ಪ್ರಧಾನ ಕಾರ್ಯದರ್ಶಿ, ಅಕ್ಬರ್ ರಸ್ತೆಯಲ್ಲಿರುವ ತನ್‌ವಿರುಲ್ ಇಸ್ಲಾಮಿಕ್ ಸ್ಕೂಲ್‌ನ ನಿವೃತ್ತ ಕಾರ್ಯದರ್ಶಿ ಹಾಗೂ ಬನ್ನಿಮಂಟಪ ಸಿ ಬಡಾವಣೆ ನಿವಾಸಿ ಪಿ. ಮಮ್ಮೂಟಿ (78) ಸೋಮವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶವ ಸಂಸ್ಕಾರ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಮುಸ್ಲಿಂ ಸಮುದಾಯದ ಸ್ಮಶಾನದಲ್ಲಿ ಸೋಮವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಎಸ್. ಅಬ್ದುಲ್ ಹಮೀದ್



ಮೈಸೂರಿನ ಕಲ್ಯಾಣಗಿರಿ ನಿವಾಸಿ ಹಾಗೂ ನಿವೃತ್ತ ಐಡಿಯಲ್ ಜಾವಾ ನೌಕರ ಹೆಚ್.ಎಸ್.ಅಬ್ದುಲ್ ಹಮೀದ್(80) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶವ ಸಂಸ್ಕಾರ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಮುಸ್ಲಿಂ ಸಮುದಾಯದ ಸ್ಮಶಾನದಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೆಂಕಟೇಶ್‌ಗೌಡ



ಮೈಸೂರು, ಸೆ.9– ಮೈಸೂರಿನ ಹೆಬ್ಬಾಳು ಮೊದಲ ಹಂತದ ನಿವಾಸಿಯಾಗಿದ್ದ ಕೆಎಸ್‌ಆರ್‌ಟಿಸಿ ನಿವೃತ್ತ ಟಿಸಿ ವೆಂಕಟೇಶ್ ಗೌಡ ಅವರು ಮಂಗಳವಾರ ಬೆಳಗ್ಗೆ ನಿಧನರಾದರು. ಇವರು ಪತ್ನಿ ಲಲಿತಾ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಹೆಬ್ಬಾಳು ರುದ್ರಭೂಮಿಯಲ್ಲಿ ಬುಧವಾರ ಬೆಳಗ್ಗೆ 11ಕ್ಕೆ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿ.ಎಸ್.ಗೌತಮ್



ಮೈಸೂರು, ಸೆ.9– ಮೆಕ್ಸಿಕೋದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದ ಮೈಸೂರು ಮೂಲದ ಯುವಕ ನಿಧನರಾಗಿದ್ದಾರೆ.

ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ ಅವರ ಸಹೋದರಿ ವಿಮಲಾ ಹಾಗೂ ಸೋಮಶೇಖರ್ ದಂಪತಿ ಪುತ್ರ ವಿ.ಎಸ್.ಗೌತಮ್(34) ಅನಾರೋಗ್ಯ ಕಾರಣದಿಂದ ಮೆಕ್ಸಿಕೋದಲ್ಲಿ ನಾಲ್ಕು ದಿನಗಳ ಹಿಂದೆ ಅಕಾಲಿಕ ಮರಣ ಹೊಂದಿದ್ದಾರೆ. ಮೃತರು ಅವಿವಾಹಿತರಾಗಿದ್ದು ತಂದೆ–ತಾಯಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇನ್ನು ಎರಡು–ಮೂರು ದಿನಗಳಲ್ಲಿ ಪಾರ್ಥಿವ ಶರೀರವನ್ನು ಮೈಸೂರಿಗೆ ತಂದು, ಅಂತ್ಯಸಂಸ್ಕಾರ ನಡೆಸುವುದಾಗಿ ಕುಟುಂಬದ ಮೂಲಗಳಿಂದ ತಿಳಿದುಬಂದಿದೆ.

ವಿದೇಶಿ ರೋಗವಾಗಿದ್ದ ಕ್ಯಾನ್ಸರ್ ಈಗ ನಮ್ಮ ದೇಶದ ರೋಗವೂ ಆಗಿದೆ

● ಕಿದ್ವಾಯಿ ಆಸ್ಪತ್ರೆ ನಿವೃತ್ತ ನಿರ್ದೇಶಕಿ ಡಾ.ವಿಜಯಲಕ್ಷ್ಮಿ ದೇಶಮಾನೆ ವಿಷಾದ ● ಆರಂಭದಲ್ಲಿ ಪತ್ತೆಯಾದರೆ ಚಿಕಿತ್ಸೆ ಮೂಲಕ ಗುಣಪಡಿಸಬಹುದು

ಮೈಸೂರು, ಸೆ.9(ಎಂಕೆ)– ಕ್ಯಾನ್ಸರ್ ಮುಂಚೆ ಪಾಶ್ಚಿಮಾತ್ಯ ದೇಶಗಳ ರೋಗವಾಗಿತ್ತು. ಈಗ ನಮ್ಮ ದೇಶದ ರೋಗವೂ ಆಗಿದೆ ಎಂದು ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ನಿವೃತ್ತ ನಿರ್ದೇಶಕಿ, ಪದ್ಮಶ್ರೀ ಪುರಸ್ಕೃತರಾದ ಡಾ.ವಿಜಯಲಕ್ಷ್ಮಿ ದೇಶಮಾನೆ ವಿಷಾದಿಸಿದರು.

ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮಿಲೇನಿಯಂ ಸಭಾಂಗಣದಲ್ಲಿ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಯೋಗದೊಂದಿಗೆ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ಕಾರ್ಸಿನೋ ಯೋಗ'(ಕ್ಯಾನ್ಸರ್ ಮತ್ತು ಯೋಗ) ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆರಂಭದಲ್ಲಿಯೇ ಕ್ಯಾನ್ಸರ್ ರೋಗ ಪತ್ತೆ ಮಾಡಿ, ಚಿಕಿತ್ಸೆ ಪಡೆದರೆ ಗುಣಮುಖರಾಗಬಹುದು ಎಂದರು.


'ಕಾರ್ಸಿನೋ ಯೋಗ' ಕುರಿತ ರಾಷ್ಟ್ರೀಯ ಸಮ್ಮೇಳನವನ್ನು ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ನಿವೃತ್ತ ನಿರ್ದೇಶಕಿ, ಪದ್ಮಶ್ರೀ ಪುರಸ್ಕೃತರಾದ ಡಾ.ವಿಜಯಲಕ್ಷ್ಮಿ ದೇಶಮಾನೆ ಉದ್ಘಾಟಿಸಿದರು.

ಕ್ಯಾನ್ಸರ್ ರೋಗಿಗೆ ಕೊನೆಯವರೆಗೂ ಕಿಮೋಥೆರಪಿ ನೀಡಬಾರದು. ದುಬಾರಿ ವೆಚ್ಚವಾಗುತ್ತದೆ ಎಂದು ಬೀದಿಗೆ ಬೀಳುವಂತೆ ಮಾಡಬಾರದು. ಬದಲಿಗೆ ಆತ್ಮಸ್ಥೈರ್ಯ ತುಂಬಬೇಕು. ಯೋಗ, ಧ್ಯಾನ, ಪ್ರಾರ್ಥನೆಯಂತಹ ಸಮಗ್ರ ಚಿಕಿತ್ಸಾ ವಿಧಾನಗಳನ್ನು ಅನುಸರಿಸಬೇಕು. ರೋಗ ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಮುಖ್ಯ. ಹಾಗಾಗಿ ಜೀವನ ಶೈಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಕ್ಯಾನ್ಸರ್ ಬಂದರೆ ಸಾವೇ ಗತಿ ಎಂಬಂತೆ ಆತಂಕ ಮೂಡಿಸಲಾಗುತ್ತದೆ. ಇಂತಹ ಹೊತ್ತಿನಲ್ಲಿ ರಷ್ಯಾದಲ್ಲಿ ಕ್ಯಾನ್ಸರ್‌ಗೆ ಔಷಧಿ ಕಂಡುಹಿಡಿದಿರುವುದು ಆಶಾದಾಯಕ ಬೆಳವಣಿಗೆ. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಸಹಕರಿಸಬೇಕು ಎಂದರು.

ಜೀವನದ ಅವಿಭಾಜ್ಯ ಅಂಗ: ಅಧ್ಯಕ್ಷತೆ ವಹಿಸಿದ್ದ ಆಯುಷ್‌ನ ನಿವೃತ್ತ ತಾಂತ್ರಿಕ ಸಲಹೆಗಾರ ಡಾ.ಕುಮಾರಸ್ವಾಮಿ ಮಾತನಾಡಿ, ಯೋಗವು ಜೀವನದ ಅವಿಭಾಜ್ಯ ಅಂಗ. ಯೋಗ ಮತ್ತು ಆಯುರ್ವೇದದಿಂದಲೂ ರೋಗ ಗುಣಪಡಿಸಬಹುದು. ಉತ್ತಮ ಆರೋಗ್ಯಕ್ಕಾಗಿ ಪ್ರತಿನಿತ್ಯ ಯೋಗಾಭ್ಯಾಸ ಮಾಡುವಂತೆ ತಿಳಿಹೇಳಿದರು.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ, ಮೈಸೂರು ವೈದ್ಯಕೀಯ ಕಾಲೇಜು ಕ್ಯಾನ್ಸರ್ ವಿಭಾಗದ ಮುಖ್ಯಸ್ಥ ಡಾ.ಎಸ್.ಎಸ್.ಪ್ರಕಾಶ್, ಆಯುರ್ವೇದ ವೈದ್ಯ ಡಾ.ಗುರುಬಸವರಾಜು, ಡಾ.ಅರುಣಾ, ಡಾ.ಪರಶುರಾಂ, ಡಾ.ಹೆಚ್.ಎಸ್.ಶಿಲ್ಪಲತಾ, ಡಾ.ಎಂ.ಸಿ. ಶೋಭಾ, ಡಾ.ಆಂಥೋಣಿಪಾಲ್ ರಾಜ್, ಡಾ.ರಾಜೇಶ್ ಮತ್ತಿತರರಿದ್ದರು.

ಡಾ.ಪರ್ವತಮ್ ಗಿರಿಧರ್ ಸಿಎಫ್‌ಟಿಆರ್‌ಐ ನೂತನ ನಿರ್ದೇಶಕ

ಮೈಸೂರು, ಸೆ. 9 (ಆರ್‌ಕೆ)– ಮೈಸೂರಿನ ಪ್ರತಿಷ್ಠಿತ ಕೇಂದ್ರೀಯ ಆಹಾರ, ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) ಯ ನೂತನ ನಿರ್ದೇಶಕರಾಗಿ ಡಾ.ಪರ್ವತಮ್ ಗಿರಿಧರ್ ನೇಮಕಗೊಂಡಿದ್ದಾರೆ.

ನವದೆಹಲಿಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್)ಯ ಎಫ್‌ಎಸ್‌ಎಕ್ಯೂಸಿಎಲ್ ವಿಭಾಗದ ಮುಖ್ಯಸ್ಥ ಡಾ.ಪರ್ವತಮ್ ಗಿರಿಧರ್ ಅವರನ್ನು ಕೇಂದ್ರೀಯ ಆಹಾರ, ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನೂತನ ನಿರ್ದೇಶಕರಾಗಿ ನೇಮಕ ಮಾಡಿದ್ದು, ಅವರು ಸೋಮವಾರ (ಸೆ.8) ಅಧಿಕಾರ ವಹಿಸಿಕೊಂಡರು.

ಡಾ. ಪರ್ವತಮ್ ಗಿರಿಧರ್ ಅವರು ತೆಲಂಗಾಣದ ವಾರಂಗಲ್‌ನ ಕಾಕತೀಯ ವಿಶ್ವವಿದ್ಯಾನಿಲಯದಲ್ಲಿ ಎಂಎಸ್ಸಿ, ಪಿಎಚ್.ಡಿ ಪದವಿ ಪಡೆದಿದ್ದು, ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ, ಸೂಕ್ಷ್ಮಜೀವ ವಿಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಪರಿಣತರಾಗಿದ್ದಾರೆ. 1999ರಲ್ಲಿ ಮೈಸೂರಿನ ಸಿಎಸ್‌ಐಆರ್– ಸಿಎಫ್‌ಟಿಆರ್‌ಐನಲ್ಲಿ ವಿಜ್ಞಾನಿ 'ಬಿ' ಆಗಿ ವೃತ್ತಿಗೆ ಪಾದಾರ್ಪಣೆ ಮಾಡಿದ್ದು, ಬಳಿಕ ಸಂಸ್ಥೆಯಲ್ಲಿ ಪ್ರಾಧ್ಯಾಪಕರು ಸೇರಿದಂತೆ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದಾರೆ.


ಡಾ.ಪರ್ವತಮ್ ಗಿರಿಧರ್

ಅಮೇರಿಕಾದ ರಾಯಲ್ ಸೊಸೈಟಿ ಆಫ್ ಬಯಾಲಜಿ, ನ್ಯಾಷನಲ್ ಅಕಾಡೆಮಿ ಆಫ್ ಬಯೋಲಾಜಿಕಲ್ ಸೈನ್ಸಸ್, ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ಸ್, ಆಂಧ್ರಪ್ರದೇಶ ಅಕಾಡೆಮಿ ಆಫ್ ಸೈನ್ಸಸ್, ಅಕಾಡೆಮಿ ಆಫ್ ಪ್ಲಾಂಟ್ ಸೈನ್ಸಸ್, ಇಂಡಿಯನ್ ಬಟಾನಿಕ್ ಸೊಸೈಟಿ ಮತ್ತು ಸೊಸೈಟಿ ಫಾರ್ ಅಪ್ಲೈಡ್ ಬಯೋಟೆಕ್ನಾಲಜಿಯ ಫೆಲೋ ಆಗಿ ಸೇವೆ ಸಲ್ಲಿಸಿರುವ ಅವರು, ಅಲಹಾಬಾದ್‌ನ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಮತ್ತು ಪ್ಲಾಂಟ್ ಟಿಶ್ಯೂ ಕಲ್ಚರ್ ಅಸೋಸಿಯೇಷನ್ ಆಫ್ ಇಂಡಿಯಾದ ಸದಸ್ಯರಾಗಿಯೂ ಆಯ್ಕೆಯಾಗಿದ್ದರು.

ಡಾ.ಪರ್ವತಮ್ ಗಿರಿಧರ್ ಅವರಿಗೆ ಭಾರತದ ಅತ್ಯುತ್ತಮ ವಿಜ್ಞಾನಿ ಪ್ರಶಸ್ತಿ, ಅಂತರರಾಷ್ಟ್ರೀಯ ಸಸ್ಯ ವಿಜ್ಞಾನಿ ಪ್ರಶಸ್ತಿ, ಅತ್ಯುತ್ತಮ ವಿಜ್ಞಾನಿ ಪ್ರಶಸ್ತಿ, ನ್ಯಾಷನಲ್ ಅಕಾಡೆಮಿ ಆಫ್ ಬಯೋಲಾಜಿಕಲ್ ಸೈನ್ಸಸ್‌ನಿಂದ ಆಹಾರ ತಂತ್ರಜ್ಞಾನ (2015), ಭಾರತದ ಆಹಾರ ವಿಜ್ಞಾನಿಗಳು ಮತ್ತು ತಂತ್ರಜ್ಞಾನದ ಸಂಘದ ಲಾಲ್ಜಿಗೋಧೂ ಸ್ಮಾರಕ ನಿಧಿ ಪ್ರಶಸ್ತಿ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳು ಸಂದಿವೆ. ಅವರ ಹಲವು ಪ್ರಕಟಣೆಗಳು, ಪುಸ್ತಕಗಳು, ಲೇಖನಗಳು, ವಿಮರ್ಶೆಗಳು ಇಂದಿಗೂ ಆಹಾರ ಸಂಶೋಧನಾ ವಿಜ್ಞಾನ ಕ್ಷೇತ್ರದಲ್ಲಿ ಅಚ್ಚಳಿಯದೆ ಉಳಿದಿವೆ.

ಅವರು ಕೈಗೊಂಡ ಸಂಶೋಧನಾ ಯೋಜನೆಗಳನ್ನು ಆರ್ ಅಂಡ್ ಡಿ ಹಣಕಾಸು ಸಂಸ್ಥೆಗಳ ನಿರ್ದಿಷ್ಟ ನಿರೀಕ್ಷೆಗಳೊಂದಿಗೆ ವಿನ್ಯಾಸಗೊಳಿಸಲಾಗಿದೆ. ಆಹಾರ ವಿಜ್ಞಾನ, ಕೈಗಾರಿಕಾ ಅನ್ವಯಿಕೆಗಳು ಮತ್ತು ಸಸ್ಯ ಜೈವಿಕ ತಂತ್ರಜ್ಞಾನ ಕ್ಷೇತ್ರಗಳಿಗೆ ಡಾ.ಗಿರಿಧರ್‌ರವರ ಕೊಡುಗೆಗಳು ಗಮನಾರ್ಹವಾಗಿವೆ. ಅವರ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯವು ಸಸ್ಯ ವಿಜ್ಞಾನಿಗಳಿಗೆ ಅದರಲ್ಲೂ ಜೀವರಸಾಯನಶಾಸ್ತ್ರ ಜೀನೋಮಿಕ್ಸ್, ಅಂಗಾಂಶ ಕೃಷಿ ವಿಜ್ಞಾನಿಗಳಿಗೆ ಪೂರಕವಾಗಿದೆ.



ಹುಟ್ಟುಹಬ್ಬದ ಶುಭಾಶಯ...
ಮಾಜಿ ಕಾರ್ಪೊರೇಟರ್ ಹಾಗೂ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್ ಅವರ ಹುಟ್ಟುಹಬ್ಬಕ್ಕೆ ಉದ್ಯಮಿ, ಸಮಾಜ ಸೇವಕ ಎಸ್.ಶ್ರೀಕಾಂತ್ ಮೈಸೂರು ಪೇಟ, ಶಾಲು ಹೊದಿಸಿ, ಸನ್ಮಾನಿಸಿ, ಶುಭಾಶಯ ಕೋರಿದರು. ಜೆಡಿಎಸ್ ಮುಖಂಡರಾದ ಎಂ.ರಾಘವೇಂದ್ರ ಜಯಪುರ, ರಂಗಸ್ವಾಮಿ, ಕೋಣನೂರು ಶಿವಕುಮಾರ್ ಈ ವೇಳೆ ಉಪಸ್ಥಿತರಿದ್ದರು.

ದಿ ಮೈಸೂರು ಕ್ಲಬ್ ಅಧ್ಯಕ್ಷರಾಗಿ ಆರ್.ಲಿಂಗಪ್ಪ ಪುನರಾಯ್ಕೆ


ದಿ ಮೈಸೂರು ಕ್ಲಬ್‌ನ 2025–27ನೇ ಸಾಲಿನ ನೂತನ ಪದಾಧಿಕಾರಿಗಳು.

ಮೈಸೂರು, ಸೆ.9(ಜಿಎ)–ಮೈಸೂರಿನ ಕುವೆಂಪುನಗರದಲ್ಲಿರುವ ಪ್ರತಿಷ್ಠಿತ ದಿ. ಮೈಸೂರು ಕ್ಲಬ್‌ನ 2025–27ನೇ ಸಾಲಿನ ನೂತನ ಅಧ್ಯಕ್ಷರಾಗಿ ಮಾಜಿ ಮೇಯರ್ ಆರ್.ಲಿಂಗಪ್ಪ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಕ್ಲಬ್‌ನ 2025–27ನೇ ಸಾಲಿನ ಪದಾಧಿಕಾರಿಗಳ ಆಯ್ಕೆಗಾಗಿ ಸೆ.7ರಂದು ನಡೆದ ಚುನಾವಣೆಯಲ್ಲಿ ಆಡಳಿತ ಮಂಡಳಿಯ 12 ಸ್ಥಾನಕ್ಕೆ ಒಟ್ಟು 24 ಮಂದಿ ನಾಮಪತ್ರ ಸಲ್ಲಿಸಿದ್ದರು. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಂದು, ಕಾರ್ಯದರ್ಶಿ ಸ್ಥಾನಕ್ಕೆ 2, ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ 3, ಖಜಾಂಚಿ ಸ್ಥಾನಕ್ಕೆ 3 ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರ ಸ್ಥಾನಕ್ಕೆ 14 ಮಂದಿ ನಾಮಪತ್ರ ಸಲ್ಲಿಸಿದ್ದರು. ಆದರೆ ಕೊನೇ ಗಳಿಗೆಯಲ್ಲಿ 12 ಮಂದಿ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಂಡ ಪರಿಣಾಮ ಆರ್.ಲಿಂಗಪ್ಪ ಸೇರಿದಂತೆ ಒಟ್ಟು 12 ಮಂದಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷರಾಗಿ ಆರ್.ಲಿಂಗಪ್ಪ, ಉಪಾಧ್ಯಕ್ಷರಾಗಿ ಪಿ.ನಾಗೇಂದ್ರ, ಕಾರ್ಯದರ್ಶಿಯಾಗಿ ಡಾ.ರಂಗಸ್ವಾಮಿ, ಜಂಟಿ ಕಾರ್ಯದರ್ಶಿಯಾಗಿ ಎಸ್.ಬಸವರಾಜು, ಖಜಾಂಚಿಯಾಗಿ ಶಿವಪ್ರಸಾದ್ ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಎಲ್.ಭಾಸ್ಕರ್, ಎಸ್.ಗಿರೀಶ್, ಎಸ್.ಎನ್. ರಮೇಶ್‌ಬಾಬು, ಕೆ.ಶೈಲಕುಮಾರ್, ಜಿ.ಕುಮಾರ್‌ಗೌಡ, ಗಣೇಶ್ ಎಂ. ಮತ್ತು ಎಸ್.ಎಂ.ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾದರು ಎಂದು ಕ್ಲಬಿನ ವ್ಯವಸ್ಥಾಪಕ ಪುಟ್ಟಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.09.2025 ಬುಧವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತೂಲಾ/ಭಗಂದರ, ನಾಡಿವ್ರಣ, ಫಿಸರ್ ಮತ್ತು ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ನರುಳಿ ಮತ್ತು ಸೊಂಟನೋವಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಸಾಮಾಜಿಕ ನ್ಯಾಯಪರ ವೇದಿಕೆ :** ಒಳಮೀಸಲಾತಿಯ ಒಳಸುಳಿಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಮಾಜಿ ಸಚಿವ ಕೋಟೆ ಎಂ. ಶಿವಣ್ಣ, ಮುಖ್ಯ ಅತಿಥಿಗಳು : ಡಾ. ರಮೇಶ್ ಜೇವೂರು, ವಕೀಲ ವಿ. ಪ್ರಕಾಶ, ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕ ಕುಮಾರ ರಾಮ, ಅಧ್ಯಕ್ಷತೆ: ಚಿಂತಕ ಅರಕಲವಾಡಿ ನಾಗೇಂದ್ರ, ಪ್ರಾಸ್ತಾವಿಕ ನುಡಿ : ಡಾ. ಮರಡೀಪುರ ರವಿಕುಮಾರ್, ಉಪಸ್ಥಿತರು : ಬಿ.ಆರ್. ಭಾಸ್ಕರ್ ಪ್ರಸಾದ್, ಕೋಡಿಹಳ್ಳಿ ಸಂತೋಷ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಶಾರದಾ ಫಾರ್ಮಸಿ ಕಾಲೇಜು :** ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿ, ಮುಖ್ಯ ಅತಿಥಿಗಳು : ಡಾ. ಜಿ.ಪಿ. ರಾಮನಾಥ್, ಗೌರವ ಅತಿಥಿಗಳು : ಕಾಲೇಜು ಕಾರ್ಯದರ್ಶಿ ಆರ್. ನರಸಿಂಹ, ಡಾ. ಎಸ್.ಎಂ. ಸುರೇಶ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ, ಸ್ಥಳ: ಶಾರದಾ ವಿಲಾಸ ಕಾಲೇಜು ಮೈದಾನ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ಶಿಕ್ಷಕರ ಸೇವಾ ರತ್ನ, ಉತ್ತಮ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದನಾ ನುಡಿ : ಟಿ.ಎಸ್. ಪ್ರಭುಸ್ವಾಮಿ, ಸ್ಥಳ: ಶ್ರೀಕಾಂತ ಬಾಲಿಕಾ ಪ್ರೌಢಶಾಲೆ, ಬೆಳಗ್ಗೆ 10.30ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು, ಲಯನ್ಸ್ ಬ್ಲಡ್ ಸೆಂಟರ್ :** ರಕ್ತದಾನ ಶಿಬಿರ, ಉದ್ಘಾಟನೆ : ಕಾಲೇಜು ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು : ಜೀವಧಾರ ಬ್ಲಡ್ ಬ್ಯಾಂಕ್‌ನ ಡಾ. ಭಾರತಿ, ಎಸ್.ಇ. ಗಿರೀಶ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಉಪಸ್ಥಿತರು : ಕಾಲೇಜು ಡೀನ್ ಡಾ. ಟಿ. ರಮೇಶ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.45ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ 110ನೇ ಜಯಂತಿ, ನುಡಿ ನಮನ : ಮಾಜಿ ವಿಧಾನಪರಿಷತ್ ಸದಸ್ಯ ತೋಂಟದಾರ್ಯ, ಮುಖ್ಯ ಅತಿಥಿಗಳು : ವಿ. ಮಲ್ಲಿಕಾರ್ಜುನಸ್ವಾಮಿ ದುಗ್ಗಟ್ಟಿ, ಅಧ್ಯಕ್ಷತೆ : ಮಹಿಳಾ ವಸತಿ ನಿಲಯಗಳ ಮುಖ್ಯ ನಿಲಯಪಾಲಕರಾದ ಶ್ರೀಮತಿ ಮಮತ ಸುರೇಶ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಬೆಳಗ್ಗೆ 11ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ :** ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ, ಉದ್ಘಾಟನೆ: ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್, ಅಧ್ಯಕ್ಷತೆ: ಸಾಹಿತಿ ಪ್ರೊ.ಹಿ.ಶಿ.ರಾಮಚಂದ್ರೇಗೌಡ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಗೌತಮ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 11ಕ್ಕೆ.

■ **ಕೆಎಸ್‌ಆರ್‌ಟಿಸಿ ಒಕ್ಕಲಿಗ ನೌಕರರ ಕ್ಷೇಮಾಭಿವೃದ್ಧಿ ಸಂಘ :** ತ್ರಿರತ್ನ ಜಯಂತ್ಯುತ್ಸವ, ಸಾನ್ನಿಧ್ಯ : ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉದ್ಘಾಟನೆ : ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಚಿವ ಕೆ. ವೆಂಕಟೇಶ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಶ್ರೀನಿವಾಸ್ (ವಾಸಣ್ಣ), ಉಪಸ್ಥಿತರು : ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ, ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ ಅನಿಲ್ ಚಿಕ್ಕಮಾದು, ಡಿ. ರವಿಶಂಕರ್, ಜಿ.ಡಿ. ಹರೀಶ್‌ಗೌಡ, ಡಾ. ಯತೀಂದ್ರ ಸಿದ್ದರಾಮಯ್ಯ, ಸ್ಥಳ:ಜಗನ್ಮೋಹನ ಅರಮನೆ, ಮಧ್ಯಾಹ್ನ 3ಕ್ಕೆ

■ **ಸಂಗೀತ ಪ್ರಿಯರ ಬಳಗ :** ರಾಜ್ ವಿಷ್ಣು ಅನಂತ ಗಾಯನ ಕನ್ನಡ ಚಿತ್ರಗೀತೆಗಳ ಕರೋಕೆ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸಂಸ್ಕೃತಿ ಬುಕ್ ಏಜೆನ್ಸೀಸ್:** ರಾಷ್ಟ್ರೀಯ ಒಂದು ಪುಸ್ತಕ ಓದು ದಿನದ ಅಂಗವಾಗಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಪ್ರೊ.ಎಂ.ಕೃಷ್ಣೇಗೌಡ, ಪ್ರಾಸ್ತಾವಿಕ ನುಡಿ: ಲೇಖಕ ಸಂಸ್ಕೃತಿ ಸುಬ್ರಹ್ಮಣ್ಯ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು– ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40 ಮೈಸೂರು ಆಕಾಶವಾಣಿ–90 ವಸಂತಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮ ವಿಭಾಗದ ಸಹಾಯಕ ನಿರ್ದೇಶಕರಾದ ಟಿ.ವಿ.ವಿದ್ಯಾಶಂಕರ್ ಅವರಿಂದ ಸಂದೇಶ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ವೃತ್ತಿ ಮಾರ್ಗದರ್ಶನ, 10.00 ಮೈಸೂರು ಆಕಾಶವಾಣಿಗೆ–90 ಯುವ ಸಂಭ್ರಮ, ಪ್ರಸ್ತುತಿ–ದಿಗ್ವಿಜಯ್ ಬಿ, ನೆರವು–ವಿ.ಕೀರ್ತನಾ, ಸಹನಾ ಮತ್ತು ಚಿನ್ಮಯಿ, 11.00 ಮೈಸೂರು ಆಕಾಶವಾಣಿಗೆ–90 ಬಾನುಲಿ ಕೃಷಿ ಬೆಳಗು, ಪ್ರಸ್ತುತಿ–ಎನ್. ಕೇಶವ ಮೂರ್ತಿ, ನೆರವು–ಆರ್.ಲೋಕೇಶ್ವರಿ, ಜಿ.ಎನ್.ಮಂಜುನಾಥ್ ಮತ್ತು ಎಸ್. ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ– ಬಸವನಹಳ್ಳಿ ತಂಬೂರಿ ದೊಡ್ಡರಾಚಪ್ಪ ಮತ್ತು ಸಂಗಡಿಗರಿಂದ ಶಿವಶರಣೆ ಸಂಕಮ್ಮನ ಸಾಲು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾ ರಂಗ, ಸಾಧನಾ ಶಿಖರ–ಹಿರಿಯ ಹಿನ್ನಲೆ ಗಾಯಕಿ ಇಂದುಮತಿ ಜಯಪಾಲ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್ .ಬಿ., 4.30 ಮೈಸೂರು ಆಕಾಶವಾಣಿ 90 ಸಂಗೀತ ಸಂಭ್ರಮ, ಪ್ರಸ್ತುತಿ–ಡಾ. ಮೈಸೂರು ಉಮೇಶ್ ಮತ್ತು ಹೆಚ್. ಎಲ್. ಶಿವಶಂಕರಸ್ವಾಮಿ ನೆರವು–ನಿತಿನ್ ರಾಜಾರಾಂ ಶಾಸ್ತ್ರೀ, ಶಭಾನಾ ಮತ್ತು ಕೀರ್ತಿ, 6.50 ಕೃಷಿರಂಗ–ಹಲೋ ಕೃಷಿರಂಗ –ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು ಕೃಷಿ ಇಲಾಖೆ ಕರ್ನಾಟಕ ಸರ್ಕಾರ, ವಿಷಯ–ಸೂಕ್ಷ್ಮ ನೀರಾವರಿ ಯೋಜನೆ. ಭಾಗವಹಿಸುತ್ತಾರೆ–ಜಂಟಿ ಕೃಷಿ ನಿರ್ದೇಶಕ ಶಿವಕುಮಾರ್, 7.20 ಬಾನುಲಿ ಬೇಸಾಯ, ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ–ಆರ್.ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು–ಕೃಷಿ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಚಾಮರಾಜನಗರ ತಾಲೂಕು ನಾಗವಳ್ಳಿಯ ಸೈಯ್ಯದ್ ನಾಸಿರ್ ಅಹಮದ್ ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ–ಎನ್.ಕೇಶವಮೂರ್ತಿ, 9.30 ಕ್ರೀಡಾ ಲೋಕ, 10.00 ಚಲನಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರೊಂದಿಗೆ ಆತ್ಮೀಯ ಸಂವಾದ ಭಾಗವಹಿಸುತ್ತಾರೆ–ಜಿ.ಶಾಂತಕುಮಾರ್ ಹಾಗೂ ಶ್ರೀಮಾನ್ .ಎಸ್., 10.30 ಸವಿನೆನಪು

ನಕ್ಕರೆ ಅದೇ ಸ್ವರ್ಗ

ಅಪ್ಪ : ಯಾಕೋ ಶಾಲೆಗೆ ಹೋಗಿಲ್ಲ?

ಮಗ : ನಿನ್ನೆ ನಮ್ಮನ್ನೆಲ್ಲಾ ತೂಕ ಮಾಡಿದ್ದಾರೆ. ಇವತ್ತು ಮಾರಿ ಬಿಡ್ತಾರೇನೋ ಅಂತ ಹೋಗಿಲ್ಲ...!

ಮೈಸೂರು ಮಿತ್ರ

ಬುಧವಾರ, 10 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನನ್ನವರು ಅಂತ ನನಗೆ ಯಾರು ಇಲ್ಲ ಅನ್ನೋ ಭಾವನೆ ಮನದಲ್ಲಿ ಬಂದಾಗ ನನಗೆ ನಾನೇ ಎಲ್ಲ ಅನ್ನೋ ಆತ್ಮಸಾಕ್ಷಿ ಪ್ರಬಲವಾಗಬೇಕೇ ಹೊರತು ನನಗಾರು ಇಲ್ಲ ಎನ್ನುವ ಚಿಂತೆ ನಮ್ಮನ್ನು ಅತಿಯಾಗಿ ಕಾಡಬಾರದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಕ್ಕು ಕಣ್ಮುಚ್ಚಿ ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗಲ್ವಾ?

ನಿಮ್ಮ ಪತ್ರಗಳು

ಒಳಚರಂಡಿ ನೀರಿನ ಕೆರೆ ಇದು!

ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಬಡಾವಣೆಯಾದ ಕುವೆಂಪುನಗರದ ಆದಿಚುಂಚನಗಿರಿ



ಮುಖ್ಯ ರಸ್ತೆಯ ಬನಶಂಕರಿ ದೇವಸ್ಥಾನ ಮತ್ತು ಮಹದೇಶ್ವರ ದೇವಸ್ಥಾನದ ಸರ್ಕಲ್, ಇಲ್ಲಿ ಕಳೆದ ಎರಡು ದಿನಗಳಿಂದ ಒಳಚರಂಡಿ ನೀರು ಉಕ್ಕಿ ಹರಿದು ಮುಖ್ಯರಸ್ತೆ ಕೆರೆಯಂತಾಗಿದೆ.

ಈ ರಸ್ತೆಯಲ್ಲಿ ಜನರು ಈ ದುರ್ನಾತದ ನಡುವೆ ಓಡಾಡುವಂತಾಗಿದೆ. ಅಲ್ಲದೆ ಈ ಮುಖ್ಯ ರಸ್ತೆಯಲ್ಲಿ ವಾಸಿಸುವ ಜನರಂತೂ ಈ ಕೆಟ್ಟ ವಾಸನೆಯಿಂದ ಚಿತ್ರಹಿಂಸೆಗೊಳಗಾಗಿದ್ದಾರೆ. ಹದಿನೈದು ದಿನಗಳಿಗೊಮ್ಮೆ ಈ ಸಮಸ್ಯೆ ಎದುರಾಗುತ್ತಿದೆ. ಕಳೆದ ಒಂದು ವರ್ಷದಿಂದ ಇಲ್ಲಿನ ಜನರು ಈ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಬಗ್ಗೆ ದೂರು ನೀಡಿದಾಗ, ಅಧಿಕಾರಿಗಳು ಬಂದು ಕಾಟಾಚಾರಕ್ಕೆ ದುರಸ್ತಿಗೊಳಿಸಿ ಬಿಲ್ ಅನ್ನು ಸಹ ಮಾಡಿಕೊಂಡಿದ್ದಾರೆ. ಆದರೆ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಿಲ್ಲ. ನಗರಪಾಲಿಕೆ ಆಯುಕ್ತರು ಮತ್ತು ಜನಪ್ರತಿನಿಧಿಗಳು ಖುದ್ದು ಪರಿಶೀಲಿಸಿ, ಇದಕ್ಕೆ ಶಾಶ್ವತ ಪರಿಹಾರ ನೀಡಬೇಕಾಗಿ ವಿನಂತಿ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ನಿಜವಾದ ಕಸದವರು ಯಾರು?

ಮಾನ್ಯರೇ





ನಮ್ಮ ಬೀದಿಗಳನ್ನು, ನಗರಗಳನ್ನು ಸ್ವಚ್ಛವಾಗಿಡಲು ಮಳೆ, ಚಳಿ, ಶೀತಗಾಳಿ ಇವುಗಳನ್ನು ಲೆಕ್ಕಿಸದೆ, ಬೆಳ್ಳಂಬೆಳಿಗ್ಗೆ ಮನೆ ಹತ್ತಿರ ಬರುವ ಪೌರ ಕಾರ್ಮಿಕರನ್ನು ನಾವುಗಳು, 'ಕಸದವರು' ಎಂದು ಕರೆಯುತ್ತೇವೆ. ಆದರೆ, ನಿಜವಾಗಿಯೂ ಕಸದವರು ಯಾರು? ಕಸವನ್ನು ರಸ್ತೆ ಮೇಲೆ, ಮೋರಿಯಲ್ಲಿ, ಎಲ್ಲೆಂದರಲ್ಲಿ ಎಸೆದು, ಸುತ್ತಮುತ್ತಲಿನ ಪರಿಸರವನ್ನು ಕೊಳಕು ಮಾಡುವ ನಾವುಗಳು ನಿಜವಾದ ಕಸದವರು. ಆ ಕಸವನ್ನು ಎತ್ತಿ, ನಮ್ಮ ನಗರವನ್ನು ಸ್ವಚ್ಛವಾಗಿ, ಸುಂದರವಾಗಿಡಲು ತಮ್ಮ ಆರೋಗ್ಯವನ್ನೇ ಪಣಕ್ಕಿಟ್ಟು ದುಡಿಯುವವರು ಈ ಪೌರಕಾರ್ಮಿಕರು. ಹಾಗಾಗಿ, ಅವರನ್ನು 'ಕಸದವರು' ಎಂದು ಕರೆಯುವುದು ಅವರಿಗೆ ನಾವು ಮಾಡುವ ದೊಡ್ಡ ಅಪಮಾನ. ಬದಲಾಗಿ ನಾವು ಅವರನ್ನು 'ಸ್ವಚ್ಛತಾಗಾರರು' ಎಂದು ಕರೆಯಬೇಕು. ಹಾಗೆಯೇ, ನಾಗರಿಕರಾದ ನಾವು ಅನಾಗರಿಕರ ರೀತಿ ಕಸವನ್ನು ಎಲ್ಲೆಂದರಲ್ಲಿ ಎಸೆಯದೆ, ಸೂಕ್ತವಾಗಿ ಕಸ ವಿಲೇವಾರಿ ಮಾಡಲು ಅವರಿಗೆ ಸಹಕರಿಸಬೇಕು.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ವಿಷ್ಣುವರ್ಧನ್, ಬಿ.ಸರೋಜಾದೇವಿ 'ಕರ್ನಾಟಕ ರತ್ನ' ಪ್ರಶಸ್ತಿಗೆ ಅರ್ಹರು

ಮಾನ್ಯರೆ,





ಕನ್ನಡ ಚಿತ್ರರಂಗದ ಪ್ರಖ್ಯಾತ ನಾಯಕ ನಟ ದಿವಂಗತ ಡಾ. ವಿಷ್ಣುವರ್ಧನ್ ಹಾಗೂ ಕೆಲವು ತಿಂಗಳ ಹಿಂದೆ ನಿಧನರಾದ ಹಿರಿಯ ನಟಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ. ಬಿ.ಸರೋಜಾದೇವಿಯವರಿಗೆ ರಾಜ್ಯದ ಅತ್ಯಂತ ಪ್ರತಿಷ್ಠಿತ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಬೇಕೆಂದು ಹಿರಿಯ ನಟಿಯರಾದ ಶ್ರೀಮತಿ ಜಯಮಾಲ, ಶೃತಿ ಹಾಗೂ ಮಾಳವಿಕ ಅವಿನಾಶ್ ಅವರು ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಅಂದರೆ ಇದೇ ತಿಂಗಳ ಸೆಪ್ಟೆಂಬರ್ 18ರಂದು ಡಾ.ವಿಷ್ಣುವರ್ಧನ್ ಅವರ 75ನೇ ಜನ್ಮ ದಿನೋತ್ಸವವನ್ನು ಅವರ ಕುಟುಂಬ ವರ್ಗ ಹಾಗೂ ಅಸಂಖ್ಯಾತ ಅಭಿಮಾನಿಗಳು ಆಚರಿಸಲಿದ್ದಾರೆ. ಆ ಸಂದರ್ಭದಲ್ಲಿ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಣೆಯಾದರೆ ಅವರ ಕುಟುಂಬ ವರ್ಗ ಹಾಗೂ ಅಭಿಮಾನಿಗಳಿಗೆ ಅತ್ಯಂತ ಸಂತೋಷ ಉಂಟಾಗುತ್ತದೆ. ವಿಷ್ಣುವರ್ಧನ್ ಅವರ ಆತ್ಮ ಕೂಡ ಎಲ್ಲೋ ಒಂದು ಕಡೆ ಸಂಭ್ರಮಿಸಬಹುದು. ಅದೇ ರೀತಿ 'ಕಿತ್ತೂರು ಚೆನ್ನಮ್ಮ' ಎಂದೇ ರಾಜ್ಯಾದ್ಯಂತ ಪ್ರಸಿದ್ಧಿಯಾಗಿದ್ದ ಚತುರ್ಭಾಷಾ ನಟಿ ಬಿ.ಸರೋಜಾದೇವಿಯವರು ಕೂಡ ಕನ್ನಡ ಚಿತ್ರರಂಗಕ್ಕೆ ಸಲ್ಲಿಸಿರುವ ಕಲಾ ಸೇವೆ ಅದ್ವಿತೀಯವಾದದ್ದು, ಸುಮಾರು 5 ದಶಕಗಳ ಕಾಲ ಕನ್ನಡ, ತಮಿಳು, ತೆಲುಗು, ಹಿಂದಿ ಮುಂತಾದ ಭಾಷೆಗಳ ಚಿತ್ರಗಳಲ್ಲಿ ಅಭಿನಯಿಸಿದ್ದ ಈ ಹಿರಿಯ ನಟಿ, ನೆಲ, ಜಲದ ಸೊಂಕಿಲ್ಲದೆ ಭಾರತೀಯ ಚಿತ್ರರಂಗದಲ್ಲಿ ತಮ್ಮ ಚಿರಸ್ಮರಣೀಯ ಅಭಿನಯದ ಮೂಲಕ ಲಕ್ಷಾಂತರ ಅಭಿಮಾನಿಗಳ ಪ್ರೀತಿಗೆ ಭಾಜನರಾಗಿದ್ದಾರೆ. ಇವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆಯಾದರೆ, ರಾಜ್ಯದಲ್ಲಿ ಪ್ರಥಮ ಬಾರಿಗೆ ಓರ್ವ ಮಹಿಳೆಗೆ ಈ ಗೌರವ ಸಂದಂತಾಗುತ್ತದೆ. ತಮ್ಮ ಮನವಿಯನ್ನು ಸಕಾರಾತ್ಮಕವಾಗಿ ಪರಿಗಣಿಸಲಾಗುವುದೆಂಬ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ ಎಂದು ಸ್ವತಃ ಆ ನಟಿಯರೇ ಮಾಧ್ಯಮ ಮಿತ್ರರೊಂದಿಗೆ ಹೇಳಿಕೊಂಡಿದ್ದಾರೆ. ಈ ಈರ್ವರೂ ಮಹಾನ್ ಹಿರಿಯ ನಟ, ನಟಿಯರು ಪ್ರಶಸ್ತಿಗೆ ಅತ್ಯಂತ ಸೂಕ್ತ ಆಯ್ಕೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಕರುಣೆ ಧರ್ಮದ ಕಣ್ಣು

'ಕೃಪಾ ದಯಾನುಕಂಪಾ ಸ್ಯಾತ್ ಕಾರುಣ್ಯಂ ಕರುಣಾ ಘೃಣಾ' ಎಂದು ಅಮರಕೋಶವು ಹೇಳುತ್ತದೆ. ಕೃಪೆ, ದಯೆ, ಅನುಕಂಪ, ಕಾರುಣ್ಯ, ಕರುಣೆ, ಘೃಣೆ ಇವೆಲ್ಲ ಪರ್ಯಾಯ ಪದಗಳು. ಕರುಣೆ ಎಂಬುದು ಇರುವುದರಿಂದ ಲೋಕದಲ್ಲಿ ಬದುಕು ಸಹನೀಯವಾಗಿದೆ. ಮಾನವ ಪ್ರಪಂಚದಲ್ಲಿ ಧರ್ಮ ಎಂಬುವುದು ಇದ್ದರೆ ಅದಕ್ಕೆ ಕಾರಣ ಕರುಣೆಯೇ. ದಯೆಯಿಲ್ಲದ ಧರ್ಮ ಅದಾವುದಯ್ಯ ಎಂದರು ಬಸವಣ್ಣನವರು. ಇದನ್ನು ಮುದ್ದುರಾಮ ಎಷ್ಟು ಚೆನ್ನಾಗಿ ನಿರೂಪಿಸಿದ್ದಾನೆ ನೋಡಿ–

ಬುದ್ಧಿಗನುಗುಣವಾದ ತತ್ತ್ವ ಏನೇ ಇರಲಿ
ದಯೆಯಿರದ ಆ ತತ್ತ್ವ ಜಲವಿರದ ಕಡಲು
ಅನುಕಂಪ ಸೊರಗಿದರೆ ಜೀವಹದವೆಲ್ಲಿದೆಯೊ?
ಕರುಣೆ ಧರ್ಮದ ಕಣ್ಣು ಮುದ್ದುರಾಮ.

ಬುದ್ಧಿಗೆ ಅನುಗುಣವಾಗಿ ದಾರ್ಶನಿಕರು ಧರ್ಮದ ತತ್ತ್ವವನ್ನು ಅನೇಕ ವಿಧವಾಗಿ ಹೇಳಬಹುದು. ವೇದೋಕ್ತವಾದ ಯಜ್ಞಗಳನ್ನು ಮಾಡುವುದೇ ಧರ್ಮವೆಂದು ಕೆಲವರೂ, ದೇವಾಲಯದಲ್ಲಿರುವ ಭಗವಂತನ ಸೇವೆಯೇ ಧರ್ಮ ಎಂದು ಹಲವರೂ, ಸಮಾಜ ಸೇವೆಯೇ ಧರ್ಮವೆಂದು ಮತ್ತಿತರರೂ ಹೇಳುವುದುಂಟು. ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ ಮಹಾಜನೋ ಯೇನ ಗತಃ ಸ ಪಂಥಾಃ (ಧರ್ಮದ ತತ್ತ್ವ ರಹಸ್ಯ, ಅದು ಗುಹೆಯಲ್ಲಿದ್ದಂತೆ ನಮಗೆ ಗೋಚರಿಸದು, ಹೆಚ್ಚು ಜನರು ಯಾವ ದಾರಿಯಲ್ಲಿ ಹೋಗುವರೋ ಅದೇ ಧರ್ಮಮಾರ್ಗ) ಎನ್ನುವವರೂ ಇದ್ದಾರೆ ಅದು ಏನೇ ಇರಲಿ, ಚಿಂತೆಯಿಲ್ಲ. ಅದರಲ್ಲಿ ದಯೆ ಪ್ರಮುಖವಾಗಿರಬೇಕು. ಅಪರಾಧವನ್ನು ಕ್ಷಮಿಸುವ ಭಾವನೆಯಿರಬೇಕು. ದಯೆ ಇಲ್ಲದ ಧರ್ಮತತ್ತ್ವ ನೀರಿಲ್ಲದ ಸಮುದ್ರದಂತೆ ಅರ್ಥಹೀನ. ಅನುಕಂಪ ಎಂಬ ಶಬ್ದ ಎಷ್ಟು ಚೆನ್ನ ನೋಡಿ. ಕಷ್ಟದಲ್ಲಿರುವವರನ್ನು ನೋಡಿದಾಗ ಹೃದಯ ಮಿಡಿಯಬೇಕು. ಅನುಸರಿಸಿ ಕಂಪಿಸುವುದು, ಸ್ಪಂದಿಸುವುದು ಅನುಕಂಪ. ಅದು ಸೊರಗಿದರೆ, ಕೃಶವಾದರೆ, ಜೀವದ ಹದವೇ ಇರುವುದಿಲ್ಲ.

Mercy blesses him that gives and him that takes ಎಂದು ಮಹಾಕವಿ ವಚನ. ಕೃಪೆಯನ್ನು ತೋರಿಸಿದವನೂ, ಅದನ್ನು ಸ್ವೀಕರಿಸಿದವನೂ ಉದ್ಧಾರವಾಗುತ್ತಾರೆ. ಮುದ್ದುರಾಮನ ಈ ವಚನ ಎಲ್ಲರ ಹೃದಯದಲ್ಲಿರಬೇಕು. ಕರುಣೆ, ಒಲವು, ಕಾಳಜಿ ಇವು ಮನುಷ್ಯರಲ್ಲಿ ಮಾತ್ರವಲ್ಲ, ಪ್ರಾಣಿಗಳಲ್ಲೂ ಇವೆಯೆನ್ನುತ್ತಾನೆ ಮುದ್ದುರಾಮ.

ತನ್ನ ಕರುಳಿನ ಕೊಂಡಿ ಮುದ್ದು ಕಂದನ ಕುರಿತು
ಎನಿತು ಕಾಳಜಿ ಮನದಿ ಪ್ರಾಣಿ ಸಂಕುಲದಿ ।
ಒಳಿತ ತೂರುವ ಮನಸು ಅನುಕಂಪೆ ಸಿರಿಗಡಲು
ದಯೆ ಜೀವಲಕ್ಷಣವೊ ಮುದ್ದುರಾಮ.

ಯಾವುದೇ ಪ್ರಾಣಿಯನ್ನು ಉದಾಹರಣೆಯಾಗಿ ತೆಗೆದುಕೊಂಡರೂ ಅದಕ್ಕೆ ತನ್ನ ಸಂತತಿಯಲ್ಲಿ ಮಮತೆ, ರಕ್ಷಿಸಬೇಕೆಂಬ ಬಯಕೆ, ಪೋಷಿಸುವ ಕಾಳಜಿ ಇರುವುದನ್ನು ಕಾಣುತ್ತೇವೆ. ನಾವು ಕ್ರೂರವೆಂದು ಪರಿಗಣಿಸುವ ಹುಲಿಯೂ ತನ್ನ ಮರಿಗಳ ಬಗೆಗೆ ಅತ್ಯಂತ ಕಳಕಳಿಯನ್ನು ತೋರಿಸುತ್ತದೆ. ಪಾಣಿನೀಯ ಶಿಕ್ಷಾ ಎಂಬ ಗ್ರಂಥದಲ್ಲಿ ಒಂದು ಮಾತಿದೆ–

ವ್ಯಾಘ್ರೀ ಯಥಾ ಹರೇದ್ ಪುತ್ರಾನ್ ದಂಷ್ಟ್ರಾಭ್ಯಾಂನ ಚ ಪೀಡಯೇತ್ ।
ಭೀತಾ ಪತನಭೇದಾಭ್ಯಾಂ ತದ್ವದ್ ವರ್ಣಾನ್ ಪ್ರಯೋಜಯೇತ್ ॥

ಹೆಣ್ಣು ಹುಲಿ ತನ್ನ ಎಳೆಯ ಮರಿಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತನ್ನ ದಾಡೆಗಳಿಂದ ಹಿಡಿದುಕೊಂಡು ಒಯ್ಯುತ್ತದೆ. ಆದರೆ ಮರಿಗಳಿಗೆ ನೋವು ಆಗದಂತೆ ಒಯ್ಯುತ್ತದೆ. ಅವು ಕೆಳಕ್ಕೆ ಬೀಳಬಾರದು, ಅವುಗಳ ಎಳೆಯ ಚರ್ಮ ತನ್ನ ಹಲ್ಲಿನಿಂದ ಹರಿಯಬಾರದು ಎಂಬ ಕಾಳಜಿ ಅದಕ್ಕೆ ಸದಾ ಇರುತ್ತದೆ ಎಂಬುದನ್ನು ಅಲ್ಲಿ ಹೇಳಿದ್ದಾರೆ.

ಎಲ್ಲ ಪ್ರಾಣಿಗಳಲ್ಲಿ ತನ್ನ ಹಿಂಡಿನ ಅಥವಾ ಗುಂಪಿನ ಕ್ಷೇಮದ ಬಗೆಗೂ ಇಂತಹ ಕಾಳಜಿ ಇರುವುದನ್ನು ಕಾಣುತ್ತೇವೆ. ಒಳಿತನ್ನು ಮಾಡಬೇಕು, ಇತರರ ಕ್ಷೇಮವನ್ನು ಸಾಧಿಸಬೇಕು ಎಂಬ ಮನಸ್ಸು ಯಾರಿಗಿದೆಯೋ ಅವರ ಮನಸ್ಸೇ ಒಂದು ಪಾಲ್ಗಡಲು, ಅದು ನಿಜವಾಗಿ ಕರುಣೆಯ ಕಡಲು. ಪ್ರತಿಯೊಂದು ಜೀವದ ಲಕ್ಷಣವೇ ದಯೆ ಎನ್ನುತ್ತಿದ್ದಾನೆ ಮುದ್ದುರಾಮ. ಆದ್ದರಿಂದ ದಯೆಯಿಲ್ಲದ ಮನುಷ್ಯ ಜೀವನೇ ಅಲ್ಲ ಎಂದಿದರ ಭಾವ.

ಭಗವಂತನ ಗುಣಗಳಲ್ಲಿ ಅತ್ಯಂತ ಮುಖ್ಯವಾದುದು ದಯೆ. ನಮ್ಮ ದೋಷಗಳನ್ನು ಅಪರಾಧಗಳನ್ನು, ಪಾಪಗಳನ್ನೂ ಕ್ಷಮಿಸಿ ದೇವರು ನಮ್ಮನ್ನು ಕಾಪಾಡಬೇಕು. ದಯೆಯು ಭಗವಂತನಲ್ಲಿ ಇಲ್ಲದಿದ್ದರೆ ಯಾರಿಗೂ ಮೋಕ್ಷದ ಸಾಧ್ಯತೆಯೇ ಇರುತ್ತಿರಲಿಲ್ಲ. ವೇದಾಂತ ದೇಶಿಕರು ಭಗವಾನ್ ನಾರಾಯಣನ ದಯೆಯನ್ನು ವರ್ಣಿಸಲು ದಯಾಶತಕವನ್ನೇ ರಚಿಸಿದ್ದಾರೆ.

ಕರುಣೆ ಮಾನವರಲ್ಲಿರುವ ದೇವಾಂಶದ ಲಕ್ಷಣ. ಕರುಣೆ ಇದ್ದವರೇ ಶ್ರೀಮಂತರು. ಅವರು ರೇಷ್ಮೆ ಬಟ್ಟೆಗಳನ್ನಾದರೂ ಧರಿಸಿರಲಿ. ಸಾದಾ ಉಡುಪಿನವರಾಗಿರಲಿ. ಮುದ್ದುರಾಮ ಹೇಳುತ್ತಾನೆ –

ಕರುಣೆ ಕಂಪೊಂದಿರಲು ಈ ಮನಸು ಶ್ರೀಮಂತ
ರಾಗದಿಂಚರದಂತೆ ದೀಪ ಬೆಳಕಂತೆ.
ಕಲ್ಲೆದೆಯ ಕರಗಿಸುವ ಅನುಕಂಪೆಯೊಂದು ವರ
ಕರುಣೆ ಕಲೆ ದೇವನದೊ ಮುದ್ದುರಾಮ.

ಮನಸ್ಸು ಶ್ರೀಮಂತವಾಗಬೇಕಾದರೆ ಅದರಲ್ಲಿ ಕರುಣೆಯ ಕಂಪು ಇರಬೇಕು. ರಾಗಕ್ಕೆ ಇಂಚರ ಜೀವಸ್ವರ. ಅದಿಲ್ಲದಿದ್ದರೆ ರಾಗವೇ ಇಲ್ಲ. ರಾಗದ ಇಂಚರದಂತೆ ದೀಪದ ಬೆಳಕಿನಂತೆ ಮನಸ್ಸಿನ ಕರುಣೆ. ಇಂಚರವಿಲ್ಲದ ರಾಗದಂತೆ, ಬೆಳಕಿಲ್ಲದ ದೀಪದಂತೆ, ಕರುಣೆಯಿಲ್ಲದ ಮನಸ್ಸು ಅರ್ಥಹೀನವಾಗುತ್ತದೆ. ಕರುಣೆಯ ಶಕ್ತಿಯೇನೆಂದರೆ ಅದು ಕಲ್ಲಿನಂತೆ ಕಠಿಣವಾದ ಎದೆಯನ್ನೂ ಕರಗಿಸುತ್ತದೆ. ಅದು ಮಾನವನಿಗೆ ದೇವರಿತ್ತ ವರ. ಭಗವಂತನ ವಿಶಿಷ್ಟ ಗುಣ ಕರುಣೆ ಎಂದು ಮುದ್ದುರಾಮ ಉದ್ಗರಿಸಿದ್ದಾನೆ. ಆ ದೇವರು ಹರಿ ಆಗಲಿ, ಹರ ಆಗಲಿ, ಬುದ್ಧನಾಗಲಿ, ಏಸುವಾಗಲಿ, ಹೆಸರಿಗಾಗಿ ಹೊಡೆದಾಡುವ ಅವಿವೇಕ ಬೇಡ. ಒಳ್ಳೆಯ ಘಟನೆ ಯಾವುದಾದರೂ ಅದು ಆ ದೇವನ ಕರುಣೆಯೆಂದು ನಾವು ಗ್ರಹಿಸಬೇಕು. ಆದ್ದರಿಂದ –

ಯಾವ ಶುಭ ಗಳಿಗೆಯಲಿ ಯಾವ ಕೋಗಿಲೆ ಹಾಡೊ
ಕೇಳು ಅದ ಮನವಿಟ್ಟು ಹರಿಕರುಣೆಯೆಂದು
ಹೊಸತೊಂದು ಹೊಳೆದೀತು, ನವಗೀತೆ ಮೂಡೀತು
ಸಕಲ ದೇವಪ್ರಸಾದ ಮುದ್ದುರಾಮ!

ಯಾವುದೋ ಶುಭ ಮುಹೂರ್ತದಲ್ಲಿ, ಶುಭ ವೇಳೆಯಲ್ಲಿ ಯಾವುದೋ ಕೋಗಿಲೆ ಪಂಚಮ ಸ್ವರದಲ್ಲಿ ಹಾಡುತ್ತದೆ. ನಮ್ಮ ಆದೇಶಕ್ಕೆ ಬೆಲೆ ಕೊಟ್ಟು ಪಕ್ಷಿಯು ಹಾಡುವುದಿಲ್ಲ. ಬೆದರಿಸಿ ಕೋಗಿಲೆಯಿಂದ ಹಾಡಿಸಲು ಸಾಧ್ಯವೇ? ಅದು ಹಾಡುವುದು ಹರಿಯ ಕರುಣೆಯಿಂದ. ಅದನ್ನು ಮನವಿಟ್ಟು ಕೇಳಿ ಆನಂದಿಸುವುದೇ ನಮ್ಮ ಸೌಭಾಗ್ಯ. ಕೋಗಿಲೆ ಕೂಗುವುದು, ನವಿಲು ಕುಣಿಯುವುದು, ಕವಿ ಪದ್ಯವನ್ನು ರಚಿಸುವುದು ಹರಿಕರುಣೆಯಿಂದ. ಕವಿ ಪದ್ಯವನ್ನು ರಚಿಸಬೇಕಾದರೆ ಹೊಸ ವಿಷಯ ಹೊಳೆಯಬೇಕು, ಆಗಲೇ ನವ–ನವೀನವಾದ ಗೀತೆ ಮೂಡುವುದು. ಅದು ಕೇವಲ ಪ್ರಯತ್ನದ ಫಲವಲ್ಲ. ದೇವರ ಪ್ರಸಾದ. ಭಗವಂತನ ಅನುಗ್ರಹ. ಹಾಗೆ ಅನುಗ್ರಹ ಮಾಡಲು ಕಾರಣ ಭಗವಂತನಲ್ಲಿರುವ ಕರುಣೆ.

ಇನ್ನೊಂದು ಪದ್ಯದಲ್ಲೂ ಮುದ್ದುರಾಮ ಈ ಭಾವನೆಯನ್ನು ವ್ಯಕ್ತಪಡಿಸಿದ್ದಾನೆ –

ನನ್ನದಿದು ನಾ ಬರೆದೆ ಎನುವ ಅಮಲೇರಿದರೆ
ಪಾತಾಳದೊಳಬಿದ್ದೆ ನೀ ಮೇರುವಿಂದ.
ನಿನದಲ್ಲ ಪದಪುಂಜ ಯಾರದೋ ಕರುಣೆ ಅದು
ಬರಿ ನಿಮಿತ್ತವೊ ನೀನು ಮುದ್ದುರಾಮ.

'ನಾಹಂ ಕರ್ತಾ ಹರಿಃ ಕರ್ತಾ' (ಮಾಡುವವನು ನಾನಲ್ಲ, ಹರಿಯೇ ಕರ್ತ) ಎನ್ನುವ ಭಾವನೆ ಕವಿಯಲ್ಲಿರಬೇಕು. ಕುಮಾರವ್ಯಾಸನು ಏನೆಂದ? 'ವೀರ ನಾರಾಯಣನೆ ಕವಿ, ನಾನು ಲಿಪಿಕಾರ ಮಾತ್ರ. ಈ ಭಾವನೆ ತಪ್ಪಿ ಹೋಗಿ ಈ ಕಾವ್ಯವು ನನ್ನದು. ನೀನೇ ಬರೆದೆ ಎಂಬ ಅಮಲು ಏರಿದರೆ ಮೇರುಪರ್ವತದಿಂದ ಪಾತಾಳಕ್ಕೆ ಬಿದ್ದ ಹಾಗೆ. ಪದಪುಂಜ, ಶಬ್ದರಾಶಿ ನಿನ್ನದಲ್ಲ. ಅದು ಯಾರದೋ ಕರುಣೆ. ಅದು ಶಿವನ ಕೃಪೆ ಅಷ್ಟೆ, ನಿಮಿತ್ತ ಮಾತ್ರಂ ಭವ ಸವ್ಯ ಸಾಚಿನ್ ಎಂದು ಭಗವದ್ಗೀತೆಯಲ್ಲಿ ಹೇಳಿದಂತೆ, ಮನುಷ್ಯನು ನಿಮಿತ್ತ ಮಾತ್ರ. ಭಗವಂತನ ಕರುಣೆ ಇಲ್ಲದೆ ಏನೂ ಜರುಗದು. ತೇನ ವಿನಾ ತೃಣಮಪಿ ನ ಚಲತಿ (ಅವನ ಇಚ್ಛೆ ಇಲ್ಲದೆ ಹುಲ್ಲುಕಡ್ಡಿಯೂ ಚಲಿಸದು)

ದುಃಖದಿಂದ ನೊಂದಾಗ ನಮ್ಮನ್ನು ಸಮಾಧಾನಪಡಿಸುವುದು. ಆ ಭಗವಂತನ ಕರುಣೆಯೇ.

ದುಃಖದಲೆ ಒತ್ತರಿಸಿ ಬಲು ನೋವ ತಂದಾಗ
ನೆನೆ ಜೀವಚೈತನ್ಯದಾಯಕನ ಕರುಣೆ.
ಹಚ್ಚಿ ಹಣತೆಯನೊಂದ ಕೈ ಮುಗಿಯೊ ಚಿನ್ಮಯಕೆ
ನೋವು ಶಾಶ್ವತವಲ್ಲ ಮುದ್ದುರಾಮ

ದುಃಖದ ಅಲೆಗಳು ಒತ್ತರಿಸಿ ಒಂದು ತುಂಬ ನೋವನ್ನು ತಂದಾಗ, ನರನು ಜೀವ ಚೈತನ್ಯದಾಯಕನಾದ ಭಗವಂತನನ್ನು ನೆನೆಯಬೇಕು. ಅವನ ಕರುಣೆಯನ್ನು ನೆನಪಿಸಿಕೊಳ್ಳಬೇಕು. ಆ ಕರುಣೆ ದುಃಖದಿಂದ ನಮ್ಮನ್ನು ಪಾರು ಮಾಡುತ್ತಾನೆ. ಆಗ ಕೃತಜ್ಞತೆಗಿಂತ ಒಂದು ಹಣತೆಯನ್ನು ಹಚ್ಚಿ ಆ ಚಿನ್ಮಯ ಭಗವಂತನಿಗೆ ತಲೆಬಾಗಿ ಕೈ ಮುಗಿಯಬೇಕು. ಅದರಿಂದ ಭಗವಂತನಿಗೆ ಯಾವ ಲಾಭವಿಲ್ಲದಿದ್ದರೂ ನಾವು ನಮ್ಮ ಕರ್ತವ್ಯವನ್ನು ಮಾಡಿದಂತಾಗುತ್ತದೆ. ಅದರಿಂದ ಭಗವಂತನು ಪ್ರಸನ್ನನಾಗುವನು.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮ್ ಅಶ್ನಾಮಿ ಪ್ರಯತಾತ್ಮನಃ ॥

ಎಂದು ಭಗವದ್ವಚನವೇ ಇದೆ.

ಭಕ್ತಿಯಿಂದ ಕೊಟ್ಟ ಪತ್ರೆ, ಹೂವು, ಹಣ್ಣು, ನೀರು ಯಾವುದನ್ನಾದರೂ ನಾನು ಸ್ವೀಕರಿಸುತ್ತೇನೆ ಎಂದು ಭಗವಂತನೇ ಹೇಳಿದ್ದಾನೆ. ಒಂದು ಹಣತೆಯನ್ನು ಹಚ್ಚಿದರೂ ಅದರಿಂದ ರಾಮನು ಸುಪ್ರೀತನಾಗುತ್ತಾನೆ.

ಭಗವಂತನು ಎಲ್ಲ ಜೀವಿಗಳಿಗೆ ಕರುಣೆಯಿಂದ ನೀರನ್ನು ಅನ್ನವನ್ನು ಕರುಣಿಸುತ್ತಿದ್ದಾನೆ. ನಾವು, ಎಂದರೆ ಮಾನವರು, ಎಲ್ಲವನ್ನೂ ನಾಶಪಡಿಸುವುದರಲ್ಲೇ ತೊಡಗಿದ್ದೇವೆ ಏಕೆ? ಎಂದು ಮುದ್ದುರಾಮ ಕೇಳುತ್ತಾನೆ.

ಹಸಿರಿಂದ ಕಂಗೊಳಿಪ ವನದ ತರುಲತೆಗೆಲ್ಲ
ಯಾರೊ ನೀರುಣಿಸುವರು ಕರುಣೆ ಬೆಳಕಾಗಿ
ನಾವು ಕೊಡಲಿಯ ಕಾವು ನಲಿವ ಈ ಸಂಪದಕೆ
ಈ ಹಸಿರ ಉಸಿರಿರಲಿ ಮುದ್ದುರಾಮ.

ಕಾಡಿನ ಮರಗಳಿಗೆ, ಬಳ್ಳಿಗಳಿಗೆ, ಬೆಟ್ಟದ ತುದಿಯಲ್ಲಿರುವ ಹುಲ್ಲಿಗೂ ಯಾರೋ ಕರುಣೆಯ ಬೆಳಕಾಗಿ ನೀರನ್ನು ಎರೆಯುತ್ತಿದ್ದಾರೆ. ಯಾರೋ ಎಂದರೆ ಎಲ್ಲಕ್ಕೂ ಕಾರಣನಾದ, ಕರುಣೆಯ ಕಡಲಾದ ಭಗವಂತನೇ. ನಾವು ಮಾತ್ರ ಅವನ್ನೆಲ್ಲ ಕಡಿದು ಹಾಕುವ ಕೊಡಲಿಗಳಾಗಿದ್ದೇವೆ. ಲಕ್ಷಾಂತರ ವರ್ಷಗಳಿಂದ ಬೆಳೆದು ನಿಂತಿದ್ದ ವನಗಳನ್ನು ಸ್ವಾರ್ಥಿ ಮಾನವ ನಿಷ್ಕರುಣೆಯಿಂದ ಕಡಿದು ನಾಶ ಮಾಡಿದ್ದಾನೆ. ಈಗಲಾದರೂ ಈ ವಿಧ್ವಂಸನ ನಿಲ್ಲಬೇಕು. ಸುತ್ತಲೂ ಹಸಿರು ಇರುವವರೆಗೆ ನಮ್ಮ ಉಸಿರು. ಹಸಿರನ್ನು ಹಾಳು ಮಾಡಿದರೆ ನಮ್ಮ ಉಸಿರೂ ನಿಂತು ಹೋಗುತ್ತದೆ. ಹಾಗಾಗುವುದು ಬೇಡ ಎನ್ನುವುದು ಮುದ್ದುರಾಮನ ಕಳಕಳಿಯ ಮಾತು.

ಕರುಣೆಯ ಅಲೆಯನ್ನು ಮರೆತು ದ್ವೇಷದ ಜ್ವಾಲೆಯನ್ನು ನಾವು ಹೆಚ್ಚಿಸಿದರೆ ಈ ಜಗತ್ತಿನಲ್ಲಿ ಏನೂ ಉಳಿಯದು. ಅದನ್ನು ಕವಿ ಎಲ್ಲರಿಗೆ ನೆನಪಿಸುತ್ತಿದ್ದಾನೆ–

ಕಣ್ಣು ದೋಚಿದರೆಂದು ಕಣ್ಣ ಕೀಳುವ ದ್ವೇಷ
ಕುರುಡಾಗಿಪುದು ಜಗವ ಇಂದಲ್ಲ ನಾಳೆ.
ಮರೆತರೇನಿದೆ ಜೀವ ಕರುಣೆಲಹರಿಯ ನಡೆಯ?
ಇರಲಿ ಸಮತೆಯ ದೃಷ್ಟಿ ಮುದ್ದುರಾಮ.

ಅವರು ಕಣ್ಣನ್ನು ಕಿತ್ತರೆಂದು ನಾವೂ ಅವರ ಕಣ್ಣನ್ನು ಕಿತ್ತರೆ, ಇದೇ ಪ್ರವೃತ್ತಿ ಬೆಳೆದರೆ ಎಲ್ಲರೂ ಕುರುಡರಾಗುತ್ತೇವೆ. ಅವರು ನಮ್ಮ ಗುಂಪಿನ ಹತ್ತು ಜನರನ್ನು ಕೊಂದರೆಂದು ನಾವು ಅವರ ಗುಂಪಿನ ಇಪ್ಪತ್ತು ಜನರನ್ನು ದ್ವೇಷದಿಂದ ಕೊಲ್ಲಲು ಹೋದರೆ, ಇದೇ ಸ್ವಭಾವವನ್ನು ಎಲ್ಲರೂ ಅಳವಡಿಸಿಕೊಂಡರೆ, ಭೂಮಿಯೇ ನಿರ್ಜನವಾಗುತ್ತದೆ. ಕರುಣೆಯ ಲಹರಿಯಿಂದ ಕ್ಷಮಿಸುವುದನ್ನು ಕಲಿಯಬೇಕು. ಆಗ ಮಾತ್ರ ಎಲ್ಲರ ಉಳಿವು. ಇಲ್ಲದಿದ್ದರೆ ಎಲ್ಲರ ಅಳಿವು. ಕರುಣೆಯ ನಡೆಯನ್ನು ಮರೆತರೆ ಏನಿದೆ? ಏನೂ ಇಲ್ಲ. ಆದ್ದರಿಂದ ಸಮತೆಯ ದೃಷ್ಟಿ ಇರಬೇಕು. ಕಣ್ಣಿಗೆ ಕಣ್ಣು, ತಲೆಗೆ ತಲೆ ಎಂದು ಸೇಡು ತೀರಿಸುವ ಮನೋಭಾವ ಸರ್ವನಾಶಕ್ಕೆ ಕಾರಣ ಎಂದು ಮುದ್ದುರಾಮ ಎಚ್ಚರಿಸಿದ್ದಾನೆ. ಕರುಣಾಪ್ರವಾಹವೇ ಎಲ್ಲೆಡೆ ಹರಿಯಲಿ ಎಂದು ಅವನ ಆಶಯ.

ಬಿಟ್ಟಿ ರೈಸ್... ಬಿಟ್ಟಿ ಬಸ್... ಕೊನೆಗೆ ಬಿಟ್ಟಿ ಬದುಕು...!

● ಖ್ಯಾತ ಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ ಬೇಸರ ● ಬದುಕು ದುಡಿಮೆಯೊಂದಿಗೆ ಜೋಡಣೆ ಆಗಿದೆ ಎಂಬುದನ್ನು ಯಾರೂ ಮರೆಯಬಾರದು



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಪರಿಷತ್ ಮತ್ತು ಪ್ರತಿಭಾ ವೇದಿಕೆ ಕಾರ್ಯಕ್ರಮದಲ್ಲಿ ಟಿ.ಎಸ್.ನಾಗಾಭರಣ ಮಾತನಾಡಿದರು.

> "ನಾನು ಕನ್ನಡ ಭಾಷೆಯ ಸೈನಿಕ. ಭಾರತೀಯ ಚಿತ್ರರಂಗದಲ್ಲಿ ಕನ್ನಡ ಬಾವುಟವನ್ನು ಸದಾ ಹಾರಿಸಬೇಕು ಎಂದುಕೊಂಡಿದ್ದೇವೆ. ಹಾರಿಸುತ್ತಲೂ ಇದ್ದೇವೆ. ಕನ್ನಡಿಗರು, ಕನ್ನಡ ಭಾಷೆ ಎಲ್ಲಿಯೂ, ಯಾರಿಗೂ ಕಡಿಮೆ ಇಲ್ಲ. ನಾವು ಕನ್ನಡಿಗರು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಹೇಳುವಂತೆಯೇ ಬರವಣಿಗೆ ಇರುವ, ವೈಜ್ಞಾನಿಕ ವ್ಯಾಕರಣ ಹೊಂದಿರುವ ಏಕೈಕ ಭಾಷೆ ಕನ್ನಡ.
> **–ಟಿ.ಎಸ್.ನಾಗಾಭರಣ, ಖ್ಯಾತ ಚಲನಚಿತ್ರ ನಿರ್ದೇಶಕ**

ಮೈಸೂರು, ಸೆ.9(ಎಂಕೆ)– ಇವತ್ತು ಬಿಟ್ಟಿ ಭಾಗ್ಯಕ್ಕೆ ಬಹಳ ಜಾಸ್ತಿ ಡಿಮ್ಯಾಂಡ್... ಕೆಲಸ ಮಾಡದೆ ಎಲ್ಲವೂ ಸಿಗಬೇಕು. ಬಿಟ್ಟಿ ಬಸ್... ಬಿಟ್ಟಿ ರೈಸ್... ಎಲ್ಲವೂ ಬಿಟ್ಟಿ... ಕೊನೆಗೆ ಬದುಕು ಬಿಟ್ಟಿಯಾಗಿದೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ವಿದ್ಯಾರ್ಥಿ ಪರಿಷತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟಿಸಿ ಮಾತನಾಡಿದ ಅವರು, ಬದುಕು ನಿರಂತರವಾಗಿ ಕಾಯಕದ ಜೊತೆ ಜೋಡಿಸಿದೆ. ದಿನ ಬೆಳಗಾದರೆ ಏನಾದರೂ ಕಾಯಕ ಇರಬೇಕು. ಆದರೆ, ಇವತ್ತು ಬದುಕೆ ಬಿಟ್ಟಿಯಾಗಿದೆ ಎಂದರು.

ಸಂಸತ್ ಪರಿಕಲ್ಪನೆ ಮೂಲ 12ನೇ ಶತಮಾನದ ಅನುಭವ ಮಂಟಪದಿಂದ ಬಂದಿದ್ದು, ಕಾಯಕ ಮತ್ತು ದಾಸೋಹದ ಮಹತ್ವವನ್ನು ವಚನ ಸಾಹಿತ್ಯ ತಿಳಿಸಿಕೊಟ್ಟಿದೆ. ಪ್ರತಿಯೊಬ್ಬರು ಒಂದಲ್ಲಾ ಒಂದು ಕಾಯಕದಲ್ಲಿ ತೊಡಗಿಕೊಳ್ಳಬೇಕು ಎಂಬ ಅರಿವಿನ ಜೊತೆಗೆ ನಮ್ಮ ಪರಂಪರೆಯ ಇಂದಿನ ಕುಡಿಗಳು ದೊಡ್ಡ ಆಲದ ಮರಗಳಾಗಿ ಬೆಳೆಯಬೇಕು. ಕೇವಲ ಲೀಡರ್ ಶಿಪ್ ಕ್ವಾಲಿಟಿ ಮುಖ್ಯವಲ್ಲ. ಸರ್ವೀಸ್ ಕ್ವಾಲಿಟಿ ಮುಖ್ಯ ಎಂದು ತಿಳಿಹೇಳಿದರು.

ಗುರು–ಶಿಷ್ಯ ಪರಂಪರೆಯಲ್ಲಿರುವ ಶಕ್ತಿ ಮತ್ತ್ಯಾವ ಪರಂಪರೆಯಲ್ಲಿಯೂ ಇಲ್ಲ. ಗುರು–ಶಿಷ್ಯ ಪರಂಪರೆ ಜೀವನದುದ್ದಕ್ಕೂ ನಮ್ಮನ್ನು ಬೆಳೆಸಲಿದೆ. ನಮ್ಮ ಬದುಕನ್ನು ತಿದ್ದಲೆಂದೇ ದೇವರು ಗುರುವನ್ನು ಸೃಷ್ಟಿಸಿದ್ದಾನೆ. ನಾಳೆಯ ಕನಸು ಕಾಣುವ ಪ್ರವೃತ್ತಿ ವಿದ್ಯಾರ್ಥಿಗಳಲ್ಲಿ ಮುಖ್ಯವಾಗಿದ್ದು, ಇತರರಿಗೆ ಮಾದರಿಯಾಗುವ ನಿಟ್ಟಿನಲ್ಲಿ ಬೆಳೆಯಬೇಕು. ವೃತ್ತಿಗೆ ನಿವೃತ್ತಿ ಇದೆ. ಆದರೆ ಪ್ರವೃತ್ತಿಗೆ ನಿವೃತ್ತಿ ಇಲ್ಲ. ಹಾಗಾಗಿ ವೃತ್ತಿ ಮತ್ತು ಪ್ರವೃತ್ತಿ ನಡುವಿನ ವ್ಯತ್ಯಾಸ ಅರ್ಥ ಮಾಡಿಕೊಂಡು ಮುನ್ನಡೆಯಬೇಕು. ಹಾಗೆಯೇ ಸಾಹಿತ್ಯ, ಸಂಗೀತ ಮತ್ತು ಸಂಸ್ಕೃತಿಯನ್ನು ಜೀವನದಲ್ಲಿ ಜೋಡಿಸಿಕೊಳ್ಳದಿದ್ದವರಲ್ಲಿ ರಾಕ್ಷಸ ಪ್ರವೃತ್ತಿ ಬೆಳೆಯುತ್ತದೆ ಎಂದು ಎಚ್ಚರಿಸಿದರು.

ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ, ನಿರ್ದೇಶಕರಾದ ಡಾ.ಸಿ.ಕೆ.ರೇಣುಕಾರ್ಯ, ಸಿಇಒ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ, ಸಂಚಾಲಕರಾದ ಎಂ.ನಾಗೇಶ್, ಡಾ.ಪಿ.ಜಿ.ಪುಷ್ಪರಾಣಿ ಮತ್ತಿತರರು ಉಪಸ್ಥಿತರಿದ್ದರು.

ಬೃಂದಾವನ ಆರೋಗ್ಯ ಮಾತೆ ದೇವಾಲಯದ ವಾರ್ಷಿಕೋತ್ಸವ



ಮೈಸೂರು,ಸೆ.9– ಮಂಡ್ಯ ಜಿಲ್ಲೆ ಬೆಳಗೊಳ ಸಮೀಪದ ಹುಲಿಕೆರೆಯಲ್ಲಿರುವ ಬೃಂದಾವನ ಆರೋಗ್ಯ ಮಾತೆಯ ದೇವಾಲಯದ ವಾರ್ಷಿಕೋತ್ಸವದ ಅಂಗವಾಗಿ ಸೆ.12ರಂದು ಸಂಜೆ 5.30ಕ್ಕೆ ಧ್ವಜಾರೋಹಣ ಜಪಸರ, ದಿವ್ಯ ಬಲಿಪೂಜೆ, ನವೇನ ಪ್ರಾರ್ಥನೆ ಹಾಗೂ ಸೆ.13ರಂದು ಸಂಜೆ 5.30ಕ್ಕೆ ಜಪಸರ, ದಿವ್ಯ ಬಲಿಪೂಜೆ ನವೇನ ಪ್ರಾರ್ಥನೆಯನ್ನು ಪ್ರಭೋದಕ ವಂ. ಗುರು ರೋಕ್ಷನ್ ಬಾರೂಸ್ (ಸಂತ ಜೋಸೆಫರ್ ಆಸ್ಪತ್ರೆ ನಿರ್ದೇಶಕರು) ನೆರವೇರಿಸುವರು. ಸೆ.14ರಂದು ಬೆಳಗ್ಗೆ 8ಕ್ಕೆ ಪ್ರಭೋಧಕ ಪ್ರವೀಣ್ ಹರಾನ ಎಸ್.ವಿ.ಡಿ. ಅವರಿಂದ ದಿವ್ಯ ಬಲಿಪೂಜೆ, ನವೇನ ಪ್ರಾರ್ಥನೆ ನೆರವೇರಲಿದೆ. ಸೆ.15, 16 ಹಾಗೂ 17ರ ಸಂಜೆ 5.30ಕ್ಕೆ ಜಪಸರ, ದಿವ್ಯ ಬಲಿಪೂಜೆ, ನವೇನ ಪ್ರಾರ್ಥನೆಯನ್ನು ಪ್ರಬೋದಕ ವಂ. ಗುರು ಆರ್. ನವೀನ್‌ಕುಮಾರ್ ನೆರವೇರಿಸಲಿದ್ದಾರೆ.

ಸೆ.18 ಮತ್ತು 19ರಂದು ಸಂಜೆ 5.30ಕ್ಕೆ ಪ್ರಬೋಧಕ ವಂ. ಗುರು ಎಡ್ವರ್ಡ್ ಫಿಲಿಪ್ ಅವರಿಂದ ದಿವ್ಯ ಬಲಿಪೂಜೆ, ಜಪಸರ, ನವೇನ ಪ್ರಾರ್ಥನೆ. ಸೆ.20ರಂದು ಸಂಜೆ 5.30ಕ್ಕೆ ಪ್ರಬೋಧಕ ವಂ. ಗುರು ಕೆ.ನವೀನ್ ಕುಮಾರ್ ಅವರಿಂದ ದಿವ್ಯ ಬಲಿಪೂಜೆ, ಜಪಸರ, ನವೇನ ಪ್ರಾರ್ಥನೆ ನೆರವೇರಲಿದೆ. ಸೆ.21ರಂದು ಬೆಳಗ್ಗೆ 10.30ಕ್ಕೆ ಹಬ್ಬದ ಆಡಂಬರ ಗಾಯನ ಬಲಿಪೂಜೆಯನ್ನು ವಂ. ಗುರು ಜೆ.ಶಾಂತಕುಮಾರ್ ನೆರವೇರಿಸಲಿದ್ದಾರೆ. ಸಂಜೆ 6 ಗಂಟೆಗೆ ಭವ್ಯ ತೇರು ಮೆರವಣಿಗೆ, ನಂತರ ಪರಮ ಪ್ರಸಾದ ಆಶೀರ್ವಾದ ನಡೆಯಲಿದೆ ಎಂದು ಧರ್ಮಕೇಂದ್ರದ ಗುರುಗಳಾದ ವಂ. ಫಾ. ರೈಮಂಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನಿಂದ ಹುಲಿಕೆರೆಗೆ ಬಸ್ ನಂ.303, 304 ಹಾಗೂ ಖಾಸಗಿ ಬಸ್‌ಗಳ ಸಂಚಾರ ವ್ಯವಸ್ಥೆಯಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೋರಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 10 ಬುಧವಾರ 2025

ಸಂಪುಟ: 46 | ಸಂಚಿಕೆ: 144 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಗಣೇಶಮೂರ್ತಿ ಮೆರವಣಿಗೆ ಮೇಲೆ ಕಲ್ಲು ತೂರಾಟ ಖಂಡಿಸಿ

ಮದ್ದೂರು ಬಂದ್ ಯಶಸ್ವಿ

● ನಗರದಲ್ಲಿ ಪೊಲೀಸರ ಸರ್ಪಗಾವಲು ● ಯಾವುದೇ ಅಹಿತಕರ ಘಟನೆಗೆ ಆಸ್ಪದವಿಲ್ಲ

ಮದ್ದೂರು, ಸೆ.9– ಗಣೇಶ ಮೆರವಣಿಗೆ ವೇಳೆ ಸಂಭವಿಸಿದ ಕಲ್ಲು ತೂರಾಟ ಹಾಗೂ ನಿನ್ನೆ ಪ್ರತಿಭಟನೆ ವೇಳೆ ಹಿಂದೂಪರ ಕಾರ್ಯಕರ್ತರ ಮೇಲೆ ನಡೆದ ಲಾಠಿ ಚಾರ್ಜ್ ಖಂಡಿಸಿ ಕರೆ ನೀಡಿದ್ದ ಸ್ವಯಂಪ್ರೇರಿತ ಮದ್ದೂರು ಬಂದ್ ಸಂಪೂರ್ಣ ಯಶಸ್ವಿಯಾಗಿದ್ದು, ಮಂಗಳವಾರ ಯಾವುದೇ ಅಹಿತಕರ ಘಟನೆ ನಡೆಯದೇ ಬಹುತೇಕ ಶಾಂತಿಯುತವಾಗಿತ್ತು.

ಗಲಭೆಯಿಂದ ಉದ್ವಿಗ್ನಗೊಂಡಿದ್ದ ಪಟ್ಟಣದಲ್ಲಿ ವರ್ತಕರು ಬಂದ್‌ಗೆ ಸಂಪೂರ್ಣ ಸಹಕಾರ ಕೊಟ್ಟರು. ಹಿಂದೂಪರ ಸಂಘಟನೆಗಳು ಸೋಮವಾರವೇ ಬಂದ್‌ಗೆ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಇಡೀ ನಗರದಾದ್ಯಂತ ಒಂದು ಅಂಗಡಿಯೂ ತೆರೆಯದೇ ಸಂಜೆವರೆಗೂ ಸಹಕಾರ ಕೊಟ್ಟರು. ಕೆಲವು ಕಡೆಯಂತೂ ಅಗತ್ಯ ವಸ್ತು ಪೂರೈಕೆಗಳಾದ ಮೆಡಿಕಲ್ ಸ್ಟೋರ್ ಮತ್ತು ನಂದಿನಿ ಹಾಲು ಕೇಂದ್ರಗಳೂ ಸಹ ಬಂದ್ ಆಗಿದ್ದವು.

ಜನ ಸಂಚಾರ ಕೊಂಚ ವಿರಳವಾಗಿತ್ತಾದರೂ ಸಂಚಾರ ವ್ಯವಸ್ಥೆ ಎಂದಿನಂತೆ ಇತ್ತು. ಬಸ್, ಸರಕು ಸಾಗಣೆ ವಾಹನಗಳು, ಆಟೋಗಳು ಸಂಚರಿಸಿದವು. ಶಾಲಾ–ಕಾಲೇಜುಗಳಿಗೆ ರಜೆ ಇರಲಿಲ್ಲ. ಜಿಲ್ಲಾ ಪೊಲೀಸರ ಸೂಚನೆಯಂತೆ ಮದ್ದೂರಿನ ಎಲ್ಲಾ ಮದ್ಯದಂಗಡಿಗಳು ಬಂದ್ ಆಗಿದ್ದು, ನಾಳೆವರೆಗೂ ಮದ್ಯ ಮಾರಾಟವನ್ನು ನಿಷೇಧಗೊಳಿಸಲಾಗಿದೆ.

ನಿಷೇಧಾಜ್ಞೆ ಮುಂದುವರಿಕೆ: ಬೂದಿ ಮುಚ್ಚಿದ ಕೆಂಡದಂತಿರುವ ಮದ್ದೂರಿನಲ್ಲಿ ನಿಷೇಧಾಜ್ಞೆಯನ್ನು ಮುಂದುವರೆಸಲಾಗಿದೆ. ಸೋಮವಾರ ಬೆಳಗ್ಗೆ 6ಗಂಟೆಯಿಂದ ▶ 10ನೇ ಪುಟಕ್ಕೆ




ಮಂಗಳವಾರ ಮದ್ದೂರು ಸ್ವಯಂಪ್ರೇರಿತ ಬಂದ್ ಆಚರಿಸಿದ ಸಂದರ್ಭದಲ್ಲಿ ಇಡೀ ನಗರದ ಅಂಗಡಿ–ಮುಂಗಟ್ಟುಗಳು ಬಂದ್ ಆಗಿದ್ದವು.

ಕಲ್ಲು ತೂರಾಟ ಪೂರ್ವ ನಿಯೋಜಿತ ಕೃತ್ಯದ ಶಂಕೆ

ಮದ್ದೂರು, ಸೆ.9–ಮದ್ದೂರಿನ ರಾಮ್ ರಹೀಂ ನಗರದ ಬಳಿ ಸಂಭವಿಸಿದ ಕಲ್ಲು ತೂರಾಟ ಪೂರ್ವನಿಯೋಜಿತ ಕೃತ್ಯ ಎಂಬ ಬಗ್ಗೆ ಅನುಮಾನವಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸುತ್ತಿದ್ದೇವೆ ಎಂದು ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ ತಿಳಿಸಿದರು.

ಅಂದು ಘಟನೆ ನಡೆಯುವ ಮುನ್ನ ಲೈಟ್ ಆಫ್ ಮಾಡಿ ಕಲ್ಲು ತೂರಾಟ ಮಾಡಿದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದು, ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಯುತ್ತಿದೆ. ಮಸೀದಿಯಿಂದ ಕಲ್ಲು ತೂರಿ ಬಂದಿರುವ ಬಗ್ಗೆ ಮಾಹಿತಿ ಇಲ್ಲ. ಪಕ್ಕದ ಬೀದಿಯಿಂದ ಕಲ್ಲು ಬಂದಿರುವ ಶಂಕೆ ಇದೆ. ▶ 10ನೇ ಪುಟಕ್ಕೆ

ಆರೋಪಿಗಳ ಹೆಸರು ಬಹಿರಂಗ; ಪ್ರತಿಭಟನಾಕಾರರ ವಿರುದ್ಧವೂ ಪ್ರಕರಣ ದಾಖಲು

ಎರಡು ಕಡೆಯವರ ಮೇಲೆ ಒಟ್ಟು ಐದು ಎಫ್‌ಐಆರ್

ಮದ್ದೂರು, ಸೆ.9–ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ ಮಾಡಿ ಬಂಧಿತರಾಗಿರುವ 22 ಮಂದಿ ಆರೋಪಿಗಳ ಹೆಸರು ಬಹಿರಂಗಪಡಿಸಲಾಗಿದೆ.

ಮಹಮ್ಮದ್ ಆವೇಜ್ ಆಲಿಯಾಸ್ ಮುಳ್ಳು, ಮಹಮ್ಮದ್ ಇರ್ಫಾನ್ ಆಲಿಯಾಸ್ ಮಿಯಾ, ನವಾಜ್ ಖಾನ್ ಆಲಿಯಾಸ್ ನವಾಜ್, ಇಮ್ರಾನ್ ಪಾಷಾ ಆಲಿಯಾಸ್ ಇಮ್ರಾನ್, ಉಮರ್ ಫಾರೂಕ್ ಆಲಿಯಾಸ್ ಉಮರ್, ಸೈಯದ್ ದಸ್ತಗಿರ್ ಆಲಿಯಾಸ್ ಸಯ್ಯದ್ ರಶೀದ್, ಖಾಸಿಫ್ ಅಹಮದ್ ಆಲಿಯಾಸ್ ಖಾಸಿಫ್, ಅಹಮದ್ ಸಲ್ಮಾನ್ ಆಲಿಯಾಸ್ ಮುಕ್ಕುಲ್ಲಾ, ಮುಸವೀರ್ ಪಾಷಾ ಆಲಿಯಾಸ್ ಒಡೆಯ, ಕಲಾಂದರ್ ಖಾನ್, ಮಹಮ್ಮದ್ ಅಜೀಜ್, ಇನಾಯತ್ ಪಾಷಾ, ಸುಮೇರ್ ಪಾಷಾ, ಮಹಮ್ಮದ್ ಖಲೀಂ ಆಲಿಯಾಸ್ ಕೈಫ್, ಸಕ್ಲೇನ್ ಪಾಷಾ, ಸಿಕಂದರ್ ಅಲಿಖಾನ್, ಸಾದಿಕ್ ಉಲ್ಲಾ, ಹರ್ಷದ್ ಖಾನ್, ಮೆಹಬೂಬ್ ಪಾಷಾ, ಪರ್ವಿಜ್ ಪಾಷಾ, ಇರ್ಫಾನ್ ಪಾಷಾ, ಸುಹೇಬ್ ಖಾನ್ ಬಂಧಿತರಾಗಿದ್ದು, ಸದ್ಯ ಎಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದಾರೆ. ಬಂಧಿತರ ವಿರುದ್ಧ ವಿವಿಧ ಸೆಕ್ಷನ್ ▶ 11ನೇ ಪುಟಕ್ಕೆ

ನನಗೆ ಜೈಲಲ್ಲಿ ಬದುಕಲಾಗುತ್ತಿಲ್ಲ, ವಿಷ ಕೊಡಿ...!?

ಬೆಂಗಳೂರು, ಸೆ.9(ಕೆಎಂಶಿ)–ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಆರೋಪ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನಿಂದ ಜಾಮೀನು ರದ್ದಾಗಿ ಜೈಲು ಪಾಲಾಗಿರುವ ನಟ ದರ್ಶನ್ ಪರಿಸ್ಥಿತಿ ನರಕದಂತಾಗಿದ್ದು, 'ನನಗೆ ವಿಷ ಕೊಡಿ' ಎಂದು ನ್ಯಾಯಾಧೀಶರ ಮುಂದೆ ಅಂಗಲಾಚಿದ್ದಾರೆ.



ನಟ ದರ್ಶನ್ ಹಾಗೂ ಇತರ ಆರೋಪಿಗಳನ್ನು ರಾಜ್ಯದ ಬೇರೆ ಬೇರೆ ಕಾರಾಗೃಹಗಳಿಗೆ ವರ್ಗಾವಣೆ ಸಂಬಂಧ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿ ಹಾಗೂ ಆರೋಪಿಗಳಿಂದ ಹೆಚ್ಚುವರಿ ಹಾಸಿಗೆ, ತಲೆದಿಂಬು ನೀಡುವಂತೆ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಆರೋಪಿಗಳು ನ್ಯಾಯಾಧೀಶರ ಮುಂದೆ ಅಲವತ್ತುಕೊಂಡಿದ್ದಾರೆ.

ಬೆಂಗಳೂರಿನ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿಗಳ ವಿಚಾರಣೆ ನಡೆದ ವೇಳೆ, ಕಾರಾಗೃಹದಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾದ ದರ್ಶನ್ 'ನನಗೆ ಜೈಲಿನಲ್ಲಿ ಬದುಕಲು ಆಗುತ್ತಿಲ್ಲ, ಬಿಸಿಲು ನೋಡದೆ ಹಲವಾರು ದಿನಗಳು ಕಳೆದಿವೆ, ಫಂಗಸ್‌ನಿಂದಾಗಿ ಬಟ್ಟೆಗಳು ವಾಸನೆ ಬರುತ್ತಿವೆ, ನನಗೆ ಬದುಕು ಸಾಕಾಗಿದೆ, ದಯವಿಟ್ಟು ವಿಷ ಕೊಡಲು ಆದೇಶ ಹೊರಡಿಸಿ' ಎಂದು ಗೋಗರೆದಿದ್ದಾರೆ. ಈ ಮನವಿಗೆ ನ್ಯಾಯಾಧೀಶರು, ನೀವು ಹಾಗೆಲ್ಲ ಕೇಳಬಾರದು, ನಾವು ಆ ರೀತಿ ಆದೇಶ ಮಾಡಲು ಸಾಧ್ಯವಿಲ್ಲ ಎಂದು ಸಮಾಧಾನ ಮಾಡಿದ್ದಾರೆ. ವಿಚಾರಣೆ ವೇಳೆ ವಿಷ ಕೊಡಿ ಎಂಬುದಾಗಿ ದರ್ಶನ್ ▶ 10ನೇ ಪುಟಕ್ಕೆ

ಸಿ.ಪಿ.ರಾಧಾಕೃಷ್ಣನ್ ನೂತನ ಉಪ ರಾಷ್ಟ್ರಪತಿ

ನವದೆಹಲಿ, ಸೆ.9– ಆಡಳಿತಾರೂಢ ಎನ್‌ಡಿಎ ಅಭ್ಯರ್ಥಿ, ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರು ದೇಶದ 17ನೇ ಉಪ ರಾಷ್ಟ್ರಪತಿಯಾಗಿ ಮಂಗಳವಾರ ಆಯ್ಕೆಯಾಗಿದ್ದಾರೆ.



ಇಂದು ನಡೆದ ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಸಿ.ಪಿ. ರಾಧಾಕೃಷ್ಣನ್ ಅವರು 452 ಮೊದಲ ಪ್ರಾಶಸ್ತ್ಯದ ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಅವರ ಪ್ರತಿಸ್ಪರ್ಧಿ ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿ ನಿವೃತ್ತ ನ್ಯಾಯಮೂರ್ತಿ ಸುದರ್ಶನ ರೆಡ್ಡಿ ಅವರು 300 ಮೊದಲ ಪ್ರಾಶಸ್ತ್ಯದ ಮತಗಳನ್ನು ಪಡೆದು ಪರಾಭವಗೊಂಡರು.

ಫಲಿತಾಂಶಗಳನ್ನು ಪ್ರಕಟಿಸಿದ ರಾಜ್ಯಸಭಾ ಪ್ರಧಾನ ಕಾರ್ಯದರ್ಶಿ ಪಿ.ಸಿ.ಮೋದಿ ಅವರು, ರಾಧಾಕೃಷ್ಣನ್ ಅವರು ವಿರೋಧ ಪಕ್ಷದ ಅಭ್ಯರ್ಥಿ ನ್ಯಾಯಮೂರ್ತಿ(ನಿವೃತ್ತ) ಸುದರ್ಶನ್ ರೆಡ್ಡಿ ಅವರ ವಿರುದ್ಧ ಗೆಲುವು ಸಾಧಿಸಿದ್ದಾರೆ ಎಂದು ತಿಳಿಸಿದರು.

ತಮಿಳುನಾಡಿನ ಹಿರಿಯ ಬಿಜೆಪಿ ನಾಯಕ ಮತ್ತು ಎರಡು ಬಾರಿ ಲೋಕಸಭಾ ಸಂಸದರಾಗಿದ್ದ ರಾಧಾಕೃಷ್ಣನ್ ಅವರು ಈಗ ದೇಶದ 17ನೇ ಉಪರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಉಪರಾಷ್ಟ್ರಪತಿಗಳು ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರೂ ಆಗಿರುತ್ತಾರೆ. ಜಗದೀಪ್ ಧನಕರ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ಚುನಾವಣೆ ನಡೆದಿತ್ತು. ಒಟ್ಟು 788 ಮತಗಳಲ್ಲಿ 767 ಮತಗಳು ಚಲಾವಣೆಯಾಗಿದ್ದವು. ಅವುಗಳಲ್ಲಿ ಮಾನ್ಯವಾದವು 752. ಉಳಿದ 15 ಮತಗಳು ನಾನಾ ಕಾರಣಕ್ಕೆ ತಿರಸ್ಕೃತಗೊಂಡವು. ಇದರಲ್ಲಿ 376 ಮತಗಳನ್ನು ▶ 10ನೇ ಪುಟಕ್ಕೆ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಅಪಘಾತ

ಕೊಡಗಿನ ದಂಪತಿ ಸಾವು; ಪುತ್ರನಿಗೆ ಗಾಯ

ಮಡಿಕೇರಿ, ಸೆ.9– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಚನ್ನಪಟ್ಟಣ ತಾಲೂಕಿನ ದೇವರಹೊಸಹಳ್ಳಿ ಬಳಿ ನಡೆದ ಅಪಘಾತದಲ್ಲಿ ಕೊಡಗು ಮೂಲದ ದಂಪತಿ ಸಾವನ್ನಪ್ಪಿದ್ದಾರೆ.

ದಕ್ಷಿಣ ಕೊಡಗಿನ ಪೊನ್ನಂಪೇಟೆ ತಾಲೂಕು ಪೂಕೊಳ ಗ್ರಾಮದ ಕಾಳಿಮಾಡ ಸೋಮಯ್ಯ (72) ಹಾಗೂ ಅವರ ಪತ್ನಿ 60 ವರ್ಷದ ಕಾಳಿಮಾಡ ಸರಸ್ವತಿ (ಸರಸು) ಮೃತ ದುರ್ದೈವಿಗಳು. ಕಾರಿನಲ್ಲಿದ್ದ ಅವರ ಪುತ್ರ ಸಜನ್ (35) ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದು, ಚನ್ನಪಟ್ಟಣ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಚನ್ನಪಟ್ಟಣ ತಾಲೂಕಿನ ದೇವರ ಹೊಸಹಳ್ಳಿ ಬಳಿ ಸಜನ್ ಚಲಾಯಿಸುತ್ತಿದ್ದ ಕಾರು, ಟ್ರಕ್ ಒಂದರ ಸ್ಟೆಪ್ನಿ ಕಳಚಿ ಬಿದ್ದಿದ್ದು ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಕಾರು ಡಿವೈಡರ್ ಮೇಲೇರಿ ಪಲ್ಟಿಯಾಗಿದೆ. ಅಪಘಾತದ ತೀವ್ರತೆಗೆ ಕಾರು ▶ 10ನೇ ಪುಟಕ್ಕೆ



ಮೃತ ದಂಪತಿ.



ಅಪಘಾತದಲ್ಲಿ ಸಂಪೂರ್ಣ ನಜ್ಜುಗುಜ್ಜಾಗಿರುವ ಕಾರು.

ಹುಲಿ ಸೆರೆಗೆ ನಿರ್ಲಕ್ಷ್ಯ; ಅರಣ್ಯ ಸಿಬ್ಬಂದಿಯನ್ನೇ ಬೋನಿನಲ್ಲಿ ಕೂಡಿ ಹಾಕಿದ ಬೇಸತ್ತ ಗ್ರಾಮಸ್ಥರು!

● ಅರಣ್ಯ ಸಿಬ್ಬಂದಿ ವಿರುದ್ಧ ಆಕ್ರೋಶ, ಪ್ರತಿಭಟನೆ ● ಸಿಬ್ಬಂದಿ, ಗ್ರಾಮಸ್ಥರ ವಿರುದ್ಧ ಕ್ರಮಕ್ಕೆ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪ್ರಭಾಕರ್ ನಿರ್ಧಾರ

ಗುಂಡ್ಲುಪೇಟೆ, ಸೆ.9(ಸೋಮ್.ಜಿ)– ಜನ–ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ಹುಲಿಯನ್ನು ಸೆರೆ ಹಿಡಿಯದ ಅರಣ್ಯ ಸಿಬ್ಬಂದಿ ನಿರ್ಲಕ್ಷ್ಯತೆಗೆ ರೊಚ್ಚಿಗೆದ್ದ ಗ್ರಾಮಸ್ಥರು, ಅವರನ್ನೇ ಆಳೆತ್ತರದ ಬೋನಿನೊಳಗೆ ಕೂಡಿಹಾಕಿದ ಘಟನೆ ತಾಲೂಕಿನ ಬೊಮ್ಮಲಾಪುರ ಸಮೀಪ ಸಂಭವಿಸಿದೆ.

ಕಳೆದ 20 ದಿನಗಳಿಂದ ಗ್ರಾಮದ ಸುತ್ತಮುತ್ತಲೇ ಓಡಾಡುತ್ತಿರುವ ಹುಲಿ ಸೆರೆಗೆ ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಹಲವಾರು ಬಾರಿ ಒತ್ತಾಯಿಸುತ್ತಾ ಬಂದಿದ್ದರು, ಈ ಹಿನ್ನೆಲೆಯಲ್ಲಿ ತುಮಕೂರಿಂದ ತರಿಸಲಾದ ಬೃಹತ್ ಬೋನು ಇರಿಸಿ, ಅದರಲ್ಲಿ ಕರುವನ್ನು ಕೂಡಿಹಾಕಿದ್ದರು. ಆದರೂ ಕಳೆದ ಆರೇಳು ದಿನಗಳಿಂದ ಕರುವಿಗೆ ಮೇವು, ನೀರು ನೀಡದ ಪರಿಣಾಮ ಅದು ಸತ್ತು ಹೋಗಿದ್ದರೂ ಅರಣ್ಯ ಸಿಬ್ಬಂದಿ ಅತ್ತ ತಲೆ ಹಾಕಿರಲಿಲ್ಲ. ಇತ್ತ ಹುಲಿ ಬೋನಿನ ಬಳಿ ಬಂದರೂ ಸತ್ತಕರುವನ್ನು ತಿನ್ನಲು ಮುಂದಾಗದೆ ಪಕ್ಕದಲ್ಲಿರುವ ರೇವಣ್ಣ ಎಂಬುವರ ಜಮೀನಿನಲ್ಲಿ ಓಡಾಡುತ್ತಿರುವ ಬಗ್ಗೆ ಅರಣ್ಯ ಇಲಾಖೆಗೆ ಗ್ರಾಮಸ್ಥರು ಮಾಹಿತಿ ನೀಡಿದರು.

ಇದನ್ನು ಪರಿಶೀಲಿಸಲು ಮಂಗಳವಾರ ಬೆಳಗ್ಗೆ ಸ್ಥಳಕ್ಕೆ ಆಗಮಿಸಿದ ಅರಣ್ಯ ಸಿಬ್ಬಂದಿಯ ವಾಹನ ಕಂಡ ರೈತರು ಹುಲಿಯು ಮತ್ತೆ ಕಾಣಿಸಿಕೊಂಡ ಸ್ಥಳದ ಬಗ್ಗೆ ಮಾಹಿತಿ ನೀಡಲು ಜೀಪನ್ನು ಅಡ್ಡಗಟ್ಟಿದಾಗ ಚಾಲಕ ಜೀಪ್ ನಿಲ್ಲಿಸದೆ ಮುಂದೆ ಸಾಗಿದ. ಇದು ರೈತರನ್ನು ರೊಚ್ಚಿಗೆಬ್ಬಿಸಿತು. ▶ 10ನೇ ಪುಟಕ್ಕೆ



ಗುಂಡ್ಲುಪೇಟೆ ತಾಲೂಕಿನ ವಡೆಯನಪುರ ಸಮೀಪ ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಬೋನಿನಲ್ಲಿ ಕೂಡಿಹಾಕಿದ್ದಾರೆ.

ಬಾನು ಮುಷ್ತಾಕ್‌ರಿಂದ ಮೈಸೂರು ದಸರಾ ಉದ್ಘಾಟನೆಗೆ ತೀವ್ರ ವಿರೋಧಿಸಿ

ಸಂಘ ಪರಿವಾರದವರ ಚಾಮುಂಡಿಬೆಟ್ಟ ಚಲೋ; ಪೊಲೀಸರ ಬ್ರೇಕ್

ನಗರದ ಕುರುಬಾರಹಳ್ಳಿ ಸರ್ಕಲ್‌ನಲ್ಲಿ ಉದ್ವಿಗ್ನ ಪರಿಸ್ಥಿತಿ

● ಬಾನು ಮುಷ್ತಾಕ್‌ರಿಂದ ಕ್ಷಮೆಗೆ ಆಗ್ರಹ ● ಅವರದ್ದು ಜಿಹಾದಿ ಮನಸ್ಥಿತಿ ಎಂದು ಆಕ್ರೋಶ ● ಗುಂಪು ಗುಂಪಾಗಿ ಬಂದ ಸಂಘ ಪರಿವಾರದ ಮುಖಂಡರು ● ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಲು ಪೊಲೀಸರ ಹರಸಾಹಸ

ಮೈಸೂರು, ಸೆ.9(ಬಿಎಲ್‌ಎಸ್)– ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರಿಂದ ಮೈಸೂರು ದಸರಾ ಉದ್ಘಾಟನೆ ವಿರೋಧಿಸಿ ಬಿಜೆಪಿ ಸೇರಿದಂತೆ ಸಂಘ ಪರಿವಾರದವರು ಇಂದು ಚಾಮುಂಡಿಬೆಟ್ಟ ಚಲೋ ಹಮ್ಮಿಕೊಂಡಿದ್ದರು. ಚಾಮುಂಡಿ ಬೆಟ್ಟದ ಕಡೆ ತೆರಳಲು ದಾಂಗುಡಿ ಇಟ್ಟಾಗ ಅವರನ್ನು ತಡೆದು, ವಶಕ್ಕೆ ಪಡೆಯುವಲ್ಲಿ ಪೊಲೀಸರು ಯಶಸ್ವಿಯಾದರು. ಇದರಿಂದ ಮೈಸೂರಿನ ಕುರುಬಾರಹಳ್ಳಿ ಸರ್ಕಲ್‌ನಲ್ಲಿ ಕೆಲ ಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಆರಂಭಕ್ಕೆ ದಿನಗಣನೆ ▶ 10ನೇ ಪುಟಕ್ಕೆ




ದಲಿತ ಮಹಾಸಭಾದಿಂದಲೂ ಚಾಮುಂಡಿಬೆಟ್ಟ ಚಲೋ

ಒಂದೆಡೆ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸದಂತೆ ಸಂಘ ಪರಿವಾರದವರು ಪ್ರತಿಭಟನೆ ನಡೆಸಿದರೆ, ಮತ್ತೊಂದೆಡೆ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸಬೇಕು ಎಂದು ದಲಿತ ಮಹಾಸಭಾ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವೇದಿಕೆಯವರು ಚಾಮುಂಡಿಬೆಟ್ಟ ಚಲೋಗೆ ಮುಂದಾದರು.

ವೇದಿಕೆ ರಾಜ್ಯಾಧ್ಯಕ್ಷ ಶಿವರಾಂ, ದಲಿತ ಮಹಾಸಭಾದ ರಾಜೇಶ್ ಹಾಗೂ ಇತರರು ಚಾಮುಂಡಿಬೆಟ್ಟದತ್ತ ಮುನ್ನುಗ್ಗಲು ಯತ್ನಿಸಿದರು. ಆದರೆ ಪೊಲೀಸರು ಅವಕಾಶ ನೀಡಲಿಲ್ಲ.

ನಿಮಗೆ ಮಾತ್ರವಲ್ಲದೆ ಬಿಜೆಪಿ ಸೇರಿದಂತೆ ಇತರೆ ಸಂಘಟನೆಗಳಿಗೂ ಚಾಮುಂಡಿಬೆಟ್ಟ ಚಲೋ ನಡೆಸಲು ಅವಕಾಶ ನೀಡಿಲ್ಲ. ಆದ ಕಾರಣ ಪ್ರತಿಭಟನೆ ನಡೆಸದೆ, ವಾಪಸು ಹೋಗಿ ಎಂದು ಪೊಲೀಸರು ಪ್ರತಿಭಟನಾಕಾರರ ಮನವೊಲಿಸುವಲ್ಲಿ ಯಶಸ್ವಿಯಾದರು.

ಪೊಲೀಸರ ಸಲಹೆಗೆ ಸ್ಪಂದಿಸಿದ ಪ್ರತಿಭಟನಾಕಾರರು ಕುರುಬಾರಹಳ್ಳಿ ಸರ್ಕಲ್‌ನಿಂದ ನಿರ್ಗಮಿಸಿದರು.

ದಲಿತ ಮಹಾಸಭಾದ ಕಾರ್ಯಕರ್ತರನ್ನು ಬಂಧಿಸದ ಪೊಲೀಸರು ತಮ್ಮನ್ನು ಮಾತ್ರ ಬಂಧಿಸಿದ್ದೇಕೆ ಎಂದು ಸಂಘ ಪರಿವಾರದ ಕಾರ್ಯಕರ್ತರು ಈ ವೇಳೆ ಆಕ್ರೋಶ ವ್ಯಕ್ತಪಡಿಸಿದರು.



ಚಾಮುಂಡಿಬೆಟ್ಟದ ಎಲ್ಲಾ ರಸ್ತೆ ಬಂದ್; ಪೊಲೀಸರ ಸರ್ಪಗಾವಲು

ಸಂಘ ಪರಿವಾರ ಹಾಗೂ ದಲಿತ ಮಹಾಸಭಾ ಕಾರ್ಯಕರ್ತರು ಚಾಮುಂಡಿಬೆಟ್ಟ ಚಲೋ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟ ಸಂಪರ್ಕಿಸುವ ಎಲ್ಲಾ ರಸ್ತೆಗಳಿಗೆ ಪೊಲೀಸರ ಸರ್ಪಗಾವಲು ಹಾಕಲಾಗಿತ್ತು. ಕುರುಬಾರಹಳ್ಳಿ ಸರ್ಕಲ್ ಚಾಮುಂಡಿಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ಮೂರು ಹಂತಗಳಲ್ಲಿ ಪೊಲೀಸರನ್ನು ಭದ್ರತೆಗೆ ನಿಯೋಜನೆ ಮಾಡಲಾಗಿತ್ತು.

ನಗರದ ಸಿಎಆರ್ ಮೈದಾನದಿಂದ ಚಾಮುಂಡಿಬೆಟ್ಟಕ್ಕೆ ಹೋಗುವ ತಾವರೆಕೆರೆ ಬಳಿ ಬ್ಯಾರಿಕೇಡ್‌ಗಳನ್ನು ನಿಲ್ಲಿಸಿದ್ದ ಪೊಲೀಸರು ಹದ್ದಿನಕಣ್ಣಿಟ್ಟಿದ್ದರು. ಅಲ್ಲದೆ ತಾವರೆಕೆರೆಯಿಂದ ನಂದಿಗೆ ಹೋಗುವ ಮಾರ್ಗವನ್ನು ಪೂರ್ಣವಾಗಿ ಮುಚ್ಚಲಾಗಿತ್ತು. ಲಲಿತಮಹಲ್ ಹೆಲಿಪ್ಯಾಡ್‌ನಿಂದ ಚಾಮುಂಡಿಬೆಟ್ಟಕ್ಕೆ ಹೋಗುವ ರಸ್ತೆಯನ್ನು ಕೂಡ ಬಂದ್ ಮಾಡಲಾಗಿತ್ತು ಚಾಮುಂಡಿಪುರಂನಿಂದ ಚಾಮುಂಡಿ ಬೆಟ್ಟಕ್ಕೆ ಮೆಟ್ಟಿಲುಗಳ ಮೂಲಕ ಹೋಗುವ ರಸ್ತೆಗೆ ಕೂಡ ಬ್ಯಾರಿಕೇಡ್ ಹಾಕಿ ಪೊಲೀಸರ ಕಾವಲು ಹಾಕಲಾಗಿತ್ತು.

ಅಲ್ಲದೆ ಹೊಸಹುಂಡಿ ಎಪಿಎಂಸಿಯಿಂದ ಚಾಮುಂಡಿ ಬೆಟ್ಟಕ್ಕೆ ಹೋಗುವ ಮಾರ್ಗ ಬಂದ್ ಮಾಡಿ ಖಾಕಿ ಕಣ್ಗಾವಲು ಹಾಕಲಾಗಿತ್ತು. ಒಟ್ಟಾರೆ ಚಾಮುಂಡಿಬೆಟ್ಟಕ್ಕೆ ಹೋಗುವ ಎಲ್ಲಾ ಮಾರ್ಗವನ್ನು ಬಂದ್ ಮಾಡಿ ಬೆಟ್ಟಕ್ಕೆ ಹೋಗುವ ಎಲ್ಲಾ ಸಂಪರ್ಕ ರಸ್ತೆಗಳನ್ನು ಬಂದ್ ಮಾಡಲಾಗಿತ್ತು. ಆದರೆ ಚಾಮುಂಡಿಬೆಟ್ಟಕ್ಕೆ ಹೋಗುವ ಭಕ್ತರ ವಾಹನ ಹಾಗೂ ಬಸ್‌ಗಳಿಗೆ ಲಲಿತ ಮಹಲ್ ಹೆಲಿಪ್ಯಾಡ್ ನಿಂದ ಸಾಗಲು ಅವಕಾಶ ನೀಡಲಾಗಿತ್ತು.



ಚಾಮುಂಡಿಬೆಟ್ಟ ಚಲೋಗೆ ಮುಂದಾದ ಮಾಜಿ ಸಂಸದ ಪ್ರತಾಪ್ ಸಿಂಹ ಅವರನ್ನು ಪೊಲೀಸರು ವಶಕ್ಕೆ ಪಡೆದರು.

ಚಾಮುಂಡಿ ಭಕ್ತೆ ವಶಕ್ಕೆ ಪಡೆದು ಯಡವಟ್ಟು

ಪ್ರತಿಭಟನಾಕಾರರನ್ನು ಬಂಧಿಸುವ ಭರದಲ್ಲಿ ಪೊಲೀಸರು ಚಾಮುಂಡಿಬೆಟ್ಟಕ್ಕೆ ಹೋಗುತ್ತಿದ್ದ ಭಕ್ತೆಯೊಬ್ಬರನ್ನು ಕೂಡ ವಶಕ್ಕೆ ಪಡೆದು ಯಡವಟ್ಟು ಮಾಡಿದರು. ಪೊಲೀಸರು ತನ್ನನ್ನು ಯಾವ ಕಾರಣಕ್ಕೆ ವ್ಯಾನ್‌ನೊಳಗೆ ದಬ್ಬಿದ್ದಾರೆ ಎಂದು ತಿಳಿಯದ ಆ ಭಕ್ತೆ ಪೇಚಿಗೆ ಸಿಲುಕಿದರು. ಚಾಮುಂಡಿಬೆಟ್ಟದ ಕಡೆ ತೆರಳಲು ಸಂಘ ಪರಿವಾರದ ಕಾರ್ಯಕರ್ತರು ಮುನ್ನುಗ್ಗುವಾಗ ಅದೇ ಸಮಯಕ್ಕೆ ಬೆಂಗಳೂರಿನಿಂದ ಬಂದಿದ್ದ ಭಕ್ತರೊಬ್ಬರು ಚಾಮುಂಡಿಬೆಟ್ಟಕ್ಕೆ ತೆರಳಲು ಸಂಗೊಳ್ಳಿ ರಾಯಣ್ಣ ಸರ್ಕಲ್‌ನತ್ತ ಬರುತ್ತಿದ್ದರು. ಆ ವೇಳೆ ಹಿಂದು ಮುಂದು ನೋಡದ ಪೊಲೀಸರು ಆ ಭಕ್ತೆಯನ್ನು ಬಲವಂತವಾಗಿ ಎಳೆದು ವ್ಯಾನ್‌ನೊಳಗೆ ದಬ್ಬಿದರು.

ಆ ವೇಳೆ ಕಣ್ಣೀರಿಟ್ಟ ಭಕ್ತೆ ತನ್ನ ಪರಿಸ್ಥಿತಿಯನ್ನು ಪೊಲೀಸರಿಗೆ ತಿಳಿಸಿದರು. ತರುವಾಯ ಅವರನ್ನು ಬಿಟ್ಟು ಕಳುಹಿಸಿದರು.



ಮೈಸೂರು ಮಿತ್ರ ಬುಧವಾರ 10 ಸೆಪ್ಟೆಂಬರ್ 2025

ಪ್ರಾಮಾಣಿಕ ವಕೀಲರಿಗೆ ಗೌರವ ಸಮರ್ಪಣೆ



ಪ್ರಾಮಾಣಿಕ ಹಿರಿಯ ವಕೀಲರಾದ ವಾಸುದೇವ್ ಅವರನ್ನು ಮೈಸೂರು ವಕೀಲರ ಸಂಘದ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು, ಸೆ.9– ಮೈಸೂರು ವಕೀಲರ ಸಂಘದ ಮಾಜಿ ಜಂಟಿ ಕಾರ್ಯದರ್ಶಿ ಹಾಗೂ ಹಿರಿಯ ವಕೀಲ ವಾಸುದೇವ್ ಅವರನ್ನು ವಕೀಲರ ಸಂಘದಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಇವರು 2000ನೇ ಇಸವಿಯಲ್ಲಿ ಸಂಘದಲ್ಲಿ ನೋಟರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಸಂಘದ ಆವರಣದಲ್ಲಿ 24,500 ರೂ. ಹಣ ಸಿಕ್ಕಿತ್ತು. ಇದು 25 ವರ್ಷಗಳ ಹಿಂದೆ ದೊಡ್ಡ ಮೊತ್ತವೇ ಆಗಿತ್ತಾದರೂ ವಾಸುದೇವ್ ಅವರು ಕಿಂಚಿತ್ತೂ ಆಸೆಪಡದೆ, ವಾರಸುದಾರರ ಪತ್ತೆ ಮಾಡಿ ಹಣವನ್ನು ಒಪ್ಪಿಸಿದರು. ಇವರ ಪ್ರಾಮಾಣಿಕತೆ ಎಂದಿಗೂ ಸಮಾಜಕ್ಕೆ ಮಾದರಿ ಹಾಗೂ ಸ್ಮರಣೀಯ. ಈ ಹಿನ್ನೆಲೆಯಲ್ಲಿ ಸಂಘದ ವತಿಯಿಂದ ವಾಸುದೇವ್ ಅವರಿಗೆ ಮೈಸೂರು ಪೇಟ ತೊಡಿಸಿ, ಗೌರವಿಸಲಾಯಿತು.

ಈ ವೇಳೆ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಕಾರ್ಯದರ್ಶಿ ಜೆ.ಸುಧೀರ್, ಉಪಾಧ್ಯಕ್ಷ ಚಂದ್ರಶೇಖರ್, ಖಜಾಂಚಿ ಹೆಚ್.ಬಿ.ಭರತ್, ಹಿರಿಯ ವಕೀಲರೂ ಆದ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್, ಸಂಘದ ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಹಿರಿಯ ವಕೀಲರಾದ ಶಿವಾನಂದಸ್ವಾಮಿ, ಹೆಚ್.ಬಸವರಾಜಪ್ಪ, ಲೋಕೇಶ್‌ಗೌಡ, ವಿನುತ, ಸಿ.ಎಸ್.ಲೋಕೇಶ್ ಮತ್ತಿತರರಿದ್ದರು.

ಶಂಕರಪ್ರಸಾದ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ದೇವರಾಜು ಅವರ ಮಾರ್ಗದರ್ಶನದಲ್ಲಿ ಹೆಚ್.ಜೆ.ಶಂಕರಪ್ರಸಾದ್ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪಾಲಿಕೆಯಿಂದ ಆಸ್ತಿ ಮ್ಯಾಪಿಂಗ್‌ಗೆ ಹೈ–ಟೆಕ್ ಸ್ಪರ್ಶ

● 2026ರ ಏಪ್ರಿಲ್‌ನಿಂದ ಲಿಡಾರ್ ತಂತ್ರಜ್ಞಾನ ಅನುಷ್ಠಾನ ● ಸಂಪನ್ಮೂಲ ಕ್ರೋಢೀಕರಣಕ್ಕೆ ಅಧಿಕಾರಿಗಳ ವಿನೂತನ ಪ್ರಯೋಗ


ಮೈಸೂರು, ಸೆ. 9 (ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆಯು ತನ್ನ ವ್ಯಾಪ್ತಿಯ ಆಸ್ತಿಗಳ ಮ್ಯಾಪಿಂಗ್‌ಗೆ ಲಿಡಾರ್ ಮಾದರಿಯ ಜಿಐಎಸ್ ಪದ್ಧತಿಯನ್ನು ಅಳವಡಿಸಿಕೊಳ್ಳಲು ಮುಂದಾಗಿದೆ.

2026ರ ಏಪ್ರಿಲ್‌ನಿಂದ ಆಸ್ತಿ ತೆರಿಗೆಯನ್ನು ಪರಿಣಾಮಕಾರಿ ವಸೂಲಿಗೆ ಉದ್ದೇಶಿಸಲಾಗಿದ್ದು, ಅದಕ್ಕಾಗಿ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಈ ಕುರಿತಂತೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್ ಅವರು ಆಸ್ತಿ ಗಡಿಗಳು, ಕಟ್ಟಡದ ಸ್ವರೂಪ, ಮಹಡಿಗಳ ಸಂಖ್ಯೆ, ಕಟ್ಟಡದ ಒಳಭಾಗದಲ್ಲಿ ಬಳಸಿರುವ ಸಾಮಗ್ರಿಗಳ ಗುಣಮಟ್ಟ, ಭೂ ಉಪಯೋಗದ ಬದಲಾವಣೆಗಳು, ಕೆರೆಗಳು, ನಾಲೆಗಳು, ಸಾರ್ವಜನಿಕ ರಸ್ತೆಗಳು ಸೇರಿದಂತೆ ಇನ್ನಿತರ ನಿಖರ ಮಾಹಿತಿಗಳನ್ನೊಳಗೊಂಡ ಡೇಟಾ ಸಂಗ್ರಹಿಸಲು ಏರಿಯಲ್ ಲಿಡಾರ್ ತಂತ್ರಜ್ಞಾನವನ್ನು ಅಳವಡಿಸಲು ಚಿಂತನೆ ನಡೆಸಲಾಗಿದೆ ಎಂದರು.

ಈ ಸುಧಾರಿತ ತಂತ್ರಜ್ಞಾನದಿಂದ ಆಸ್ತಿಗಳ ಅಕ್ರಮ ಪರಭಾರೆ, ಅತಿಕ್ರಮಣ, ಒತ್ತುವರಿ, ಅವುಗಳ ಸ್ವರೂಪದ ಬಗ್ಗೆ ನಿಖರ ಮಾಹಿತಿ ಲಭ್ಯವಿದ್ದು, ಮೇಲಾಗಿ



ಲಿಡಾರ್ ಸ್ಕ್ಯಾನರ್



ಮೈಸೂರು ನಗರದ ಪಕ್ಷಿನೋಟ

ಪಾಲಿಕೆಗೆ ಆಸ್ತಿ ತೆರಿಗೆ ವಂಚಿಸುವುದನ್ನು ತಡೆಯಬಹುದಾಗಿದೆ. ಅಲ್ಲದೇ ಜಿಐಎಸ್ ಆಸ್ತಿ ಮ್ಯಾಪಿಂಗ್‌ನೊಂದಿಗೆ ನಾವು ನಿಖರವಾದ ಆಸ್ತಿಗಳ ಮೌಲ್ಯ–ಮಾಪನವನ್ನು ಖಚಿತಪಡಿಸಿಕೊಳ್ಳಬಹುದು. ಆಸ್ತಿಗಳ ಗಾತ್ರ, ರಚನೆಯನ್ನು ಸುಲಭವಾಗಿ ಗುರುತಿಸಬಹುದು. ಪರಿಣಾಮ, ಪಾಲಿಕೆಗೆ ಹೆಚ್ಚು ತೆರಿಗೆ ಸಂದಾಯವಾಗಿ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದರು.

ನಿಖರ ಮಾಹಿತಿಗೆ ಸಹಕಾರಿ : ಇದುವರೆಗೆ ಮೈಸೂರು ಮಹಾನಗರ ಪಾಲಿಕೆ, ಆಸ್ತಿ ತೆರಿಗೆ ನಿಗದಿ ಹಾಗೂ ವಸೂಲಿಗೆ ಅನುಸರಿಸುತ್ತಿದ್ದ ಸಾಂಪ್ರದಾಯಿಕ ವಿಧಾನಗಳಿಗೆ ಬದಲು ವೈಮಾನಿಕ ಮಾದರಿಯ ಹೊಸ ಲಿಡಾರ್ ಪದ್ಧತಿಯು ಪ್ರಸ್ತುತ ಆಸ್ತಿಗಳ ನಿಖರತೆಯನ್ನು ಸೂಚಿಸುತ್ತದೆ. ನೂತನ ತಂತ್ರಜ್ಞಾನ ಹೊಂದಿರುವ ಈ ಪದ್ಧತಿಯಿಂದ ಕಟ್ಟಡದ ಅಥವಾ ನಿವೇಶನದ ಸ್ವರೂಪ, ವಿಸ್ತೀರ್ಣ, ಗಡಿಭಾಗ, ಮಹಡಿಗಳ ಸಂಖ್ಯೆ, ಅನುಮೋದಿತ ನಕ್ಷೆ ಅನುಸಾರ ಕಟ್ಟಡ ನಿರ್ಮಿಸಲಾಗಿದೆಯೇ, ಕಟ್ಟಡಕ್ಕೆ ಬಳಸಿರುವ ಸಾಮಾಗ್ರಿಗಳ ಸ್ವರೂಪದ ನೈಜತೆಯನ್ನು ತಿಳಿಸುತ್ತದೆ ಎಂದು ಆಸಿಫ್ 'ಮಿತ್ರ' ನಿಗೆ ತಿಳಿಸಿದರು.

ಲಿಡಾರ್ ತಂತ್ರಜ್ಞಾನವು ನಮಗೆ ವಲಯ ಬದಲಾವಣೆಗಳು, ಭೂ ಅಭಿವೃದ್ಧಿ ಮತ್ತು ನಗರ ವಿಸ್ತರಣೆಯನ್ನು ಸೂಕ್ತ ಸಮಯದಲ್ಲಿ ಮೇಲ್ವಿಚಾರಣೆ ಮಾಡಲು ನೆರವಾಗುತ್ತದೆ. ಅಲ್ಲದೇ ಆಸ್ತಿಗಳ ತೆರಿಗೆಯನ್ನು ಪರಿಷ್ಕರಿಸಲು ಅನುಕೂಲವಾಗುತ್ತದೆ. ಪಾಲಿಕೆಯು ಈಗಾಗಲೇ ಇ–ಆಸ್ತಿ ಅರ್ಜಿ ಮೂಲಕ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿದ್ದು, 48,125 'ಎ' ಖಾತಾ ಮತ್ತು 4,701 'ಬಿ' ಖಾತಾಗಳು ಸೇರಿದಂತೆ 52,827 ಆಸ್ತಿಗಳಿಗೆ ಇ–ಖಾತಾ ದಾಖಲೆಗಳನ್ನು ನೀಡಿದೆ ಎಂದರು.

ಆದಾಯವೃದ್ಧಿ: ಈ ಹೊಸ ವಿಧಾನದಿಂದ ಆಸ್ತಿಗಳ ನಿಖರ ಮೌಲ್ಯಮಾಪನದ ಜೊತೆಗೆ ಶೇಕಡ 100ರಷ್ಟು ಆಸ್ತಿ ತೆರಿಗೆಯು ಸಂಗ್ರಹವಾಗುವುದರಿಂದ ಪಾಲಿಕೆಗೆ ಅತೀ ಹೆಚ್ಚು ಅಂದರೆ, ಸುಮಾರು 400 ಕೋಟಿ ರೂ. ಆರ್ಥಿಕ ಸಂಪನ್ಮೂಲ ವೃದ್ಧಿಯಾಗಲಿದೆ. ಈ ಹಣದಿಂದ ಮೈಸೂರು ನಗರದ ತೆರಿಗೆದಾರರಿಗೆ ರಸ್ತೆ, ನೀರು, ಚರಂಡಿ, ಶೌಚಾಲಯ, ಉದ್ಯಾನವನ, ಬೀದಿ ದೀಪ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಒದಗಿಸಲು ಸುಲಭವಾಗುತ್ತದೆ ಎಂದೂ ಶೇಕ್ ತನ್ವೀರ್ ಆಸಿಫ್ ತಿಳಿಸಿದರು.

ಏರಿಯಲ್ ಲಿಡಾರ್ ಕಾರ್ಯವೈಖರಿ


ಏರಿಯಲ್ ಲಿಡಾರ್ ವಿಮಾನ, ಡ್ರೋನ್ ಹಾಗೂ ಹೆಲಿಕಾಪ್ಟರ್‌ನಲ್ಲಿ ಅಳವಡಿಸಲಾದ ಸಂವೇದಕ ಉಪಕರಣ. ಇದು ಪ್ರತಿ ಸೆಕೆಂಡಿಗೆ ಸಾವಿರಾರು ಲೇಸರ್ ಪಲ್ಸ್‌ಗಳನ್ನು ಹೊರ ಸೂಸುತ್ತದೆ. ಈ ಪಲ್ಸ್‌ಗಳು ಮರಗಳು, ಕಟ್ಟಡಗಳು, ಭೂಪ್ರದೇಶವನ್ನು ಸಂದಿಸುತ್ತದೆ. ಇವು ನಿಖರವಾಗಿ ನಿರ್ದಿಷ್ಟ ಅಂತರವನ್ನು ಲೆಕ್ಕಾಚಾರ ಮಾಡಿ ಸಕ್ರಿಯಗೊಳಿಸುತ್ತವೆ. ವೈಮಾನಿಕ ಲಿಡಾರ್ ತಂತ್ರಜ್ಞಾನವು ವಿಶೇಷವಾಗಿ ವೇಗ, ನಿಖರತೆಯನ್ನು ದೃಢಪಡಿಸುತ್ತದೆ. ಇದು ಸಾಂಪ್ರದಾಯಿಕ ವಿಧಾನಗಳಿಗಿಂತ ಹೆಚ್ಚು ಭಿನ್ನವಾಗಿದೆ.

ಇಂದು ಯುವ ಸಂಭ್ರಮ ಉದ್ಘಾಟನೆ

● ಸಿನಿಮಾ ತಾರೆಯರಾದ ಯುವ ರಾಜ್‌ಕುಮಾರ್, ಅಮೃತ ಅಯ್ಯಂಗಾರ್ ಭಾಗಿ ● ಮೊದಲ ದಿನ 25 ಕಾಲೇಜು ತಂಡಗಳಿಂದ ಪ್ರದರ್ಶನ

ಮೈಸೂರು,ಸೆ.9– ಯುವ ಸಂಭ್ರಮದ ಉದ್ಘಾಟನಾ ಸಮಾರಂಭ ಸೆ10ರಂದು ಸಂಜೆ 4ಕ್ಕೆ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ವಿಶೇಷ ಆಹ್ವಾನಿತರಾಗಿ ಸಿನಿಮಾ ತಾರೆಯರಾದ ಯುವ ರಾಜ್‌ಕುಮಾರ್ ಹಾಗೂ ಅಮೃತ ಅಯ್ಯಂಗಾರ್ ಪಾಲ್ಗೊಳ್ಳಲಿದ್ದಾರೆ.

ಪ್ರತಿ ವರ್ಷದಂತೆ ಈ ಬಾರಿಯೂ ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಯುವ ಸಂಭ್ರಮವು ಸೆ.10ರಿಂದ 18ರವರೆಗೆ ನಡೆಯಲಿದ್ದು, ಪ್ರತಿದಿನ ಸಂಜೆ 4ರಿಂದ



ಯುವ



ಅಮೃತ

ರಾತ್ರಿ 10.30ರವರೆಗೆ ವಿವಿಧ ಕಾಲೇಜು ತಂಡಗಳು ಸಮೂಹ ನೃತ್ಯ ಪ್ರದರ್ಶನ ನೀಡಲಿವೆ.

ಮೊದಲ ದಿನವಾದ ಬುಧವಾರ ಉದ್ಘಾಟನಾ ಸಮಾರಂಭದ ನಂತರ ರಾತ್ರಿ 8ರಿಂದ ಕಾಲೇಜು ತಂಡಗಳ ನೃತ್ಯ ಪ್ರದರ್ಶನಗಳು ಕಳೆಗಟ್ಟಲಿವೆ. ಸಂಗೀತ ವಿವಿ ತಂಡದಿಂದ ಸ್ವರ ಭಾರತಿ ಪ್ರದರ್ಶನದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಆರಂಭವಾಗಲಿದೆ. ಸಾತಗಳ್ಳಿಯ ಮಹಾತ್ಮ ಗಾಂಧಿ ಬಿಎಡ್ ಕಾಲೇಜು ತಂಡದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆ ಕುರಿತ ಸಾಹಿತ್ಯ ಸಂಗೀತದ ಗೀತೆಗೆ ನೃತ್ಯ ಪ್ರದರ್ಶನ ನಡೆಯಲಿದೆ. ಮಹಾರಾಜ ಕಾಲೇಜು ತಂಡದಿಂದ ದಸರಾ ವೈಭವ ಎಂಬ ಗೀತೆಗೆ ನೃತ್ಯ ಪ್ರದರ್ಶನ ಇದ್ದು, ಒಟ್ಟು 25 ಕಾಲೇಜು ತಂಡಗಳು ಪ್ರದರ್ಶನ ನೀಡಲಿವೆ. ಗುರುವಾರದಿಂದ ಪ್ರತಿದಿನ 59 ಕಾಲೇಜು ತಂಡಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಸಾಮಾಜಿಕ ಮಾಧ್ಯಮಗಳ ನಿಷೇಧ ಖಂಡಿಸಿ ಹೋರಾಟ

ನೇಪಾಳ ಸಂಸತ್ ಕಟ್ಟಡಕ್ಕೆ ಬೆಂಕಿ; ದೇಶ ತೊರೆದ ಪ್ರಧಾನಿ ಕೆ.ಪಿ.ಶರ್ಮಾ ಒಲಿ

ಕಠ್ಮಂಡು, ಸೆ.9– ನೆರೆಯ ನೇಪಾಳದಲ್ಲಿ ಭುಗಿಲೆದ್ದಿರುವ ಸಂಘರ್ಷ ತಾರಕಕ್ಕೇರಿರುವಂತೆಯೇ ಪ್ರಧಾನಿ ಕೆ.ಪಿ. ಶರ್ಮಾ ಒಲಿ ತಮ್ಮ ಹುದ್ದೆಗೆ ರಾಜಿನಾಮೆ ನೀಡಿದ್ದಾರೆ.

ಚೀನಾ ಪರ ಒಲವು ಹೊಂದಿರುವ ಕೆಪಿ ಶರ್ಮಾ ಒಲಿ ಇತ್ತೀಚೆಗೆ ಫೇಸ್ ಬುಕ್, ಟ್ವಿಟರ್ ಮತ್ತು ಇನ್‌ಸ್ಟಾಗ್ರಾಮ್ ನಂತಹ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸುವ ಕ್ರಮ ಕೈಗೊಂಡಿದ್ದರು. ಸರ್ಕಾರದ ಈ ನಿರ್ಧಾರದ ವಿರುದ್ಧ ನೇಪಾಳದಾದ್ಯಂತ ವ್ಯಾಪಕ ಪ್ರತಿಭಟನೆಗೆ ಕಾರಣವಾಗಿತ್ತು.

ಪ್ರತಿಭಟನೆಗಳು ಸಂಘರ್ಷವಾಗಿ ಮಾರ್ಪಟ್ಟಿದ್ದು, ತಮ್ಮದೇ ಸರ್ಕಾರದ ವಿರುದ್ಧ ತಿರುಗಿ ಬಿದ್ದಿರುವ ಪ್ರತಿಭಟನಾಕಾರರು ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ್ದಾರೆ. ಪ್ರತಿಭಟನಾಕಾರರು ರಾಜಧಾನಿ ಕಠ್ಮಂಡುವಿನ ಹಲವು ಭಾಗಗಳಲ್ಲಿ 'ಕೆಪಿ ಚೋರ್, ದೇಶ್ ಛೋಡ್' (ಕೆಪಿ ಕಳ್ಳ, ದೇಶ ಬಿಟ್ಟು ತೊಲಗಿ) ಮತ್ತು 'ಭ್ರಷ್ಟ ನಾಯಕರ ವಿರುದ್ಧ ಕ್ರಮ ಕೈಗೊಳ್ಳಿ' ಮುಂತಾದ ಘೋಷಣೆಗಳನ್ನು ಕೂಗಿದರು.

ನೇಪಾಳದ ರಾಜಕೀಯ ನಾಯಕರು ಮನೆ–ಕಚೇರಿಗಳ ಮೇಲೆ ದಾಳಿ ಮಾಡಿರುವ ಪ್ರತಿಭಟನಾಕಾರರು ನಾಯಕರ ಮನೆಗಳಿಗೆ ಬೆಂಕಿ ಹಚ್ಚಿ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈಗಾಗಲೇ ಪ್ರತಿಭಟನಾಕಾರರಿಗೆ ಮಣಿದಿರುವ ಹಲವು ಕ್ಯಾಬಿನೆಟ್ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಕೆ.ಪಿ. ಶರ್ಮಾ ಒಲಿ ರಾಜೀನಾಮೆ: ಇನ್ನು ಕೆ.ಪಿ. ಶರ್ಮಾ ಒಲಿ ರಾಜೀನಾಮೆಗೆ ಪ್ರತಿಭಟನಾಕಾರರು ಪಟ್ಟು ಹಿಡಿದಿದ್ದರು. ಪ್ರಧಾನಿ ಒಲಿ ಪ್ರತಿಭಟನಾಕಾರರನ್ನು ಓಲೈಸಲು ಎಷ್ಟೇ ಪ್ರಯತ್ನಿಸಿದರೂ ಬಗ್ಗದ ಪ್ರತಿಭಟನಾಕಾರರು ಅವರ ರಾಜಿನಾಮೆಗೆ ಪಟ್ಟು ಹಿಡಿದಿದ್ದರು. ಇದೇ ಕಾರಣಕ್ಕೆ ಕೆಪಿ ಶರ್ಮಾ ಒಲಿ ಸರ್ವಪಕ್ಷಗಳ ಸಭೆ ಕರೆದಿದ್ದರು. ಆದರೆ, ಈಗ ಅವರು ಪ್ರಧಾನಿ ಹುದ್ದೆಗೆ ರಾಜಿನಾಮೆ ನೀಡಿದ್ದಾರೆ.



ನೇಪಾಳದ ನಾಲ್ಕನೇ ಅತಿದೊಡ್ಡ ರಾಷ್ಟ್ರೀಯ ಪಕ್ಷವಾದ ರಾಷ್ಟ್ರೀಯ ಸ್ವತಂತ್ರ ಪಕ್ಷದ ಇಪ್ಪತ್ತೊಂದು ಸಂಸದರು ಮಂಗಳವಾರ ಹಿಂಸಾತ್ಮಕ ಪ್ರತಿಭಟನೆಗಳ ನಡುವೆ ಸಾಮೂಹಿಕವಾಗಿ ರಾಜೀನಾಮೆ ನೀಡಿದ್ದಾರೆ. ನೇಪಾಳದಲ್ಲಿ ಸೋಷಿಯಲ್ ಮೀಡಿಯಾ ಬ್ಯಾನ್ ಆದೇಶ ವಿರೋಧಿಸಿ ನಡೆದ ತೀವ್ರ ಸ್ವರೂಪದ ಪ್ರತಿಭಟನೆಯಲ್ಲಿ 20ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಅಲ್ಲದೇ 250ಕ್ಕೂ ಹೆಚ್ಚು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ.

ನೇಪಾಳ ತೊರೆದ ಒಲಿ: ಇದರ ನಡುವೆ ನೇಪಾಳದ ಪ್ರಧಾನಿ ದೇಶ ತೊರೆದಿದ್ದಾರೆ ಎಂದು ಹೇಳಲಾಗಿದ್ದು, ನೇಪಾಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದು ಭಾರತದ ಮೇಲೂ ಪರಿಣಾಮ ಬೀರಬಹುದು ಎನ್ನುವ ಆತಂಕ ಶುರುವಾಗಿದೆ. ಇದಕ್ಕೆ ಇಂಬು ನೀಡುವಂತೆ ನೇಪಾಳ ಪ್ರಧಾನಿ ಕೆ.ಪಿ.ಶರ್ಮಾ ಒಲಿ, ವಿದೇಶಾಂಗ ಸಚಿವ ಅರ್ಜು ದೇವುಬಾ ಮತ್ತು 7 ಕ್ಯಾಬಿನೆಟ್ ಸಚಿವರು ಕಠ್ಮಂಡುವಿನಿಂದ ನೇಪಾಳ ಸೇನಾ ಹೆಲಿಕಾಪ್ಟರ್‌ಗಳ ಮೂಲಕ ತೆರಳಿದ್ದಾರೆ ಎಂದು ಹೇಳಲಾಗಿದೆ. ಈ ಕುರಿತ ವಿಡಿಯೋಗಳು ವ್ಯಾಪಕ ವೈರಲ್ ಆಗುತ್ತಿವೆ.

ಮನೆಗೆ ಬೆಂಕಿ, ಮಾಜಿ ಪ್ರಧಾನಿ ಪತ್ನಿ ಸಾವು: ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಮಾಜಿ ಪ್ರಧಾನಿ ಜಲನಾಥ್ ಖನಾಲ್ ಅವರ ಪತ್ನಿ ರಾಜ್ಯಲಕ್ಷ್ಮಿ ಚಿತ್ರಾಕರ್ ಆಸ್ಪತ್ರೆಯಲ್ಲೇ ಸಾವನ್ನಪ್ಪಿದ್ದಾರೆ. ಜನರಲ್–ಝಡ್ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆ ಹಿಂಸಾತ್ಮಕ ರೂಪಕ್ಕೆ ತಿರುಗಿದೆ. ಪ್ರತಿಭಟನಾಕಾರರು ರಾಜಕೀಯ ನಾಯಕರನ್ನೇ ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ. 2ನೇ ದಿನವೂ ಪ್ರತಿಭಟನೆ ಮುಂದುವರೆದಿದ್ದು, ಸಂಸತ್ ಭವನ, ಸುಪ್ರೀಂಕೋರ್ಟ್, ಅಧಿಕೃತ ಸರ್ಕಾರಿ ಕಟ್ಟಡಗಳು ಮಾತ್ರವಲ್ಲದೇ ಪ್ರಮುಖ ನಾಯಕರ ಮನೆಗಳಿಗೆ ಬೆಂಕಿ ಹಚ್ಚಿ, ವಿಧ್ವಂಸಕ ಕೃತ್ಯಗಳನ್ನು ಎಸಗಿದ್ದಾರೆ.

ಮದ್ದೂರು ಗಣೇಶನ ಮೆರವಣಿಗೆ ವೇಳೆ ಕಲ್ಲು ತೂರಾಟ

ಕರ್ನಾಟಕ ಸೇನಾ ಪಡೆಯಿಂದ ಮೈಸೂರಲ್ಲಿ ಪ್ರತಿಭಟನೆ



ಮದ್ದೂರಿನ ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಹಳೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಸೆ.9(ಜಿಎ)–ಮದ್ದೂರಿನ ಗಣೇಶಮೂರ್ತಿ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆಸಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಹಳೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೆರವಣಿಗೆ ಬರುತ್ತಿದ್ದಂತೆ ಪೂರ್ವ ನಿಯೋಜಿತವಾಗಿ ಪ್ರಾರ್ಥನಾ ಮಂದಿರದಿಂದ ಕಲ್ಲುಗಳನ್ನು ಇಟ್ಟುಕೊಂಡು, ಏಕಾಏಕಿ ಕಲ್ಲುಗಳನ್ನು ಎಸೆದಿರುವುದು ಖಂಡನೀಯ. ಈ ಘಟನೆಯಿಂದ ಹಲವಾರು ಹಿಂದೂಗಳಿಗೆ, ಪೊಲೀಸರಿಗೆ ಗಾಯವಾಗಿ ಆಸ್ಪತ್ರೆಗೆ ದಾಖಲಾಗಿರುವುದು ಅತ್ಯಂತ ನೋವಿನ ಸಂಗತಿ. ಈ ಘಟನೆ ನೋಡಿದರೆ ನಾವು ಪಾಕಿಸ್ತಾನದಲ್ಲಿದ್ದೇವೋ, ಕರ್ನಾಟಕದಲ್ಲಿದ್ದೇವೋ ಗೊತ್ತಾಗುತ್ತಿಲ್ಲ. ತಲತಲಾಂತರಗಳಿಂದ ರಾಜ್ಯದಲ್ಲಿ ಗಣಪತಿ ವಿಸರ್ಜನೆ ಮೆರವಣಿಗೆ ಮಾಡುವುದು ಸಾರ್ವಜನಿಕ ರಸ್ತೆಯಲ್ಲಿಯೇ. ಮುಸ್ಲಿಮರ ಹಬ್ಬಗಳು ನಮ್ಮ ದೇಶದಲ್ಲಿ ಯಾವುದೇ ಗಲಾಟೆಗಳಿಲ್ಲದೆ ನಡೆಯು ತ್ತವೆ. ಆದರೆ, ದೇಶದ ಬಹುಸಂಖ್ಯಾತ ಹಿಂದೂಗಳ ಹಬ್ಬಗಳಿಗೆ ಪದೇ ಪದೇ ತೊಂದರೆ ಕೊಡುತ್ತಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಕಳೆದ ವರ್ಷ ನಾಗಮಂಗಲದಲ್ಲಿ, ಇತ್ತೀಚೆಗೆ ಮೈಸೂರಿನ ಉದಯಗಿರಿಯಲ್ಲೂ ಈ ರೀತಿ ಕಲ್ಲು ತೂರಾಟ ನಡೆದಿದೆ. ಮುಖ್ಯಮಂತ್ರಿಗಳು ಅತಿಯಾದ ಓಲೈಕೆಗಾಗಿ ಸಮುದಾಯವನ್ನು ಶಾಂತಿಪ್ರಿಯರು ಎಂದು ಹೇಳಿರುವುದು ಹಾಸ್ಯಾಸ್ಪದವಾಗಿದೆ. ಮೆರವಣಿಗೆ ಸಾಗುವಾಗ ಕಲ್ಲು ಎಸೆಯುವವರು ಶಾಂತಿ ದೂತರಾ? ನಾಡಿನ ಅನ್ನ ನೀರು ಕುಡಿದ ಇವರು ನಮ್ಮ ಕನ್ನಡ ಭುವನೇಶ್ವರಿ ಹಾಗೂ ಭಾರತ ಮಾತೆಯನ್ನು ಒಪ್ಪಿಕೊಳ್ಳದೆ, ಜೈ ಪ್ಯಾಲೆಸ್ತೇನ್, ಜೈ ಪಾಕಿಸ್ತಾನ್ ಎನ್ನುವುದು ಇವರ ವಿಕೃತ ಮನಸ್ಥಿತಿ ಯಾಗಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು. ಸರ್ಕಾರ 5 ಗ್ಯಾರಂಟಿ ಜೊತೆಗೆ ಹಿಂದೂಗಳಿಗೆ ಕಲ್ಲಿನಲ್ಲಿ ಹೊಡೆಸಿಕೊಳ್ಳುವ ಭಾಗ್ಯವನ್ನೂ ಕರುಣಿಸುತ್ತಿದೆ. ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದ್ದು, ಕೂಡಲೇ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಿ, ಮತ್ತೆ ಈ ರೀತಿಯ ಪ್ರಕರಣಗಳು ಪುನರಾವರ್ತನೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಗೋಲ್ಡನ್ ಸುರೇಶ್, ಪ್ರಭುಶಂಕರ್, ಸಿಂಧುವಳ್ಳಿ ಶಿವಕುಮಾರ್. ಪ್ರಜೀಶ್, ಮಧುವನ ಚಂದ್ರು. ಗಿರೀಶ್, ಕೃಷ್ಣಪ್ಪ, ಶಿವಲಿಂಗಯ್ಯ, ವರಕೂಡು ಕೃಷ್ಣೇಗೌಡ, ನೇಹ, ಭಾಗ್ಯಮ್ಮ, ಶೋಭಾ ರಾಣಿಗೌಡ, ಹೊನ್ನೇಗೌಡ, ಡಾ.ಶಾಂತರಾಜೇ ಅರಸ್, ಮಹಾದೇವಸ್ವಾಮಿ, ಪದ್ಮ, ತಾಯೂರ್ ಗಣೇಶ್, ಸುನಿಲ್, ನಂದಕುಮಾರ್, ನಾರಾಯಣಗೌಡ, ಹನುಮಂತಯ್ಯ, ಅಶೋಕ್ ಇನ್ನಿತರರಿದ್ದರು.

ದಸರಾ ಸಮೀಪಿಸುತ್ತಿದ್ದರೂ ಡಾಂಬರೀಕರಣ ಕಾಣದ ರಸ್ತೆಗಳು

ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿ ಪ್ರತಿಭಟನೆ

ಮೈಸೂರು, ಸೆ.9(ಜಿಎ)–ದಸರಾ ಸಮೀಪಿಸುತ್ತಿದ್ದರೂ ರಸ್ತೆಗಳಿಗೆ ಡಾಂಬರೀಕರಣ ಮಾಡಿ ಗುಂಡಿಗಳನ್ನು ಮುಚ್ಚಿಸದಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ನಗರದ ಸಯ್ಯಾಜಿರಾವ್ ರಸ್ತೆಯಲ್ಲಿ ಪ್ರತಿಭಟನೆ ನಡೆಸಲಾಯಿತು.

ನಾಡಹಬ್ಬ ದಸರಾ ಉದ್ಘಾಟನೆಗೆ ಕೆಲ ದಿನಗಳು ಮಾತ್ರ ಉಳಿದಿದೆ. ಆದರೂ ರಸ್ತೆಗಳಿಗೆ ಡಾಂಬರೀಕರಣ ಮಾಡಿಲ್ಲ. ಯುದ್ಧ ಬಂದಾಗ ಶಸ್ತ್ರಾಭ್ಯಾಸ ಮಾಡಿದಂತೆ ರಸ್ತೆಗಳಿಗೆ ಪ್ಯಾಚ್ ಹಾಕಲಾಗುತ್ತಿದೆ. ದೊಡ್ಡ ರಸ್ತೆಗಳು ಗುಂಡಿ ಬಿದ್ದಿವೆ. ಅದನ್ನು ಸಹ ಮುಚ್ಚದೆ ತೇಪೆ ಹಾಕುತ್ತಿದ್ದಾರೆ. ಬೇಸಿಗೆ ಇದ್ದಾಗ ರಸ್ತೆಗಳಿಗೆ ಡಾಂಬರೀಕರಣ ಮಾಡಬೇಕು. ಆದರೆ ಮಳೆಗಾಲದಲ್ಲಿ ಕೆಲಸ ಆರಂಭಿಸುತ್ತೀರಿ. ಇದರಿಂದ ಡಾಂಬರ್ ಸರಿಯಾಗಿ ನಿಲ್ಲುವುದಿಲ್ಲ. ಇಂಜಿನಿಯರ್‌ಗಳು ತಮಗೆ ಕಮಿಷನ್ ಬಂದರೆ ಸಾಕು ಎಂದು ಕೆಲಸ ಮಾಡಿಸುತ್ತಾರೆ. ಇದಕ್ಕೆ ಜನಪ್ರತಿನಿಧಿಗಳು, ವಿರೋಧ ಪಕ್ಷದವರು ಸಹ ಚಕಾರ ಎತ್ತುತ್ತಿಲ್ಲ. ಜನಸಾಮಾನ್ಯರ ಹಣ ಪೋಲಾಗುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಅಗ್ರಹಾರ ಸುತ್ತಮುತ್ತ ಚೆನ್ನಾಗಿರುವ ಮೋರಿಗೆ ಕಟ್ಟಿರುವ ಸ್ಲ್ಯಾಬುಗಳನ್ನು ಹೊಡೆದಾಕಿ ಹೊಸದಾಗಿ ನಿರ್ಮಾಣ ಮಾಡಿದ್ದಾರೆ. ಅದೂ ಕೂಡ ಕಳಪೆಯಾಗಿದೆ. ಒಂದು ತಿಂಗಳು ಆಗಿಲ್ಲ ಆಗಲೇ ಮೋರಿ ಸುತ್ತ ಹಾಕಿರುವ ಸ್ಲ್ಯಾಬ್‌ಗಳು ಹೊಡೆದು ಹೋಗಿವೆ. ಇದೇ ರಸ್ತೆಯಲ್ಲಿ ಮುಖ್ಯಮಂತ್ರಿಗಳು ದೋಸೆ ತಿನ್ನುವುದಕ್ಕೆ ಬರುತ್ತಾರೆ. ಆಗ ರಸ್ತೆಯನ್ನು ಬಂದ್ ಮಾಡಿಸುತ್ತಾರೆ. ಒಂದು ಬಾರಿಯಾದರೂ ಕಾಮಗಾರಿ ವೀಕ್ಷಣೆ ಮಾಡುವುದಕ್ಕೆ ಬರಲಿಲ್ಲ. ಅಧಿಕಾರಿಗಳು, ಜನಪ್ರತಿನಿಧಿಗಳೂ ಕೇಳುವುದಿಲ್ಲ ಇಂಥ ಪರಿಸ್ಥಿತಿಯಲ್ಲಿ ಕಾಟಾಚಾರಕ್ಕಾಗಿ ದಸರಾ ಆಚರಣೆ ಮಾಡುತ್ತಿದ್ದಾರೆ ಎಂದು ದೂರಿದರು.

ಸರ್ಕಾರ ಗೋಲ್ಡ್ ಪಾಸ್ ಬಿಡುಗಡೆ ಮಾಡಿ ದುಡ್ಡು ಮಾಡಲು ನೋಡುತ್ತಿದೆಯೇ ಹೊರತು ತುರ್ತು ಕಾಮಗಾರಿಗಳ ಬಗ್ಗೆ ಗಮನಹರಿಸುತ್ತಿಲ್ಲ. ದಸರಾದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರಿಗೆ ಕಾಳಜಿ ಇಲ್ಲ. ದೀಪಾಲಂಕಾರಕ್ಕೆ ಕೊಡುವ ಪ್ರಾಮುಖ್ಯತೆಯನ್ನು ರಸ್ತೆ ದುರಸ್ಥಿಗೆ ಕೊಡುತ್ತಿಲ್ಲ. ಈ ಬಾರಿಯ ದಸರಾ ಜನ ಮರುಳೋ ಜಾತ್ರೆ ಮರುಳೋ ಎಂಬಂತಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಗುಂಡಿ ಮುಚ್ಚಿಸಿ ಅಪಘಾತಗಳಿಂದ ಮುಕ್ತಿಗೊಳಿಸಿ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಗುರುಬಸಪ್ಪ, ಗೋಪಿ, ಪ್ಯಾಲೇಸ್ ಬಾಬು, ಎಲ್‌ಐಸಿ ಸಿದ್ದಪ್ಪ, ಗೋವಿಂದರಾಜು, ಸ್ವಾಮಿಗೌಡ, ಹರೀಶ್ ಕುಮಾರ್, ಚಿನ್ನಪ್ಪ, ಶಿವುಗೌಡ, ರಮೇಶ್, ಮಾದಪ್ಪ, ಸ್ವಾಮಿ ಗೈಡ್ ಹಲವರು ಪಾಲ್ಗೊಂಡಿದರು.



ರಸ್ತೆಗೆ ಡಾಂಬರೀಕರಣ, ಗುಂಡಿಗಳನ್ನು ಮುಚ್ಚಿಸದಿರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಮಂಗಳವಾರ ನಗರದ ಸಯ್ಯಾಜಿರಾವ್ ರಸ್ತೆಯಲ್ಲಿ ಪ್ರತಿಭಟನೆ ನಡೆಸಲಾಯಿತು.

ದೇಶ - ವಿದೇಶ

porn siteಗಳಲ್ಲಿ ನಟಿ ಐಶ್ವರ್ಯಾ ರೈ ಚಿತ್ರಗಳ ಬಳಕೆ



ಮುಂಬೈ: ಅಶ್ಲೀಲ ಚಿತ್ರಗಳ ವೆಬ್‌ಸೈಟ್‌ಗಳಲ್ಲಿ ತನ್ನ ಚಿತ್ರವನ್ನು ಅಶ್ಲೀಲವಾಗಿ ಬಳಸಿಕೊಳ್ಳಲಾಗು ತ್ತಿದ್ದು, ಇದಕ್ಕೆ ತಡೆ ನೀಡುವಂತೆ ಖ್ಯಾತ ಬಾಲಿವುಡ್ ನಟಿ ಐಶ್ವರ್ಯಾ ರೈ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಐಶ್ವರ್ಯಾ ರೈ ಬಚ್ಚನ್ ಮಂಗಳವಾರ ದೆಹಲಿ ಹೈಕೋರ್ಟ್ ಅನ್ನು ತಮ್ಮ ವ್ಯಕ್ತಿತ್ವ ಹಕ್ಕುಗಳನ್ನು ರಕ್ಷಿಸುವಂತೆ ಮತ್ತು ಕೆಲವು ವ್ಯಕ್ತಿಗಳು ತಮ್ಮ ಹೆಸರು, ಚಿತ್ರಗಳು ಮತ್ತು ಕೃತಕ ಬುದ್ಧಿಮತ್ತೆಯಿಂದ ರಚಿತವಾದ ಅಶ್ಲೀಲ ಕಂಟೆಂಟ್‌ಗಳನ್ನು ಅನಧಿಕೃತವಾಗಿ ಬಳಸದಂತೆ ತಡೆಯುವಂತೆ ಒತ್ತಾಯಿಸಿದ್ದಾರೆ.

ನ್ಯಾಯಮೂರ್ತಿ ತೇಜಸ್ ಕರಿಯಾ ಅವರು ಪ್ರತಿ ವಾದಿಗಳಿಗೆ ಎಚ್ಚರಿಕೆ ನೀಡುವ ಮಧ್ಯಂತರ ಆದೇಶವನ್ನು ಹೊರಡಿಸುವುದಾಗಿ ಮೌಖಿಕವಾಗಿ ಸುಳಿವು ನೀಡಿದರು. ನಟಿ ಐಶ್ವರ್ಯಾ ರೈ ಪರವಾಗಿ ಹಾಜರಾದ ಹಿರಿಯ ವಕೀಲ ಸಂದೀಪ್ ಸೇಥಿ, 'ನಟಿ ತಮ್ಮ ಪ್ರಚಾರ ಮತ್ತು ವ್ಯಕ್ತಿತ್ವ ಹಕ್ಕುಗಳನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಮತ್ತು ಕೆಲವು ಸಂಪೂರ್ಣವಾಗಿ ಅವಾಸ್ತವಿಕ ನಿಕಟ ಛಾಯಾಚಿತ್ರಗಳನ್ನು ಇಂಟರ್ನೆಟ್‌ನಲ್ಲಿ ಪ್ರಸಾರ ಮಾಡಲಾಗುತ್ತಿದೆ' ಎಂದು ವಾದಿಸಿದರು.

ಮಾಜಿ ಪಿಎಂ ಥಾಕ್ಸಿನ್ ಜೈಲಲ್ಲೇ ಕಳೆಯಬೇಕೆಂದ ಸುಪ್ರೀಂಕೋರ್ಟ್



ಬ್ಯಾಂಕಾಕ್: ಅಕ್ರಮ ಸಂಪಾದನೆ ಮತ್ತು ಅಧಿಕಾರ ದುರುಪಯೋಗ ಮಾಡಿಕೊಂಡ ಆರೋಪಕ್ಕೆ ಶಿಕ್ಷೆಗೆ ಗುರಿಯಾಗಿರುವ ಥಾಯ್ಲೆಂಡ್ ಮಾಜಿ ಪ್ರಧಾನಿ ಥಾಕ್ಸಿನ್ ಶಿನಾವತ್ರಾ 1 ವರ್ಷ ಸೆರೆವಾಸ ಅನುಭವಿಸಲೇಬೇಕು ಎಂದು ಅಲ್ಲಿನ ಸುಪ್ರೀಂ ಕೋರ್ಟ್ ಆದೇಶಿಸಿದೆ. ಶಿಕ್ಷೆಯು 2023ರಲ್ಲೇ ಆರಂಭವಾಗಬೇಕಿತ್ತು. ಆದರೆ ಅಧಿಕಾರಿಗಳ ತಪ್ಪಿನಿಂದಾಗಿ ಅದು ವಿಳಂಬವಾಗಿದೆ ಎಂಬ ಆರೋಪ ಕುರಿತ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ನಡೆಸಿತು. ಥಾಕ್ಸಿನ್ ಅವರಿಗೆ ವಿಧಿಸಿದ ಶಿಕ್ಷೆಯನ್ನು ಅಧಿಕಾರಿಗಳು ಸಮರ್ಪಕವಾಗಿ ಜಾರಿಗೆ ತಂದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಾಧೀಶರು, ಪೊಲೀಸ್ ಆಸ್ಪತ್ರೆಯಲ್ಲಿ ಇದ್ದಮಾತ್ರಕ್ಕೆ ಅದನ್ನು ಶಿಕ್ಷೆ ಎಂದು ಪರಿಗಣಿಸಲಾಗದು. ಅವರು ಶಿಕ್ಷೆಯ ಸಂಪೂರ್ಣ ಅವಧಿಯನ್ನು ಜೈಲಿನಲ್ಲೇ ಕಳೆಯಬೇಕು ಎಂದು ನಿರ್ದೇಶಿಸಿದರು. ಸ್ವಯಂ ಗಡಿಪಾರಾಗಿದ್ದ ಥ್ಯಾಕ್ಸಿನ್ ದಶಕದ ನಂತರ ಸ್ವದೇಶಕ್ಕೆ ಮರಳಿದ್ದರು. ವೈದ್ಯಕೀಯ ಕಾರಣ ನೀಡಿ ಮಧ್ಯರಾತ್ರಿ ಅವರನ್ನು ಬ್ಯಾಂಕಾಕ್‌ನಲ್ಲಿರುವ ಪೊಲೀಸ್ ಜನರಲ್ ಆಸ್ಪತ್ರೆಯ ವಿಶೇಷ ಕೊಠಡಿಗೆ ಸ್ಥಳಾಂತರಿಸಲಾಗಿತ್ತು.

ಪರೀಕ್ಷೆಗಳಿಗೆ ಪ್ರವೇಶ ನಿರಾಕರಣೆ; ಪ್ರಾಧ್ಯಾಪಕರಿಗೆ ಚಾಕು ಇರಿದ ವಿದ್ಯಾರ್ಥಿ



ನುಜಿವಿಡು: ಪ್ರಾಯೋಗಿಕ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನಿರಾಕರಿಸಿದ ಹಿನ್ನೆಲೆ ಪ್ರಾಧ್ಯಾಪಕರೊಬ್ಬರನ್ನು ವಿದ್ಯಾರ್ಥಿಯೊಬ್ಬ ಚಾಕುವಿನಿಂದ ಇರಿದಿರುವ ಘಟನೆ ಆಂಧ್ರಪ್ರದೇಶದ ನುಜ್ವಿಡ್‌ನ ಐಐಐಟಿ ಕಾಲೇಜಿನಲ್ಲಿ ನಡೆದಿದೆ. ವಿನಯ್ ಎಂಬ ಎಂಟೆಕ್ ಪ್ರಥಮ ವರ್ಷದ ವಿದ್ಯಾರ್ಥಿಯೊಬ್ಬ ಪ್ರಾಧ್ಯಾಪಕರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ, ಇದೀಗ ಪೊಲೀಸರ ಅತಿಥಿಯಾಗಿದ್ದಾನೆ. ವಿನಯ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದರಿಂದ ತರಗತಿಗಳಿಗೆ ಗೈರಾಗಿದ್ದನು. ಹೀಗಾಗಿ, ಕೇವಲ ಶೇ.25ರಷ್ಟು ಹಾಜರಾತಿ ಮಾತ್ರ ಹೊಂದಿದ್ದ. ಪ್ರಾಯೋಗಿಕ ಪರೀಕ್ಷೆಗಳಿಗೆ ಪ್ರವೇಶ ನಿರಾಕರಿಸಿದ ನಂತರ ಪ್ರಾಧ್ಯಾಪಕರೊಬ್ಬರಿಗೆ ಕ್ಯಾಂಪಸ್‌ನೊಳಗೆ ಇರಿದಿದ್ದಾನೆ ಎಂದು ಡಿಎಸ್‌ಪಿ ಕೆವಿವಿಎನ್‌ವಿ ಪ್ರಸಾದ್ ತಿಳಿಸಿದ್ದಾರೆ. ಕ್ಯಾಂಪಸ್‌ನಲ್ಲಿರುವ ಹಾಸ್ಟೆಲ್‌ನಲ್ಲಿ ತಂಗಿದ್ದ ವಿನಯ್ ಎರಡು ಚಾಕುಗಳನ್ನು ಹಿಡಿದುಕೊಂಡು ಪ್ರೊಫೆಸರ್ ರಾಜು ಮೇಲೆ ಹಲ್ಲೆ ನಡೆಸಿದ್ದಾನೆ.

ಗಾಯಗೊಂಡ ಪ್ರಾಧ್ಯಾಪಕರನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ವಿನಯ್‌ನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿವಮೊಗ್ಗದಲ್ಲಿ ಪಾಕಿಸ್ತಾನ ಪರ ಘೋಷಣೆ: ವಿಡಿಯೋ ವೈರಲ್, ಕೇಸ್ ದಾಖಲು



ಶಿವಮೊಗ್ಗ ಸೆ. 9– ಗಣೇಶನ ಮೆರವಣಿಗೆ ವೇಳೆ ಕಲ್ಲು ಎಸೆದ ಹಿನ್ನೆಲೆಯಲ್ಲಿ ಮದ್ದೂರು ಕೊತ ಕೊತ ಕುದಿಯುತ್ತಿದೆ. ಇದರ ಬೆನ್ನಲ್ಲೇ ಶಿವಮೊಗ್ಗದ ಈದ್ ಮಿಲಾದ್ ಮೆರವಣಿಗೆಯಲ್ಲಿ ಪಾಕ್ ಪರ ಘೋಷಣೆ ಕೂಗಿದ ಆರೋಪ ಕೇಳಿ ಬಂದಿದೆ. ಇದಕ್ಕೆ ಸಂಬಂಧಿಸಿದ ವಿಡಿಯೋ ಕೂಡ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಪೊಲೀಸರು ಅಲರ್ಟ್ ಆಗಿದ್ದು, ವಿಡಿಯೋ ಸತ್ಯಾಸತ್ಯತೆ ಜೊತೆಗೆ ಘೋಷಣೆ ಕೂಗಿದವರ ಶೋಧಕ್ಕೆ ಮುಂದಾಗಿದ್ದಾರೆ.

ಪಾಕಿಸ್ತಾನ್ ಜಿಂದಾಬಾದ್ ಘೋಷಣೆ: ಈದ್ ಮಿಲಾದ್ ಮೆರವಣಿಗೆ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾರೆ ಎನ್ನಲಾಗುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗುತ್ತಿರುವ ವಿಡಿಯೋ ಒಂದು ವೈರಲ್ ಆಗುತ್ತಿದೆ. ಭದ್ರಾವತಿ ನಗರದ ತರೀಕೆರೆ ರಸ್ತೆಯಲ್ಲಿರುವ ಗಾಂಧಿ ವೃತ್ತದಲ್ಲಿ ನಡೆದಿದೆ ಎನ್ನಲಾದ ಈದ್ ಮೆರವಣಿಗೆ ವಿಡಿಯೋ ವೈರಲ್ ಆಗುತ್ತಿದೆ.

12 ಸೆಕೆಂಡ್ ವಿಡಿಯೋ ವೈರಲ್: ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಕೆಲ ಯುವಕರು ಪಾಕಿಸ್ತಾನ ಜಿಂದಾಬಾದ್ ಎಂಬ ಘೋಷಣೆ ಕೂಗಿದ್ದಾರಂತೆ. 12 ಸೆಕೆಂಡ್ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಭಾರೀ ಆಕ್ರೋಶ ವ್ಯಕ್ತವಾಗುತ್ತಿದೆ.

ಡಿಜೆ ಸೌಂಡಿಗೆ ಕುಣಿಯುತ್ತಿದ್ದ ವೇಳೆ ಘೋಷಣೆ: ಸೆ. 8ರ ರಾತ್ರಿ 8:00 ಗಂಟೆಗೆ ಈದ್ ಮಿಲಾದ್ ಮೆರವಣಿಗೆ ನಡೆದಿದೆ. ಗಾಂಧಿ ವೃತದಲ್ಲಿ ಅಳವಡಿಸಲಾಗಿದ್ದ ಡಿಜೆ ಸೌಂಡಿಗೆ ಕುಣಿಯುವ ವೇಳೆ ಪಾಕಿಸ್ತಾನ ಪರ ಕೆಲ ಕಿಡಿಗೇಡಿಗಳು ಘೋಷಣೆ ಕೂಗಿದ್ದಾರೆ ಎನ್ನಲಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ವಾಟ್ಸ್ ಆಪ್ ಸ್ಟೇಟಸ್‌ಗಳಲ್ಲೂ ಈ ವಿಡಿಯೋ ಹರಿದಾಡುತ್ತಿದೆ.

ಕೇಸ್ ದಾಖಲಿಸಿಕೊಂಡ ಪೊಲೀಸರು: ಪಾಕ್ ಪರ ಘೋಷಣೆ ವಿಡಿಯೋ ಹರಿದಾಡ್ತಿದ್ದಂತೆ ಶಿವಮೊಗ್ಗ ಪೊಲೀಸರು ಅಲರ್ಟ್ ಆಗಿದ್ದು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಭದ್ರಾವತಿಯ ನ್ಯೂ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಡಿಯೋ ಸತ್ಯಾಸತ್ಯತೆ ಜೊತೆಗೆ ಘೋಷಣೆ ಕೂಗಿದವರ ಶೋಧಕ್ಕೆ ಪೊಲೀಸರು ಮುಂದಾಗಿದ್ದಾರೆ. ಈ ಸಂಬಂಧ ಮಾಹಿತಿ ಶಿವಮೊಗ್ಗ ಎಸ್ಪಿ ಜಿ.ಕೆ.ಮಿಥುನ್ ಕುಮಾರ್ ನೀಡಿದ್ದಾರೆ.


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ. ಪ್ರದೀಪ್ ಕುಮಾರ್
ರವರಿಗೆ
ಹುಟ್ಟು ಹಬ್ಬದ ಶುಭಾಷಯಗಳು
ಶುಭಕೋರುವವರು
ಎ.ವಿ ಆಸ್ಪತ್ರೆ ಆಟೋ ನಿಲ್ದಾಣ ಮಾಲೀಕರು
ಮತ್ತು ಚಾಲಕರು, ಸಿದ್ಧಾರ್ಥ ನಗರ


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ. ಪ್ರದೀಪ್ ಕುಮಾರ್
ರವರಿಗೆ
ಹುಟ್ಟು ಹಬ್ಬದ ಶುಭಾಷಯಗಳು
ಶುಭಕೋರುವವರು : ವಿವೇಕಾನಂದ ನಗರ & ಶ್ರೀರಾಂಪುರ ಗೆಳೆಯರ ಬಳಗ


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ. ಪ್ರದೀಪ್ ಕುಮಾರ್
ರವರಿಗೆ
ಹುಟ್ಟು ಹಬ್ಬದ ಶುಭಾಷಯಗಳು


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ. ಪ್ರದೀಪ್ ಕುಮಾರ್
ರವರಿಗೆ
ಹುಟ್ಟು ಹಬ್ಬದ ಶುಭಾಷಯಗಳು
ಶುಭಕೋರುವವರು : ಕನಕಗಿರಿ ಗೆಳೆಯರ ಬಳಗ

ರಾಷ್ಟ್ರೀಯ ಜನಗಣತಿಯಲ್ಲಿ ಕೊಡವರಿಗೆ ಪ್ರತ್ಯೇಕ ಕೋಡ್, ಕಾಲಂ ಸೇರಿಸಲು ಸಿಎನ್‌ಸಿ ಆಗ್ರಹ

ರೋಹಿಂಗ್ಯಾ, ಬಾಂಗ್ಲಾದೇಶಿಯವರನ್ನು ಸ್ಥಳೀಯ ನಾಗರೀಕರು, ಮತದಾರರೆಂದು ದಾಖಲಿಸುವ ಸಾಧ್ಯತೆ ಇದೆ: ಎನ್.ಯು. ನಾಚಪ್ಪ



ರಾಷ್ಟ್ರೀಯ ಜನಗಣತಿ ವೇಳೆ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕೆಂದು ಒತ್ತಾಯಿಸಿ ಗೋಣಿಕೊಪ್ಪದಲ್ಲಿ ಸಿಎನ್‌ಸಿ ವತಿಯಿಂದ ಮಾನವ ಸರಪಳಿ ಮಾಡಲಾಯಿತು.

ಮಡಿಕೇರಿ,ಸೆ.9– ರಾಜ್ಯ ಸರಕಾರದ ವತಿಯಿಂದ ಪುನರಾರಂಭಗೊಳ್ಳುವ ಜಾತಿವಾರು ಜನಗಣತಿಯಲ್ಲಿ ಕೊಡಗಿನಲ್ಲಿ ಅಕ್ರಮವಾಗಿ ಆಶ್ರಯ ಪಡೆದಿರುವ ರೋಹಿಂಗ್ಯ ಹಾಗೂ ಬಾಂಗ್ಲಾ ದೇಶಿಗರನ್ನು ಸ್ಥಳೀಯ ನಾಗರಿಕರು ಮತ್ತು ಮತದಾರರೆಂದು ದಾಖಲಿಸುವ ಸಾಧ್ಯತೆಗಳಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಜನಗಣತಿ ಸಂದರ್ಭ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕೆಂದು ಒತ್ತಾಯಿಸಿ ಗೋಣಿಕೊಪ್ಪದಲ್ಲಿ ಸಿಎನ್‌ಸಿ ವತಿಯಿಂದ ನಡೆದ 12ನೇ ಮಾನವ ಸರಪಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರೋಹಿಂಗ್ಯ ಹಾಗೂ ಬಾಂಗ್ಲಾ ದೇಶಿಗರನ್ನು ಸ್ಥಳೀಯರೆಂದು ಅಧಿಕೃತಗೊಳಿಸುವ ಒಳಸಂಚು ನಡೆದಿದ್ದು, ಕೊಡವರು ಈ ಕುರಿತು ಜಾಗ್ರತರಾಗಿ ಕೊಡವ ಲ್ಯಾಂಡ್ ಅನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದರು.

ಟರ್ಕಿ ದೇಶದ ಕಾರ್ಮಿಕರಿಗೆ ಪ್ಯಾರಿಸ್‌ನಲ್ಲಿ ಗೆಸ್ಟ್ ವರ್ಕರ್ ಪರ್ಮಿಟ್ ನೀಡಿದಂತೆ ಕೊಡಗಿನಲ್ಲೂ ಕಾರ್ಮಿಕ ಸಮಸ್ಯೆಯನ್ನು ನೀಗಿಸಲು ವಲಸಿಗ ಕಾರ್ಮಿಕರಿಗೆ ಗೆಸ್ಟ್ ವರ್ಕರ್ ಪರ್ಮಿಟ್ ನೀಡಬೇಕು. ವಾರ್ಷಿಕ ಕೆಲಸ ಮುಗಿದ ನಂತರ ಅವರ ರಾಜ್ಯ ಅಥವಾ ದೇಶಕ್ಕೆ ಹಿಂದಿರುಗಬೇಕು. ಮತ್ತೆ ಬರಬೇಕಾದರೆ ವರ್ಕ್ ಪರ್ಮಿಟ್ ನವೀಕರಣಗೊಳಿಸುವ ಪದ್ಧತಿ ಜಾರಿಗೆ ತರಬೇಕು. ಆ ಮೂಲಕ ಜನಸಂಖ್ಯೆ ಪಲ್ಲಟಕ್ಕೆ ತಡೆ ಹಾಕಬೇಕು. 2015ರಲ್ಲಿ ನರೇಂದ್ರ ಮೋದಿ–ಶೇಕ್ ಹಸಿನಾ ಒಪ್ಪಂದ ಢಾಖಾದಲ್ಲಿ ನಡೆದಾಗ ಅದರ ಮೂಲ ತಿರುಳು ಈ ಗೆಸ್ಟ್ ವರ್ಕರ್ ಪರ್ಮಿಟ್ ಆಗಿತ್ತು. ಕೊಡಗಿನಲ್ಲಿಯೂ ಅದನ್ನು ಮುಂದುವರೆಸಬೇಕು ಎಂದು ಎನ್.ಯು.ನಾಚಪ್ಪ ಆರೋಪಿಸಿದರು.

ಅಕ್ರಮ ವಲಸಿಗರಿಗೆ ಆಶ್ರಯ ಕಲ್ಪಿಸುವ ಏಕೈಕ ಉದ್ದೇಶದಿಂದ ನಕಲಿ ಆಧಾರ್ ಕಾರ್ಡ್ ಸೃಷ್ಟಿಸಲಾಗುತ್ತಿದ್ದು, ದೊಡ್ಡ ಜಾಲವೊಂದು ಕಾರ್ಯಾಚರಿಸುತ್ತಿದೆ. ಬಾಂಗ್ಲಾ ದೇಶಿಗರು ಹಾಗೂ ರೋಹಿಂಗ್ಯಗಳು ಕಾನೂನು ಬಾಹಿರವಾಗಿ ಕೊಡವ ಲ್ಯಾಂಡ್‌ನಲ್ಲಿ ಆಶ್ರಯ ಪಡೆದು ತಮ್ಮ ಇರುವಿಕೆಯನ್ನು ಸಕ್ರಮಗೊಳಿಸಿಕೊಳ್ಳಲು ಮುಂದಾಗಿರುವುದು, ಸರಕಾರಿ ಯಂತ್ರಗಳು ಆಶ್ರಯ ನೀಡಲು ಹವಣಿಸುತ್ತಿರುವುದು ಮತ್ತು ದೊಡ್ಡ ದೊಡ್ಡ ಕಂಪೆನಿಗಳು ಬೆಂಬಲಕ್ಕೆ ನಿಂತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ನಾಚಪ್ಪ ಹೇಳಿದರು.

ಜನಗಣತಿಯ ಸಂದರ್ಭ ಪ್ರತ್ಯೇಕ ಕಾಲಮ್ ಮತ್ತು ಕೋಡ್ ಸೇರಿಸುವುದರಿಂದ ಕೊಡವ ಸಮುದಾಯಕ್ಕೆ ಆಗಬಹುದಾದ ಲಾಭಗಳನ್ನು ಕೊಡವರು ಅರಿತುಕೊಳ್ಳಬೇಕು. ಕೊಡವರ ಸಾಂವಿಧಾನಿಕ ಹಕ್ಕುಗಳಿಗಾಗಿ ಸಿಎನ್‌ಸಿ ನಡೆಸುವ ಶಾಂತಿಯುತ ಹೋರಾಟಕ್ಕೆ ಕೈಜೋಡಿಸಬೇಕೆಂದು ಎನ್.ಯು. ನಾಚಪ್ಪ ಕರೆ ನೀಡಿದರು. ಸೆ.18ರಂದು ಬೆಳಿಗ್ಗೆ 10.30 ಗಂಟೆಗೆ ಮೂರ್ನಾಡಿನಲ್ಲಿ 13ನೇ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಯಲಿದೆ ಎಂದು ಎನ್.ಯು.ನಾಚಪ್ಪ ಇದೇ ಸಂದರ್ಭ ತಿಳಿಸಿದರು.

ಕೊಲ್ಲಿರ ಗಯಾ, ಕಾಡ್ಯಮಾಡ ಗೌತಮ್, ಡಾ. ಕಾಳಿಮಾಡ ಶಿವಪ್ಪ, ಕಂಬೀರಂಡ ಬೋಪಣ್ಣ, ಚೆಪ್ಪುಡಿರ ಕಾರ್ಯಪ್ಪ, ಕೊದೇಂಗಡ ನಟೇಶ್, ಕೇಚಮಾಡ ಶರತ್, ಪಾಲೆಂಗಡ ಮನು ನಂಜಪ್ಪ, ಚೊಟ್ಟೆಯಂಡಮಾಡ ಉದಯ, ಮಾಣಿರ ಪ್ರವೀಣ್, ಬಾಚರಣಿಯಂಡ ಚಿಪ್ಪಣ್ಣ, ಅಜ್ಜಿಕುಟ್ಟೀರ ಲೋಕೇಶ್, ಚಂಬಂಡ ಜನತ್, ಬೊಟ್ಟಂಗಡ ಗಿರೀಶ್, ಕಿರಿಯಮಾಡ ಶೆರಿನ್, ಅರೆಯಡ ಗಿರೀಶ್, ಬೇಪಡಿಯಂಡ ದಿನು, ಮತ್ತಿತರರು ಪಾಲ್ಗೊಂಡಿದ್ದರು.

ರಾಷ್ಟ್ರೀಯ ಹೆದ್ದಾರಿ ಸಂಪೂರ್ಣ ಕಳಪೆ, ಅವೈಜ್ಞಾನಿಕ

ಸರ್ವೀಸ್ ರಸ್ತೆಗಳನ್ನು ನಿರ್ಮಿಸಲು ಅಧಿಕಾರಿಗಳಿಗೆ ಸೂಚನೆ



ಚಾ.ನಗರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಶಾಸಕ ಪುಟ್ಟರಂಗಶೆಟ್ಟಿ ವೀಕ್ಷಿಸಿದರು.

ಚಾಮರಾಜನಗರ: ನಗರದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕಳಪೆಯಿಂದ ಕೂಡಿದ್ದು, ಅವೈಜ್ಞಾನಿಕವಾಗಿದೆ. ಈ ರಸ್ತೆಯಲ್ಲಿ ಸಂಭವಿಸುತ್ತಿರುವ ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಕೆಲವು ಕಡೆಗಳಲ್ಲಿ ಹೆದ್ದಾರಿ ಬದಿಯಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಮಿಸುವಂತೆ ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಗಾಳಿಪುರ ಬಡಾವಣೆ ಬಳಿಯ ಹೆದ್ದಾರಿಯಲ್ಲಿ ಸಂಭವಿಸಿದ ಭೀಕರ ಅಪಘಾತ ಸ್ಥಳಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಸೋಮವಾರಪೇಟೆ–ಹರದನಹಳ್ಳಿ ಸಂಪರ್ಕ ಕಲ್ಪಿಸುವ ಬೈಪಾಸ್ ರಸ್ತೆಯಲ್ಲಿ ಹರದನಹಳ್ಳಿ ಕಡೆಯಿಂದ ಚಾ.ನಗರದ ಒಳಗೆ ಬರಲು ಪ್ರತ್ಯೇಕ ಸರ್ವೀಸ್ ರಸ್ತೆ ನಿರ್ಮಾಣವಾಗ ಬೇಕು. ಅಲ್ಲದೇ ಗಾಳಿಪುರ ಬಡಾವಣೆಯಿಂದ ಕರಿವರದರಾಜಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತವೆ. ಆದ್ದರಿಂದ ಈ ರಸ್ತೆಯಲ್ಲಿ ತೆರಳಲು ಹೆದ್ದಾರಿಯನ್ನು ದಾಟಬೇಕು. ಈ ಸಂದರ್ಭದಲ್ಲಿ ಅಂಡರ್‌ಪಾಸ್ ನಿರ್ಮಾಣವಾಗಬೇಕು ಎಂದರು.

ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಸಂದರ್ಭದಲ್ಲಿ ಹಲವು ಕಡೆಗಳಲ್ಲಿ ಸರ್ವೀಸ್ ರಸ್ತೆಗಳನ್ನೇ ನಿರ್ಮಾಣ ಮಾಡಿಲ್ಲ ರಾಷ್ಟ್ರೀಯ ಹೆದ್ದಾರಿ ಸಂಪೂರ್ಣ ಕಳಪೆಯಾಗಿದ್ದು, ಕೊಳ್ಳೇಗಾಲ ಉತ್ತುಂಬಳ್ಳಿ ಸಮೀಪದಲ್ಲಿ ಸೇತುವೆ ಕುಸಿದಿದೆ ಎಂದು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಡಿಪಿಆರ್‌ನಲ್ಲಿ ಇದ್ದ ಹಾಗೇ ರಸ್ತೆ ನಿರ್ಮಾಣ ಮಾಡಲಾಗಿದೆ. ಹೊಸದಾಗಿ ಡಿಪಿಆರ್ ಮಾಡಿ ಆ ನಂತರ ಅಂಡರ್‌ಪಾಸ್ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಮಾಜಿ ಅಧ್ಯಕ್ಷ ಸೈಯದ್ ರಫೀ, ನಗರಸಭಾ ಸದಸ್ಯ ಸ್ವಾಮಿ, ಕೆಡಿಪಿ ಸದಸ್ಯ ಸೈಯದ್ ಮುಸಾಯಿಬ್ ಇತರರು ಹಾಜರಿದ್ದರು.

ಮಹದೇಶ್ವರ ಬೆಟ್ಟದ ಪ್ರಾಧಿಕಾರದಿಂದ ಬಸ್ ಸಂಚಾರಕ್ಕೆ ಚಾಲನೆ



ಹನೂರು: ತಾಲೂಕಿನ ಶ್ರೀಕ್ಷೇತ್ರ ಮಲೆಮಹದೇಶ್ವರ ಬೆಟ್ಟದ ಶ್ರೀಕ್ಷೇತ್ರ ಮಲೆ ಮಹದೇಶ್ವರ ಸ್ವಾಮಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಬಸ್‌ಗೆ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು ಪೂಜೆ ಸಲ್ಲಿಸಿದರು.

ಮಲೆ ಮಹದೇಶ್ವರ ಪ್ರಾಧಿಕಾರಕ್ಕೆ ಸೇರಿದ ಬಸ್ ಮಲೆ ಮಹದೇಶ್ವರ ಬೆಟ್ಟದಿಂದ ಬೆಂಗಳೂರಿಗೆ ತೆರಳುತ್ತಿದ್ದ ವೇಳೆ ಕೊಳ್ಳೆಗಾಲ ತಾಲೂಕಿನ ಧನಗೆರೆ ಸಮೀಪ ಅಪಘಾತವಾಗಿ ಕಾರಿನಲ್ಲಿದ್ದ ಓರ್ವ ಪ್ರಯಾಣಿಕ ಮೃತಪಟ್ಟಿದ್ದ. ಹಿನ್ನೆಲೆಯಲ್ಲಿ ಬಸ್ ಅಪಘಾತದಲ್ಲಿ ಸಂಪೂರ್ಣ ನಜ್ಜುಗುಜ್ಜಾಗಿತ್ತು. ಇದೀಗ ತಮಿಳುನಾಡಿನಲ್ಲಿ ಬಸ್ ದುರಸ್ತಿಯಾದ ನಂತರ ಶ್ರೀ ಕ್ಷೇತ್ರ ಮಲೆ ಮಾಹದೇಶ್ವರ ಬೆಟ್ಟಕ್ಕೆ ತಂದು ವಿಶೇಷ ಪೂಜೆ ಸಲ್ಲಿಸಿದ ನಂತರ ಸಂಚಾರ ಪ್ರಾರಂಭಿಸಲಾಯಿತು.

ಪ್ರಾಧಿಕಾರದ ಕಾರ್ಯದರ್ಶಿ ಎಇ ರಘು ಮಾತನಾಡಿ, ಶ್ರೀ ಕ್ಷೇತ್ರ ಮಲೆಮಹದೇಶ್ವರ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಎಂಟು ಬಸ್ ಸಂಚಾರ ಮಾಡುತ್ತಿದೆ. ಬೆಂಗಳೂರು, ಮೈಸೂರು, ನಂಜನಗೂಡು, ಗುಂಡ್ಲುಪೇಟೆ, ಸುತ್ತೂರು ಮಾರ್ಗವಾಗಿ ಬಸ್‌ಗಳು ಸಂಚಾರ ಮಾಡುತ್ತಿವೆ. ಅಪಘಾತಗಳು ಆಕಸ್ಮಿಕವಾಗಿ ಆಗುವಂತಹ ಘಟನೆಗಳು. ಮುಂದಿನ ದಿನಗಳಲ್ಲಿ ಪ್ರತಿಯೊಬ್ಬ ಚಾಲಕರು ಎಚ್ಚರಿಕೆಯಿಂದ ಚಾಲನೆ ಮಾಡುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ಇನ್ನು ಮುಂದಿನ ದಿನಗಳಲ್ಲಿ ಯಾವುದೇ ಅಪಘಾತ ಅವಘಡಗಳು ಸಂಭವಿಸದಂತೆ ಶ್ರೀಮಲೆಮಹದೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಬಸ್ ಮೇಲುಸ್ತುವಾರಿ ಮಾಧು ರಾಜೆ ಅರಸ್, ಚಾಲಕರಾದ ಪುಟ್ಟಯ್ಯ, ರಮೇಶ್ ನಿರ್ವಾಹಕರಾದ ಮಹಾದೇವ ಪ್ರಭು, ಶಿವಪ್ಪ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ ರವೀಂದ್ರ, ಎಎಸ್‌ಐ ಗೋವಿಂದರಾಜು ಸೇರಿದಂತೆ ಇನ್ನಿತರರು ಹಾಜರಿದ್ದರು.

ಕಾಲೇಜಿನಲ್ಲಿ ಮಾರಕಾಸ್ತ್ರ ಹಿಡಿದು ರೀಲ್ಸ್, ವಿದ್ಯಾರ್ಥಿ ವಿರುದ್ಧ ಪ್ರಕರಣ ದಾಖಲು



ಕುಶಾಲನಗರ: ಸಮೀಪದ ಗುಮ್ಮನಕೊಲ್ಲಿ ಹಾರಂಗಿ ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಳೆದ ಎರಡು ದಿನಗಳ ಹಿಂದೆ ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದ ವಿದ್ಯಾರ್ಥಿ ವಿರುದ್ಧ ಇಲ್ಲಿನ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದ್ವಿತೀಯ ಬಿಕಾಂ ವಿದ್ಯಾರ್ಥಿ ಪವನ್ ಕಾಲೇಜು ಆವರಣದಲ್ಲಿ ಲಾಂಗ್ ಹಿಡಿದು ರೀಲ್ಸ್ ಮಾಡಿ, ಅದನ್ನು ತನ್ನ ಇನ್ಸ್ಟಾಗ್ರಾಮ್‌ನಲ್ಲಿ ಅಪ್ಲೋಡ್ ಮಾಡಿದ್ದ. ಇದರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದರು. ಕಾಲೇಜು ಪ್ರಾಂಶುಪಾಲರು ಹಾಗೂ ಆಡಳಿತ ವ್ಯವಸ್ಥೆ ವಿರುದ್ಧ ಕೂಡ ಅಸಮಧಾನ ವ್ಯಕ್ತವಾಗಿತ್ತು. ಸೈಬರ್ ಪೊಲೀಸರು ನೀಡಿದ ದೂರಿನ ಮೇರೆಗೆ ಇಂದು ರೀಲ್ಸ್ ಮಾಡಿದ್ದ ವಿದ್ಯಾರ್ಥಿ ವಿರುದ್ಧ ಪ್ರಕರಣ ದಾಖಲು ಮಾಡಿ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಪವನ್ ತಾನು ಮಾಡಿದ ತಪ್ಪಿಗೆ ಕ್ಷಮೆಯಾಚನೆ ಮಾಡಿದ್ದಾನೆ.

ಜಾತಿ ಜನಗಣತಿ ವೇಳೆ ಸಮುದಾಯದವರು 'ಒಕ್ಕಲಿಗ' ಎಂದು ಬರೆಸುವಂತೆ ಮನವಿ

ಮಡಿಕೇರಿ,ಸೆ.9– ರಾಜ್ಯ ಸರಕಾರದ ವತಿಯಿಂದ ಇದೇ ಸೆ.22ರಿಂದ ಕರ್ನಾಟಕದ ಸಮಗ್ರ ಜನತೆಯ ಜಾತಿ ಜನಗಣತಿ ನಡೆಯಲಿದ್ದು, ಒಕ್ಕಲಿಗ ಜನಾಂಗದವರು ತಪ್ಪದೇ 'ಒಕ್ಕಲಿಗ' ಎಂದು ತಮ್ಮ ಜಾತಿಯನ್ನು ಬರೆಸುವಂತೆ ಮತ್ತು ಎಲ್ಲಾ ಮಾಹಿತಿಗಳನ್ನು ತಪ್ಪಿಲ್ಲದಂತೆ ನೀಡುವಂತೆ ಒಕ್ಕಲಿಗರ ಸಂಘದ ಕೊಡಗು ಜಿಲ್ಲಾಧ್ಯಕ್ಷ ಎಸ್.ಎಂ.ಚಂಗಪ್ಪ ಮನವಿ ಮಾಡಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಸರಕಾರ ಮುಂದಿನ ದಿನಗಳಲ್ಲಿ ಯೋಜನೆ ಅಥವಾ ಕಾರ್ಯಕ್ರಮ ರೂಪಿಸುವಾಗ ಜಾತಿ ಜನಗಣತಿಯ ದತ್ತಾಂಶ ಪರಿಗಣಿಸುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ ಯಾವುದೇ ಕಾರಣಕ್ಕೂ ತಪ್ಪು ಮಾಹಿತಿ ನೀಡಬಾರದು ಎಂದು ಕೋರಿದ್ದಾರೆ.

ಗಣತಿದಾರರು ಮನೆಗೆ ಬಂದಾಗ ಒಕ್ಕಲಿಗ ಜನಾಂಗದವರು ತಪ್ಪದೇ ಒಕ್ಕಲಿಗ ಎಂದು ಬರೆಸಬೇಕು. ಹಿಂದುಳಿದ ವರ್ಗಗಳ ಆಯೋಗದ ಮೂಲಕ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ನಡೆಯುತ್ತಿದ್ದು, ಒಕ್ಕಲಿಗ ಸಮುದಾಯದವರು ನಿಖರವಾದ ಮಾಹಿತಿಯನ್ನು ಸಂಪೂರ್ಣವಾಗಿ ನೀಡಬೇಕು. ಶಿಕ್ಷಣ, ಉದ್ಯೋಗ, ಆಸ್ತಿ ಆರ್ಥಿಕ ಪರಿಸ್ಥಿತಿ ಮೊದಲಾದ ಮಾಹಿತಿಗಳನ್ನು ತಪ್ಪಾಗಿ ನೀಡದೆ ಸತ್ಯಾಂಶವನ್ನು ತಿಳಿಸಬೇಕು. ಯಾವುದೇ ಕಾರಣಕ್ಕೂ ಹೆಚ್ಚು ಕಡಿಮೆ ಮಾಡಬಾರದು ಮತ್ತು ಸುಳ್ಳು ಮಾಹಿತಿಯನ್ನು ನೀಡಬಾರದು. ಒಕ್ಕಲಿಗ ಜನಾಂಗದವರು ಗಣತಿಯಿಂದ ಹೊರಗೆ ಉಳಿಯಬಾರದು ಎಂದು ಸಲಹೆ ನೀಡಿದ್ದಾರೆ.

ಇಂದು ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟ

ಚಾಮರಾಜನಗರ: ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟವನ್ನು ಸೆ.10ರಂದು ಬೆಳಗ್ಗೆ 10 ಗಂಟೆಗೆ ನಗರದ ಡಾ. ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಕ್ರೀಡಾಕೂಟ ಉದ್ಘಾಟಿಸುವರು. ಎಂಎಸ್‌ಐಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಲೋಕ ಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಘನ ಉಪಸ್ಥಿತಿ ವಹಿಸುವರು.

ಬಿಇಓ ಗುರುಲಿಂಗಯ್ಯ ಹೃದಯಾಘಾತದಿಂದ ನಿಧನ



ಗುರುಲಿಂಗಯ್ಯ

ಹನೂರು: ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಗುರುಲಿಂಗಯ್ಯ ಮಂಗಳವಾರ ಬೆಳಗ್ಗೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಗುರುಲಿಂಗಯ್ಯ ಅವರು ಯಳಂದೂರು ತಾಲೂಕಿನ ಅಲ್ಕೆರೆ ಅಗ್ರಹಾರ ಗ್ರಾಮದವರಾಗಿದ್ದು, ಪ್ರಸ್ತುತ ಹನೂರು ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಹಿಂದೆ ಚಾಮರಾಜನಗರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದ್ದರು. ಮೃತರು ಪತ್ನಿ ಉಷಾ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಿತು.

ಶಾಸಕರ ಭೇಟಿ: ವಿಚಾರ ತಿಳಿಯುತ್ತಿದ್ದಂತೆ ಶಾಸಕ ಎಂ.ಆರ್.ಮಂಜುನಾಥ್ ಯಳಂದೂರು ತಾಲೂಕಿನ ಅಲ್ಕೆರೆ ಅಗ್ರಹಾರ ಗ್ರಾಮಕ್ಕೆ ಭೇಟಿ ನೀಡಿ ಮೃತರ ಅಂತಿಮ ದರ್ಶನ ಪಡೆದು ಕುಟುಂಬಸ್ಥರಿಗೆ ಸಾಂತ್ವನ ತಿಳಿಸಿದರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಸಿಇಒ ಮೋನೋರೋತ್, ಡಿಡಿಪಿಐ ರಾಮಚಂದ್ರ ರಾಜೇ ಅರಸ್ ಸೇರಿದಂತೆ ಸಹೋದ್ಯೋಗಿಗಳು ಭೇಟಿ ನೀಡಿ ಅಂತಿಮ ದರ್ಶನ ಪಡೆದರು.

ಕೋಮುಗಲಭೆ ಜಿಲ್ಲೆಯಲ್ಲಿ ಮರುಕಳಿಸಕೂಡದು



ಶಾಂತಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿದರು.

ಮದ್ದೂರು, ಸೆ.9– ಕೋಮು ಗಲಭೆ ಚಿಕ್ಕದಾಗಿರಲಿ, ದೊಡ್ಡದಾಗಿರಲಿ ಅದು ಮಂಡ್ಯ ಜಿಲ್ಲೆಗೆ ಕಳಂಕ. ಅಧಿಕಾರಿಗಳು ಜಿಲ್ಲೆಯಲ್ಲಿ ಕೋಮು ಗಲಭೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಎಚ್ಚರಿಕೆ ನೀಡಿದ್ದಾರೆ

ನಗರದ ಖಾಸಗಿ ಸಮುದಾಯ ಭವನದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾಳೆ ಮದ್ದೂರಿನಲ್ಲಿ ನಡೆಯಲಿರುವ ಸಾಮೂಹಿಕ ಗಣೇಶ ವಿಸರ್ಜನೆ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಶಾಂತಿ ಕಾಪಾಡಿಕೊಳ್ಳಬೇಕು ಹಾಗೂ ಪೊಲೀಸ್ ಇಲಾಖೆಯಿಂದ ಸಮರ್ಪಕ ಬಂದೋಬಸ್ತ್ ಮಾಡಬೇಕು ಎಂದರು.

ಪೊಲೀಸ್ ಇಲಾಖೆ ವತಿಯಿಂದ ದೊಡ್ಡ, ದೊಡ್ಡ ಗಲಭೆಗಳನ್ನು ನಿಯಂತ್ರಿಸಲಾಗಿದೆ ಹಾಗೂ ಪಾರದರ್ಶಕವಾಗಿ ತನಿಖೆ ನಡೆಸಲಾಗಿದೆ. ಈಗ ನಡೆದಿರುವ ಗಲಭೆಗೆ ಕಾರಣವಾಗಿರುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯಲ್ಲಿ ಶಾಂತಿ ಕದಡುವ ಕಿಡಿಗೇಡಿಗಳು ನಿಮ್ಮ ಸುತ್ತ ಮುತ್ತಲೇ ಇರುತ್ತಾರೆ. ಅಂಥವರ ಬಗ್ಗೆ ಸಾರ್ವಜನಿಕರು ಹಾಗೂ ಮುಖಂಡರು ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ ಎಂದು ಕಿವಿಮಾತು ಹೇಳಿದರು.

ಶಾಸಕ ದಿನೇಶ್ ಗೂಳಿಗೌಡ ಮಾತನಾಡಿ, ರಾಜ್ಯದಲ್ಲಿ 77 ಸಾವಿರ ಗಣೇಶ ಮೂರ್ತಿಗಳು ಪ್ರತಿಷ್ಠಾಪನೆಯಾಗಿದ್ದು, ಮಂಡ್ಯದಲ್ಲೇ 3,700 ಆಗಿದೆ. ಎಲ್ಲೂ ಯಾವುದೇ ಅಹಿತಕರ ಘಟನೆ ನಡೆದಿರಲಿಲ್ಲ ಎಂದರು.


ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಮದ್ದೂರಿನಲ್ಲಿ ನಡೆದ ಘಟನೆಯಿಂದಾಗಿ ಬೇಸರ ವಾಗಿದೆ. ಗಣೇಶ ಹಬ್ಬದ ಮುಂಚಿತವಾಗಿಯೇ ಎಲ್ಲಾ ಧರ್ಮದ ಮುಖಂಡರೊಂದಿಗೆ ಸಭೆ ಕರೆದು ವ್ಯವಸ್ಥಿತವಾಗಿ ಹಬ್ಬವನ್ನು ಆಚರಿಸಲು ಸೂಚಿಸಲಾಗಿತ್ತು. ವಿವಿಧತೆಯಲ್ಲಿ ಏಕತೆ ಎಂದು ಕೇವಲ ಮಾತಿನಲ್ಲಿ ಹೇಳಿದರೆ ಸಾಲದು, ಅದನ್ನು ಅನುಸರಿಸಬೇಕು. ನಾವೆಲ್ಲರೂ ಸಹ ಸೌಹಾರ್ದತೆಯಿಂದ ಬದುಕಬೇಕು. ಧಾರ್ಮಿಕ ಭಾವನೆಗೆ ಧಕ್ಕೆ ತರುವಂತಹ ಕೆಲಸ ಯಾರೂ ಮಾಡಬಾರದು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಸಿಸಿಟಿವಿ ಹಾಗೂ ತಂತ್ರಜ್ಞಾನದ ಸಹಾಯದಿಂದ ಘಟನೆಗೆ ಕಾರಣರಾದವರನ್ನು ಬಂಧಿಸಲಾಗಿದೆ. ಘಟನೆ ಆಕಸ್ಮಿಕವೋ ಅಥವಾ ಪೂರ್ವನಿಯೋಜಿತವೂ ಎಂದು ತನಿಖೆ ನಡೆಸಲಾಗುವುದು. ಸಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಪಸರಿಸುವ ಮೂಲಕ ಸಮಾಜದ ಶಾಂತಿಯನ್ನು ಕದಡುತ್ತಿರುವವರ ವಿರುದ್ಧ ಕಾನೂನು ಕ್ರಮ ಜಾರಿಗೊಳಿಸಲಾಗುವುದು ಎಂದು ಎಚ್ಚರಿಸಿದರು.

ನಾಳೆ ಸಾಮೂಹಿಕ ಗಣೇಶ ವಿಗ್ರಹ ವಿಸರ್ಜನೆ ಆಯೋಜಿಸಲಾಗಿದೆ ಪೊಲೀಸ್ ಇಲಾಖೆ ಇದಕ್ಕೆ ಸಕಲ ಸಿದ್ಧತೆ ಮಾಡಿಕೊಂಡಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ವಿಶೇಷ ಟಾಸ್ಕ್ ಫೋರ್ಸ್ ತಂಡಗಳನ್ನು ರಚಿಸಲಾಗಿದೆ. ಮದ್ದೂರು ನಗರದಲ್ಲಿ ಶಾಂತಿ ಕಾಪಾಡಲು ಸಿದ್ಧರಿದ್ದೇವೆ ಪೊಲೀಸ್ ಇಲಾಖೆ ನಿಮ್ಮ ಜೊತೆ ಇದೆ ಎಂದು ಭರವಸೆ ನೀಡಿದರು.

ಸಭೆಯಲ್ಲಿ ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಉಪವಿಭಾಗಾಧಿಕಾರಿ ಶಿವಮೂರ್ತಿ, ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಸೇರಿದಂತೆ ಎರಡು ಧರ್ಮದ ನೂರಾರು ಮಂದಿ ಉಪಸ್ಥಿತರಿದ್ದರು.

ಹರಳಹಳ್ಳಿ: ಚಿರತೆ ಸೆರೆ



ಕೆ.ಆರ್.ಪೇಟೆ,ಸೆ.9– ಜಾನುವಾರುಗಳನ್ನು ತಿಂದು ಉಪಟಳ ನೀಡುತ್ತಿದ್ದ ಚಿರತೆಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಶೀಳನೆರೆ ಹೋಬಳಿಯ ಹರಳಹಳ್ಳಿ ಗ್ರಾಮದಲ್ಲಿನ ಪೆಟ್ರೋಲ್ ಬಂಕ್ ಹಿಂಬದಿಯಲ್ಲಿರುವ ರೈತ ಬೋರಲಿಂಗೇಗೌಡ ಅವರ ಜಮೀನಿನಲ್ಲಿ ಸೆರೆ ಹಿಡಿದ ಚಿರತೆಗೆ ತಾಲೂಕು ಪಶು ವೈದ್ಯಾಧಿಕಾರಿ ಡಾ.ಹೆಚ್.ಎಸ್.ದೇವರಾಜು ಅವರ ತಂಡದಿಂದ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಬಂಡಿಪುರ ಅಭಯಾರಣ್ಯಕ್ಕೆ ಸುರಕ್ಷಿತವಾಗಿ ಬಿಡಲಾಯಿತು ಎಂದು ಆರ್‌ಎಫ್‌ಓ ಅನಿತಾ ತಿಳಿಸಿದರು.

ಚಿರತೆಯನ್ನು ಹಿಡಿದು ಗ್ರಾಮಸ್ಥರ ಆತಂಕವನ್ನು ದೂರ ಮಾಡಿರುವ ಅರಣ್ಯ ಇಲಾಖೆಯ ತಾಲೂಕು ಅರಣ್ಯ ಸಂರಕ್ಷಾಧಿಕಾರಿ ಅನಿತಾ, ಮಹೇಶ್, ಶಿವರಾಜ್, ದಿನೇಶ್, ರವಿ, ಎಲ್‌ಟಿಎಫ್ ಕಾರ್ಯ ಪಡೆಯ ಅಭಿಲಾಷ್, ರಾಜೇಶ್, ನಿರಂಜನ್, ಮೂರ್ತಿರನ್ನೊಳಗೊಂಡ ತಂಡವನ್ನು ಶಾಸಕ ಹೆಚ್.ಟಿ.ಮಂಜು ಹಾಗೂ ಹರಳಹಳ್ಳಿ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಗಲಭೆಕೋರರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಡಿವೈಎಸ್ಪಿ ಕಚೇರಿ ಎದುರು ಪ್ರತಿಭಟನೆ



ಶ್ರೀರಂಗಪಟ್ಟಣ, ಸೆ.9–ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಕಲ್ಲುತೂರಿ ಕೋಮುಗಲಭೆ ಸೃಷ್ಟಿಸಿರುವ ದುರುಳರ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಆಗ್ರಹಿಸಿ, ಪಟ್ಟಣದಲ್ಲಿ ಹಿಂದೂಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಹಿಂದೂಜಾಗರಣಾ ವೇದಿಕೆಯ ಚಂದನ್ ನೇತೃತ್ವದಲ್ಲಿ ಡಿವೈಎಸ್ಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ವಿವಿಧ ಹಿಂದೂಪರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು, ಗಲಭೆಗೆ ಕುಮ್ಮಕ್ಕು ನೀಡುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಗಲಭೆಕೋರರಿಗೆ ಲಾಠಿ ರುಚಿ ತೋರಿಸಬೇಕಾಗಿದ್ದ ಪೋಲೀಸರು ಪ್ರತಿಭಟನಾನಿರತ ಹಿಂದೂ ಕಾರ್ಯಕರ್ತರು ಹಾಗೂ ಮಹಿಳೆಯರು, ಮಕ್ಕಳ ಮೇಲೆ ತೋರಿಸಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದರು.

ಸರ್ಕಾರ ಪೋಲೀಸ್ ಇಲಾಖೆಯನ್ನು ದುರುಪಯೋಗಪಡಿಸಿಕೊಂಡು, ಹಿಂದೂ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ತೋರಲು ಮುಂದಾಗುತ್ತಿದೆ. ಮೊದಲು ಶ್ರೀರಂಗಪಟ್ಟಣ ಆಯ್ತು, ಕೆರಗೋಡು, ನಾಗಮಂಗಲ ಆಯ್ತು ಇದೀಗ ಮದ್ದೂರು. ಕೇವಲ ವೋಟ್ ಬ್ಯಾಂಕ್‌ಗಾಗಿ ಮುಸ್ಲಿಮರ ಓಲೈಕೆ ಮಾಡುತ್ತಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಇಲ್ಲಿಂದಲೇ ಉತ್ತರ ನೀಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಗಲಭೆಕೋರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳದಿದ್ದರೆ ಮುಂದಿನ ಎಲ್ಲಾ ಅಹಿತಕರ ಘಟನೆಗಳಿಗೆ ಸರ್ಕಾರ ಹಾಗೂ ಪೋಲೀಸ್ ಇಲಾಖೆಯೇ ನೇರ ಹೊಣೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಅವರಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್ ಮೂಲಕ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಕೆ.ಎಸ್.ನಂಜುಂಡೇಗೌಡ, ಬಾಲರಾಜ್, ರವೀಶ್, ಸಿದ್ದೇಶ್, ಶ್ರೀನಿವಾಸ್, ಸನತ್, ಹರ್ಷ, ಸೋಮಶೇಖರ್, ಮದನ್ ಸೇರಿದಂತೆ ಹಿಂದೂಪರ ಸಂಘಟನೆಯ ಕಾರ್ಯಕರ್ತರು ಉಪಸ್ಥಿತರಿದ್ದರು.

ಐಟಿ, ಬಿಟಿಯಂತೆ ಹೈನುಗಾರಿಕೆ ದೊಡ್ಡ ಉದ್ಯಮವಾಗಿದೆ

ಮುಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ಹೆಚ್.ಎನ್.ವಿಜಯ್



ಕಾರ್ಯಕ್ರಮವನ್ನು ಮುಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ಹೆಚ್.ಎನ್.ವಿಜಯ್ ಉದ್ಘಾಟಿಸಿದರು.

ಭೇರ್ಯ, ಸೆ.9– ಐಟಿ, ಬಿಟಿ ಕ್ಷೇತ್ರಗಳಂತೆ ಪ್ರಸ್ತುತ ಹೈನುಗಾರಿಕೆ ದೊಡ್ಡ ಉದ್ಯಮವಾಗಿ ಬೆಳೆದಿದೆ. ಹಳ್ಳಿಗಾಡಿನ ರೈತರಿಗೆ ಹೈನುಗಾರಿಕೆ ಅಕ್ಷಯ ಪಾತ್ರೆಯಾಗಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ಹೆಚ್.ಎನ್.ವಿಜಯ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಅಂಕನಹಳ್ಳಿ ಗ್ರಾಮದಲ್ಲಿ ಕ್ಷೀರಕ್ರಾಂತಿ ಪಿತಾಮಹ ಡಾ.ವರ್ಗೀಸ್ ಕುರಿಯನ್ ಅವರ 13ನೇ ಪುಣ್ಯಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಹೈನುಗಾರಿಕೆಯಿಂದ ಕೋಟ್ಯಾಂತರ ರೈತರ ಬದುಕು ಹಸನಾಗಿದೆ. ಗ್ರಾಮೀಣ ಭಾಗದ ರೈತರು ಹೈನುಗಾರಿಕೆ, ಕುರಿ ಸಾಕಾಣೆಯಿಂದ ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ ಎಂದರು.

ರೈತನನ್ನು ದೇಶದ ಬೆನ್ನೆಲುಬು ಎನ್ನುತ್ತಾರೆ. ಅದೇ ರೀತಿ ಹಸುಗಳನ್ನು ಕುಟುಂಬದ ಬೆನ್ನೆಲುಬು ಅನ್ನೋದು ಅಷ್ಟೇ ಸತ್ಯ. ಮನೆಗೊಂದು ಹಸು ಇದ್ದರೆ ಅದು ಆದಾಯದ ಬ್ಯಾಂಕ್ ಖಾತೆ ಇದ್ದಂತೆ. ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆ ಸಿಗದಿದ್ದರೂ ಹೈನುಗಾರಿಕೆ ರೈತನ ಜೇಬು ತುಂಬಿಸುತ್ತದೆ ಎಂದರು.

ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಮಾತನಾಡಿ, ಮೈಸೂರು ಜಿಲ್ಲಾ ಹಾಲು ಒಕ್ಕೂಟ ಗ್ರಾಮೀಣ ಜನರ ಬದುಕಿಗೆ ಆಸರೆಯಾಗಿದೆ. ಗ್ರಾಮೀಣ ರೈತರು ಕೃಷಿ ಜೊತೆ ಹೈನುಗಾರಿಕೆಯನ್ನು ಉಪ ಕಸುಬನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ ಎಂದರು.

ಈ ವೇಳೆ ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್ ಅವರ 66ನೇ ಹುಟ್ಟುಹಬ್ಬದ ಅಂಗವಾಗಿ ನಿವೃತ್ತ 15 ಮಂದಿ ಡೈರಿ ಕಾರ್ಯದರ್ಶಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಮೈಮುಲ್ ನಿರ್ದೇಶಕ ಈರೇಗೌಡ, ಕೆ.ಉಮಾಶಂಕರ್, ನಾಮ ನಿರ್ದೇಶಿತ ಸದಸ್ಯ ಪುಟ್ಟಸ್ವಾಮೀಗೌಡ, ಮಾಜಿ ನಿರ್ದೇಶಕಿ ವಿಜಿಯಮ್ಮ, ಮೈಮುಲ್ ನಿವೃತ್ತ ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡ, ಎಂಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ, ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಮು, ಉಪಾಧ್ಯಕ್ಷ ಕುಚೇಲ, ನಿರ್ದೇಶಕ ಮೂರ್ತಿ, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮು, ಮುಖಂಡರಾದ ರಾಜೀವ್, ಡೈರಿ ಪ್ರಾಶ್, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ನಿವೃತ್ತ ಕೃಷಿ ಅಧಿಕಾರಿ ಚಂದ್ರೇಗೌಡ, ತಾಪಂ ನಿವೃತ್ತ ಇಓ ತಮ್ಮಣ್ಣೇಗೌಡ, ಮೈಮುಲ್ ಮ್ಯಾನೇಜರ್ ಕರಿ ಬಸವರಾಜು, ಮಾರ್ಕೆಟಿಂಗ್ ವ್ಯವಸ್ಥಾಪಕ ಜೈಶಂಕರ್, ಉಪ ವ್ಯವಸ್ಥಾಪಕ ಪ್ರವೀಣ್ ಪತ್ತಾರ್, ವಿಸ್ತರಣಾಧಿಕಾರಿ ಪ್ರವೀಣ್, ನಾಗರಾಜು, ನೇಮಣ್ಣ ಮಾಖಾಣಿ, ರಶ್ಮಿ, ವರಲಕ್ಷ್ಮೀ, ಸಹಾಯಕ ವ್ಯವಸ್ಥಾಪಕ ಡಾ.ಸುನೀಲ್, ನಿವೃತ್ತ ಶಿಕ್ಷಕ ಕರೀಗೌಡ, ಡೈರಿ ಅಧ್ಯಕ್ಷ ಮಹದೇವ್, ಉಪಾಧ್ಯಕ್ಷ ದಿನೇಶ್, ಕಾರ್ಯದರ್ಶಿ ಮಹೇಶ್, ಸಹ ಕಾರ್ಯದರ್ಶಿ ಲೋಕೇಶ್ ಇತರರಿದ್ದರು.

ತಿ.ನರಸೀಪುರ ಸಿಪಿಐ, ಎಸ್‌ಐಯಿಂದ ವಸೂಲಿ ದಂಧೆ

ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್ ಗಂಭೀರ ಆರೋಪ



ಮದನ್ ರಾಜ್

ತಿ.ನರಸೀಪುರ, ಸೆ.9– ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಿ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಆರಕ್ಷಕರೇ ಭಕ್ಷಕರಾಗಿ ವಸೂಲಿ ದಂಧೆಗೆ ಇಳಿದಿದ್ದಾರೆ ಎಂದು ಪುರಸಭೆ ಮಾಜಿ ಅಧ್ಯಕ್ಷ ಎಸ್. ಮದನ್ ರಾಜ್ ಗಂಭೀರ ಆರೋಪ ಮಾಡಿದರು.

ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ವೃತ್ತ ನಿರೀಕ್ಷಕ ಧನಂಜಯ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಜಗದೀಶ್ ಧೂಳ್‌ಶೆಟ್ಟಿ ವಿರುದ್ಧ ಆರೋಪ ಮಾಡಿ ಮಾತನಾಡಿದ ಅವರು, ಠಾಣೆಗೆ ದೂರು ನೀಡಲು ಬರುವ ದೂರುದಾರರ ಮೇಲೆಯೇ ದೌರ್ಜನ್ಯ ಎಸಗುವ ಮೂಲಕ ಈ ಇಬ್ಬರು ಅಧಿಕಾರಿಗಳು ತಾಲೂಕಿನ ಜನರಲ್ಲಿ ಭಯದ ವಾತಾವರಣ ಸೃಷ್ಟಿಸಿದ್ದು, ಕೂಡಲೇ ಇವರಿಬ್ಬರನ್ನು ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು.

ಇಸ್ಪಿಟ್ ಆಟಕ್ಕೂ ಸಿಪಿಐ, ಪಿಎಸ್‌ಐ ಶ್ರೀರಕ್ಷೆ: ಪಟ್ಟಣದಲ್ಲಿ ಜೂಜಾಟ ಮಿತಿ ಮೀರಿದೆ. ನಿತ್ಯ ಕೋಟಿಗೂ ಹೆಚ್ಚು ಮೊತ್ತದ ಜೂಜಾಟ ನಡೆಯುತ್ತಿದ್ದು, ಇದಕ್ಕೆ ಸಿಪಿಐ ಧನಂಜಯ್ ಹಾಗೂ ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ಅವರ ಶ್ರೀರಕ್ಷೆ ಇದೆ. ಜೂಜುಕೋರರಿಂದ ಹಣ ವಸೂಲಿ ಮಾಡಲು ಪೊಲೀಸ್ ವಾಹನದಲ್ಲೇ ಹ್ಯಾಕನೂರು ಗ್ರಾಮದ ಮಧ್ಯವರ್ತಿಯನ್ನು ಕರೆದುಕೊಂಡು ಹೋಗುತ್ತಾರೆ. ಆತ ಜೂಜು ಕೋರರಿಂದ ಲಕ್ಷ ರೂ. ಪಡೆದು ಅದನ್ನು ಪೊಲೀಸರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದು, ಇದನ್ನು ಸಾಕ್ಷಿ ಸಮೇತ ಸಾಬೀತು ಪಡಿಸಲು ನಾನು ಸಿದ್ಧನಾಗಿದ್ದೇನೆ. ಸಾಲದೆಂಬಂತೆ ಎಸ್ಪಿ ಹಾಗೂ ಡಿವೈಎಸ್ಪಿಗೂ ಲಂಚ ಕೊಡಬೇ ಕೆಂದು ಜೂಜುಕೋರರಿಂದ ಹಣ ವಸೂಲಿ ಮಾಡುತ್ತಿರುವುದು ದುರಂತ ಎಂದು ಬೇಸರ ವ್ಯಕ್ತಪಡಿಸಿದರು.

ಲಕ್ಷ ರೂ.ಗಳ ಲಂಚಕ್ಕೆ ಬೇಡಿಕೆ: ಪೊಲೀಸ್ ವ್ಯವಸ್ಥೆ ಎಷ್ಟರ ಮಟ್ಟಿಗೆ ಹದಗೆಟ್ಟಿದೆ ಎಂದರೆ ಪುರಸಭೆ ಮಾಜಿ ಅಧ್ಯಕ್ಷನಾದ ನನ್ನ ಬಳಿಯೇ ಮಧ್ಯವರ್ತಿಯಿಂದ ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ತಿ.ನರಸೀಪುರ ಪುರಸಭೆ ವ್ಯಾಪ್ತಿಯ ಬೀದಿ ಬದಿ ವ್ಯಾಪಾರಿಗಳಿಂದ ಸುಂಕ ವಸೂಲಿ ಮಾಡುವ ಟೆಂಡರ್ ಅನ್ನು ನಿಯಮಾನುಸಾರ 12 ಲಕ್ಷ ರೂ. ನೀಡಿ ಪಡೆದಿದ್ದೇನೆ. ಆದರೆ ಅದರ ಮೇಲೂ ಕಣ್ಣಿಟ್ಟಿರುವ ಎಸ್‌ಐ ಹಾಗು ಸಿಪಿಐ ಮೀಡಿಯೇಟರ್ ಬಿಟ್ಟು ಲಕ್ಷ ರೂ.ಗಳಿಗೆ ಬೇಡಿಕೆ ಇಟ್ಟಿದ್ದರು. ಲಂಚ ಕೊಡದಿದ್ದರೆ ಸುಂಕ ವಸೂಲಿ ಮಾಡಲು ಬಿಡುವುದಿಲ್ಲ. ಹಾಗಾಗಿ ನನ್ನಿಂದ ಬೀದಿ ಬದಿ ವ್ಯಾಪಾರಿಗಳಿಗೆ ತೊಂದರೆಯಾಗಬಾರದೆಂದು 12 ಲಕ್ಷ ರೂ. ನಷ್ಟವಾದರೂ ಪರವಾಗಿಲ್ಲ ಎಂದು ಸುಂಕ ವಸೂಲಾತಿಗೆ ಹೋಗಲಿಲ್ಲ. ಯಾವುದನ್ನು ಬಿಡದ ಇಬ್ಬರು ಪೊಲೀಸ್ ಅಧಿಕಾರಿಗಳು ವಾಹನ ಪಾರ್ಕಿಂಗ್ ಟೆಂಡರ್‌ದಾರರಿಂದ 50 ಸಾವಿರ ಲಂಚ ಕೇಳಿದ್ದಾರೆ ಎಂದು ಪೊಲೀಸರ ಮೇಲೆ ಕಿಡಿಕಾರಿದ ಅವರು ಇಂತಹ ಪೊಲೀಸ್ ಅಧಿಕಾರಿಗಳು ತಿ.ನರಸೀಪುರಕ್ಕೆ ಕಳಂಕ ತಂದಿಡಲು ಮುಂದಾಗಿದ್ದಾರೆ ಎಂದರು.

ಸಿಪಿಐ ಧನಂಜಯ್, ಎಸ್‌ಐ ಜಗದೀಶ್ ಧೂಳ್ ಶೆಟ್ಟಿಯವರ ವರ್ತನೆ ಹಾಗೂ ವಸೂಲಾತಿ ದಂಧೆ ಬಗ್ಗೆ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ನಾಳೆಯೇ ಸಾಕ್ಷಿ ಸಮೇತ ವಿವರ ನೀಡಲಿದ್ದೇನೆ. ಕೂಡಲೇ ಮೇಲಧಿಕಾರಿಗಳು ಸಾರ್ವಜನಿಕರೊಂದಿಗೆ ದುರ್ವರ್ತನೆ ತೋರುತ್ತಿರುವ ಇಬ್ಬರು ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಿ ಅಮಾನತುಪಡಿಸಬೇಕೆಂದು ಒತ್ತಾಯಿಸಿದರು.

ತಿಮ್ಮರಾಜು ನಿಧನ



ಸರಗೂರು, ಸೆ.9– ಪಟ್ಟಣದ ಲಕ್ಷ್ಮೀ ಸ್ಟುಡಿಯೋ ಮಾಲೀಕ ತಿಮ್ಮರಾಜು(53) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯ ಕ್ರಿಯೆ ನಾಯಕ ಸಮಾಜದ ಸ್ಮಶಾನದಲ್ಲಿ ನಡೆಯಿತು.


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ. ಪ್ರದೀಪ್ ಕುಮಾರ್
ರವರಿಗೆ
ಹುಟ್ಟು ಹಬ್ಬದ ಶುಭಾಷಯಗಳು
99002 52131
ಶುಭಕೋರುವವರು : ಅರವಿಂದನಗರ ಗೆಳೆಯರ ಬಳಗ


ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ
ಎಂ. ಪ್ರದೀಪ್ ಕುಮಾರ್
ರವರಿಗೆ
ಹುಟ್ಟು ಹಬ್ಬದ ಶುಭಾಷಯಗಳು
99002 52131
ಶುಭಕೋರುವವರು : ಸುಣ್ಣದಕೇರಿ ಸ್ನೇಹ ಬಳಗ


Happy Birthday To You
ಸ್ನೇಹಜೀವಿ, ನಗುವಿನ ಒಡೆಯ, ನಮ್ಮ ಯುವನಾಯಕರಾದ
ಪ್ರದೀಪ್‌ಕುಮಾರ್ ಎಂ. ರವರಿಗೆ
ಹುಟ್ಟುಹಬ್ಬದ ಶುಭಾಷಯಗಳು
10-09-2025
ಶುಭಕೋರುವವರು:
ಟಿ.ಆರ್. ಹರೀಶ್‌ಕುಮಾರ್ ಮತ್ತು ಟೀಂ ಪ್ರತಿಧ್ವನಿ
ಪ್ರದೀಪ್‌ಕುಮಾರ್ ಎಂ. ಸ್ನೇಹ ಬಳಗ, ಅಗ್ರಹಾರ, ಮೈಸೂರು


ನಿಕಟ ಪೂರ್ವ ಅಧ್ಯಕ್ಷರು ಬಸವ ಬಳಗಗಳ ಒಕ್ಕೂಟ
ದಾರಿದೀಪ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರು
ಎಂ. ಪ್ರದೀಪ್ ಕುಮಾರ್
ಹುಟ್ಟು ಹಬ್ಬದ ಶುಭಾಷಯಗಳು
ದಿನಾಂಕ : 10.09.2025
ಶುಭಕೋರುವವರು : ಸರಗೂರು ತಾಲ್ಲೂಕು, ವೀರಶೈವ ಲಿಂಗಾಯತ ಮುಖಂಡರು

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಮತಾಂತರ ನಿಷೇಧ ಕಾಯ್ದೆ ಹಿಂಪಡೆಯುವ ಭರವಸೆ

- ವಿಪಕ್ಷ ಬಿಜೆಪಿಗೆ ಸರ್ಕಾರದ ವಿರುದ್ಧ ಮತ್ತೊಂದು ಅಸ್ತ್ರ
- ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಕಾಯ್ದೆ ಜಾರಿಗೆ ತರಲಾಗಿತ್ತು
- ಕ್ರೈಸ್ತ ಧರ್ಮಗುರುಗಳ ಬೇಡಿಕೆಗೆ ಸಿಎಂ ಅಸ್ತು!



ಬೆಂಗಳೂರು, ಸೆ.9(ಕೆಎಂಶಿ)–ಬಿಜೆಪಿ ಆಡಳಿತಾವಧಿಯಲ್ಲಿ ಜಾರಿಗೆ ತಂದಿದ್ದ ಮತಾಂತರ ನಿಷೇಧ ಕಾಯ್ದೆ ವಾಪಸ್ ಪಡೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರೈಸ್ತ ಸಮುದಾಯಕ್ಕೆ ಭರವಸೆ ನೀಡಿದ್ದು, ಕಾಂಗ್ರೆಸ್ ಸರ್ಕಾರ ಮತ್ತೊಂದು ಧರ್ಮ ಸಂಕಟಕ್ಕೆ ಸಿಲುಕುವ ಲಕ್ಷಣಗಳು ಕಂಡುಬರುತ್ತಿವೆ.

ಮತಾಂತರ ನಿಷೇಧ ಕಾಯ್ದೆ ವಾಪಸ್ ಪಡೆದರೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಪಕ್ಷ ಬಿಜೆಪಿಗೆ ಮತ್ತೊಂದು ಪ್ರಬಲ ಅಸ್ತ್ರವನ್ನು ಒದಗಿಸಿದಂತಾಗುತ್ತದೆ.

ಬಿಜೆಪಿ ಸರ್ಕಾರ, 2022ರ ಸೆಪ್ಟೆಂಬರ್ 21ರಂದು ವಿಧಾನಮಂಡಲ ಅಧಿವೇಶನದಲ್ಲಿ ಕಾಂಗ್ರೆಸ್ ಸದಸ್ಯರ ವಿರೋಧದ ನಡುವೆಯೇ ಮತಾಂತರ ನಿಷೇಧ ಕಾಯ್ದೆ ವಿಧೇಯಕ ಅಂಗೀಕಾರ ಮಾಡಿತ್ತು. ಮತಾಂತರ ನಿಷೇಧ ಕಾಯಿದೆ ಪ್ರಕಾರ ಬಲವಂತ, ವಂಚನೆ, ಒತ್ತಾಯ ಹಾಗೂ ಆಮಿಷದ ಮೂಲಕ ಮತಾಂತರ ಮಾಡುವಂತಿಲ್ಲ, ಮದುವೆ ಭರವಸೆ ಮೂಲಕ ನಡೆಸುವ ಮತಾಂತರಕ್ಕೂ ನಿಷೇಧ ಹೇರಲಾಗಿತ್ತು.

ಮತಾಂತರಗೊಂಡ ವ್ಯಕ್ತಿ ತನ್ನ ಮೊದಲಿನ ಧರ್ಮಕ್ಕೆ ಮರು ಮತಾಂತರವಾದರೆ ಅಂತಹ ಸಂದರ್ಭದಲ್ಲಿ ಮತಾಂತರವೆಂದು ಪರಿಗಣಿಸಲಾಗುವುದಿಲ್ಲ. ಮತಾಂತರಕ್ಕೆ ಬಲಿಯಾದವರಿಗೆ ಗರಿಷ್ಠ 5 ಲಕ್ಷ ರೂ. ಪರಿಹಾರವನ್ನು ಆಪಾದಿತ ಕೊಡಬೇಕು, ಅಪರಾಧ ಪುನರಾವರ್ತನೆಯಾದಲ್ಲಿ 5 ವರ್ಷ ಜೈಲು ಶಿಕ್ಷೆ ಹಾಗೂ 2 ಲಕ್ಷ ರೂ. ದಂಡ ವಿಧಿಸುವುದನ್ನೂ ಕಾಯ್ದೆ ಒಳಗೊಂಡಿದೆ. ಅಲ್ಲದೆ, ಮತಾಂತರ ಉದ್ದೇಶದಿಂದ ಆಗುವ ಮದುವೆಯನ್ನು ಅಸಿಂಧುವೆಂದು ಘೋಷಿಸುವ ಪ್ರಾಧಾನ್ಯತೆಯೂ ಕಾಯ್ದೆಯಲ್ಲಿದೆ.

ಕಳೆದ ಸಾರ್ವತ್ರಿಕ ಚುನಾವಣೆ ವೇಳೆ ಮತಾಂತರ ನಿಷೇಧ ಕಾಯ್ದೆ ವಾಪಸ್ ಪಡೆಯುವುದಾಗಿ ಕೊಟ್ಟ ಭರವಸೆಯಂತೆ ಕಾಯ್ದೆ ವಾಪಸ್ ಪಡೆಯಲು ಕ್ರೈಸ್ತ ಸಮುದಾಯ ಕಾಂಗ್ರೆಸ್ ಸರ್ಕಾರವನ್ನು ಒತ್ತಾಯಿಸಿದೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ ಬೆಂಗಳೂರು ಪ್ರಾಂತ್ಯ ಆರ್ಚ್ ಬಿಷಪ್ ಡಾ.ಪೀಟರ್ ಮಚಾಡೊ, ಕ್ರೈಸ್ತರು ಯಾವಾಗಲೂ ಬಲವಂತದ ಮತಾಂತರ ಮಾಡುವುದಿಲ್ಲ, ಮತಾಂತರ ನಿಷೇಧ ಕಾಯ್ದೆ ನಮಗೆ ಮಾರಕವಾಗಿದೆ, ಕಾಂಗ್ರೆಸ್ ಕೊಟ್ಟ ಭರವಸೆಯಂತೆ ಕಾಯ್ದೆ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಕ್ರೈಸ್ತ ಸಮುದಾಯದ ಬೇಡಿಕೆಗೆ ಸ್ಪಂದಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮತಾಂತರ ನಿಷೇಧ ಕಾಯ್ದೆ ವಾಪಸ್ ಪಡೆಯಲು ಬದ್ಧರಾಗಿದ್ದೇವೆ, ಕಾನೂನು ತಜ್ಞರ ಸಲಹೆ ಪಡೆದು ಕಾಯ್ದೆ ವಾಪಸ್ ಪಡೆಯಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇಂದು ವಾರ್ಷಿಕ ಮಹಾಸಭೆ

ಮೈಸೂರು, ಸೆ.9– ಮೈಸೂರಿನ ಹೀಲ್ ಸೌಹಾರ್ದ ವಿವಿಧೋದ್ದೇಶ ಸಹಕಾರಿ ಸಂಘದ 12ನೇ ವಾರ್ಷಿಕ ಮಹಾಸಭೆಯನ್ನು ರಾಮಕೃಷ್ಣನಗರ ಐ ಬ್ಲಾಕ್, 4ನೇ ಮುಖ್ಯರಸ್ತೆಯಲ್ಲಿರುವ ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆ ಸಭಾಂಗಣದಲ್ಲಿ ಬುಧವಾರ(ಸೆ.10) ಬೆಳಗ್ಗೆ 11ಕ್ಕೆ ಏರ್ಪಡಿಸಲಾಗಿದೆ.



ಬಿಡುಗಡೆಗೆ ಆಗ್ರಹ

ಪೊಲೀಸರ ವಶದಲ್ಲಿದ್ದ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ತಮ್ಮ ಬಿಡುಗಡೆಗೆ ಆಗ್ರಹಿಸಿ ಆಲನಹಳ್ಳಿ ಪೊಲೀಸ್ ಠಾಣೆ ಮುಂಭಾಗ ಪ್ರತಿಭಟನೆ ನಡೆಸಿದರು. ಈ ವೇಳೆ ಶಾಸಕ ಶ್ರೀವತ್ಸ ಸ್ಥಳಕ್ಕೆ ಭೇಟಿ ನೀಡಿ, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಪೊಲೀಸರ ವರ್ತನೆಯ ಬಗ್ಗೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದ ಶಾಸಕರು ಕೂಡಲೇ ಕಾರ್ಯಕರ್ತರನ್ನು ಬಿಡುಗಡೆಗೊಳಿಸಿ, ಚಾಮುಂಡೇಶ್ವರಿ ದರ್ಶನಕ್ಕೆ ಅವರೆಲ್ಲರಿಗೂ ಅವಕಾಶ ಮಾಡಿಕೊಡುವಂತೆ ಆಗ್ರಹಿಸಿದರು.

ಅಪದ್ಧ ಭಾವನೆಯ ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟನೆ ಬೇಡ

ಸರ್ಕಾರಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಆಗ್ರಹ



ಚಾಮುಂಡಿಬೆಟ್ಟ ಚಲೋ ವೇಳೆ ಮೈಸೂರಿನ ಕುರುಬಾರಹಳ್ಳಿ ಸರ್ಕಲ್‌ನಲ್ಲಿ ಪೊಲೀಸರ ಸರ್ಪಗಾವಲು.

ಮೈಸೂರು, ಸೆ.9(ಬಿಎಲ್‌ಯು)– ಕನ್ನಡಾಂಬೆ ಭುವನೇಶ್ವರಿ ಬಗ್ಗೆ ಅಪದ್ಧ ಭಾವನೆ ಇಟ್ಟುಕೊಂಡಿರುವ ಬಾನು ಮುಷ್ತಾಕ್ ಅವರನ್ನು ಮೈಸೂರು ದಸರಾ ಉದ್ಘಾಟನೆಗೆ ಆಹ್ವಾನಿಸುವ ತೀರ್ಮಾನದಿಂದ ಹಿಂದೆ ಸರಿಯಿರಿ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಗ್ರಹಿಸಿದ್ದಾರೆ.

ಮೈಸೂರಿನ ಕುರುಬಾರಹಳ್ಳಿ ಸರ್ಕಲ್‌ನಲ್ಲಿ ಚಾಮುಂಡಿಬೆಟ್ಟ ಚಲೋ ನಡೆಸುವ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಾನು ಮುಷ್ತಾಕ್ ಅವರ ಬಗ್ಗೆ ನಿಮಗೆ ಒಳ್ಳೆಯ ಭಾವನೆ ಇದ್ದರೆ ನಿಮ್ಮ ಮನೆಯ ಮದುವೆಗೆ ಕರೆದು ತಾಂಬೂಲ ನೀಡಿ. ಅದು ಬಿಟ್ಟು ಹಿಂದೂ ಸಂಪ್ರದಾಯ ಟೀಕಿಸಿರುವ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸಬೇಡಿ ಎಂದು ಒತ್ತಾಯಿಸಿದರು.

ಭುವನೇಶ್ವರಿ ದೇವಿ ಹಾಗೂ ಅರಿಶಿನ, ಕುಂಕುಮದ ಬಗ್ಗೆ ಬಾನು ಮುಷ್ತಾಕ್ ಅವರು ತಕರಾರು ತೆಗೆದಿದ್ದಾರೆ. ಹಿಂದೂ ಧರ್ಮದ ಧಾರ್ಮಿಕತೆಯ ಸಂಕೇತವನ್ನು ಸಹಿಸಿಕೊಳ್ಳುವ ಸಹೃದಯತೆ ಅವರಿಗೆ ಇಲ್ಲ. ಮಸೀದಿಯ ಮುಲ್ಲಾ ರೀತಿ ಮಾತನಾಡುತ್ತಾರೆ. ಈ ಹಿನ್ನೆಲೆಯಲ್ಲಿ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸಬೇಡಿ, ಈ ಬಗ್ಗೆ ಮರು ಚಿಂತನೆ ಮಾಡಿ ಎಂದು ಸಲಹೆ ನೀಡಿದ್ದೆ ಎಂದರು.

ಆದರೆ ಸಿದ್ದರಾಮಯ್ಯ ಒಂದು ದಿನವೂ ಈ ಬಗ್ಗೆ ಸ್ಪಷ್ಟೀಕರಣ ನೀಡಲಿಲ್ಲ. ತಾವು ತೆಗೆದುಕೊಂಡ ತೀರ್ಮಾನವೇ ಸರಿ ಎಂದು ವಿತಂಡವಾದ ಮಾಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಕಿಡಿಕಾರಿದರು.

ಪ್ರಜಾತಾಂತ್ರಿಕವಾಗಿ ಪಾದಯಾತ್ರೆಗೆ ಅವಕಾಶ ನೀಡದೆ ಅಟ್ಟಿಸಿಕೊಂಡು ಹೋಗಿ ಅರೆಸ್ಟ್ ಮಾಡಲಾಗುತ್ತಿದೆ. ಸಿದ್ದರಾಮಯ್ಯ ಅವರೇ ಇದು ನಿಮ್ಮ ಸೆಕ್ಯೂಲರ್ ಪ್ರೋಗ್ರಾಂ ಇಲ್ಲವೆ ರಿಲೀಜಿಯನ್ ಪ್ರೋಗ್ರಾಂ ಎಂದು ಸ್ಪಷ್ಟಪಡಿಸಿ ಎಂದು ಸಲಹೆ ನೀಡಿದರು.

ಜನಾರ್ಧನ ರೆಡ್ಡಿ ವಿರುದ್ಧ ಬಳ್ಳಾರಿಗೆ ಪಾದಯಾತ್ರೆ ಮಾಡುವಾಗ ಅಂದು ಆಡಳಿತ ನಡೆಸುತ್ತಿದ್ದ ಬಿಜೆಪಿ ಸರ್ಕಾರ ನಿಮ್ಮನ್ನು ತಡೆಯಲಿಲ್ಲ. ಆದರೆ ಈಗ ನಮ್ಮ ಪ್ರತಿಭಟನೆ ಹತ್ತಿಕ್ಕುತ್ತಿದ್ದೀರಾ. ಈ ಮೂಲಕ ನೀವು ತಾಲಿಬಾನ್ ಸರ್ಕಾರ ನಡೆಸುತ್ತಿರುವುದು ಜನರಿಗೆ ಅರಿವಾಗಿದೆ ಎಂದು ಆರೋಪಿಸಿದರು.

ಕನ್ನಡಾಂಬೆ ಹಾಗೂ ಅರಿಶಿನ, ಕುಂಕುಮದ ಬಗ್ಗೆ ಬಾನು ಮುಷ್ತಾಕ್ ನೀಡಿರುವ ಹೇಳಿಕೆಗೆ ಅವರಿಂದಲೇ ಕ್ಷಮೆ ಕೇಳಿಸಿದ್ದರೆ ನಾವು ಹೋರಾಟದ ಹಾದಿ ಹಿಡಿಯುತ್ತಿರಲಿಲ್ಲ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ನೋ ಕಾಮೆಂಟ್ಸ್...!, ನೋ ಕಾಮೆಂಟ್ಸ್...!, ನೋ ಕಾಮೆಂಟ್ಸ್...!

ತಮ್ಮ ವಿರುದ್ಧದ ಪ್ರತಿಭಟನೆಗೆ ಬಾನು ಮುಷ್ತಾಕ್ ಪ್ರತಿಕ್ರಿಯೆ

ಮೈಸೂರು, ಸೆ.9(ಬಿಎಲ್‌ಯು) ವಿಶ್ವ ವಿಖ್ಯಾತ ಮೈಸೂರು ದಸರಾ ಉದ್ಘಾಟಿಸಲು ಬಿಜೆಪಿ ಸೇರಿದಂತೆ ಸಂಘ ಪರಿವಾರದವರು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವ ಬೆಳವಣಿಗೆ ಬಗ್ಗೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಲು ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ನಿರಾಕರಿಸಿದರು.

ವಿದೇಶದಲ್ಲಿರುವ ಅವರನ್ನು 'ಮೈಸೂರು ಮಿತ್ರ' ಮೊಬೈಲ್‌ನಲ್ಲಿ ಸಂಪರ್ಕಿಸಿ, ಇತ್ತೀಚಿನ ಬೆಳವಣಿಗೆ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ 'ನೋ ಕಾಮೆಂಟ್ಸ್...!' ಎಂದು ಸೂಚ್ಯವಾಗಿ ಹೇಳಿದರು.

ಹಿಂದೂ ಧರ್ಮಿಯರ ಧಾರ್ಮಿಕತೆಯ ಸಂಕೇತ ಅರಿಶಿನ, ಕುಂಕುಮ ಹಾಗೂ ಕನ್ನಡಾಂಬೆ ಬಗ್ಗೆ 2023ರಲ್ಲಿ ನೀಡಿರುವ ಹೇಳಿಕೆ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ಎಂದು ಕೇಳಿದಾಗ, ಈ ವಿಚಾರವಾಗಿ ನಾನು ಮಾತನಾಡುವುದಿಲ್ಲ ಎಂದರು.

ಸಂಘ ಪರಿವಾರ ಸೇರಿದಂತೆ ಬಿಜೆಪಿಯವರು ನಿಮ್ಮ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರಲ್ಲ ಎಂದು ಕೇಳಿದಾಗ, ಈ ವಿಚಾರವಾಗಿ ನಾನು ಮಾತನಾಡುವುದಿಲ್ಲ ಎಂದು ಪುನರುಚ್ಚರಿಸಿದ ಬಾನು ಮುಷ್ತಾಕ್, ದೂರವಾಣಿ ಸಂಪರ್ಕ ಕಡಿತಗೊಳಿಸಿದರು.

ಬಾನು ಮುಷ್ತಾಕ್ ಅವರು ವಿದೇಶದಿಂದ ಬಂದ ನಂತರ ಅವರ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಬಗ್ಗೆ ಪ್ರತಿಕ್ರಿಯೆ ನೀಡಬಹುದು. ಇಲ್ಲವೆಂದರೆ ಆಗಲೂ ಮೌನವಹಿಸಬಹುದು. ಒಟ್ಟಾರೆ ಈ ಬೆಳವಣಿಗೆ ಹಿನ್ನೆಲೆಯಲ್ಲಿ ಬಾನು ಮುಷ್ತಾಕ್ ಅವರ ನಿಲುವು ಏನೆಂಬುದು ಕುತೂಹಲಕಾರಿಯಾಗಿದೆ.

ಐದನೇ ಪುಟದಿಂದ

ಪರಿವಾರದವರ ಚಾಮುಂಡಿಬೆಟ್ಟ ಚಲೋ; ಪೊಲೀಸರ ಬ್ರೇಕ್





ಆರಂಭವಾಗಿದೆ. ಸೆಪ್ಟೆಂಬರ್ 22 ರಿಂದ ಆರಂಭವಾಗುವ ದಸರಾ ಉತ್ಸವಕ್ಕೆ ಜಿಲ್ಲಾಡಳಿತ ಭರದ ಸಿದ್ಧತೆಯಲ್ಲಿ ತೊಡಗಿದೆ. ಆದರೆ ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರ ಆಯ್ಕೆ ಬಗ್ಗೆ ಹಿಂದೂಪರ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸುವುದನ್ನು ಕೈಬಿಡಬೇಕು. ಇಲ್ಲವೆಂದರೆ ಕನ್ನಡಾಂಬೆ ಬಗ್ಗೆ ಬಾನು ಮುಷ್ತಾಕ್ ನೀಡಿರುವ 2023 ರ ಹೇಳಿಕೆ ಬಗ್ಗೆ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿ ಬಿಜೆಪಿ, ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಇಂದು ಚಾಮುಂಡಿ ಬೆಟ್ಟ ಚಲೋ ಹಮ್ಮಿಕೊಂಡಿದ್ದರು.

ಆದರೆ, ಚಾಮುಂಡಿಬೆಟ್ಟ ಚಲೋಗೆ ಪೊಲೀಸರು ಅನುಮತಿ ನಿರಾಕರಿಸಿದರು. ಪೊಲೀಸರು ಅನುಮತಿ ನೀಡಲಿ, ಬಿಡಲಿ ನಾವಂತೂ ಚಾಮುಂಡಿಬೆಟ್ಟಕ್ಕೆ ಹೋಗಿಯೇ ತೀರುತ್ತೇವೆ ಎಂದು ಬಿಜೆಪಿ ಕಾರ್ಯಕರ್ತರು ಇಂದು ಬೆಳಿಗ್ಗೆ 7.30 ಗಂಟೆಯಲ್ಲಿ ನಗರದ ಕುರುಬಾರಹಳ್ಳಿ ವೃತ್ತದಲ್ಲಿ ಸಮಾವೇಶಗೊಂಡರು.

ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಶುಶ್ರುತ್ ಗೌಡ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರ ಪಡೆ ಕುರುಬಾರಹಳ್ಳಿ ಸರ್ಕಲ್‌ನಿಂದ ಚಾಮುಂಡಿ ಬೆಟ್ಟದ ಕಡೆಗೆ ಮುನ್ನುಗ್ಗಲೆತ್ನಿಸಿತು.

ಈ ಸಂದರ್ಭದಲ್ಲಿ ಪೊಲೀಸರು ತಡೆದಾಗ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ರಸ್ತೆ ಮಧ್ಯೆ ಧರಣಿ ಕುಳಿತರು. ಈ ವೇಳೆ ಸಿದ್ದರಾಮುಲ್ಲಾ ಖಾನ್‌ಗೆ ಧಿಕ್ಕಾರ, ಜಿಹಾದಿ ಮನಸ್ಥಿತಿಗೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಿದರು. ಬಿಜೆಪಿ ಕಾರ್ಯಕರ್ತರ ತಡೆಯಲು ಪೊಲೀಸರು ಹರಸಾಹಸಪಟ್ಟರು. ಈ ಸಂದರ್ಭದಲ್ಲಿ ಪೊಲೀಸರು ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ, ಮಾತಿನ ಚಕಮಕಿಯೂ ನಡೆಯಿತು.

ಜೈ ಶ್ರೀರಾಮ್, ಜೈ ಚಾಮುಂಡಿ ಘೋಷಣೆ ಕೂಗುತ್ತಾ ಖಾಕಿ ಸರ್ಪಗಾವಲು ಭೇದಿಸಿದ ಬಿಜೆಪಿ ಕಾರ್ಯಕರ್ತರು ಚಾಮುಂಡಿಬೆಟ್ಟದ ಕಡೆ ತೆರಳಲು ಮುಂದಾದರು. ಈ ಸಂದರ್ಭದಲ್ಲಿ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಸಿಎಆರ್ ಮೈದಾನಕ್ಕೆ ಕರೆದೊಯ್ದರು.

ವಿಹೆಚ್‌ಪಿ ಕಾರ್ಯಕರ್ತರ ಯತ್ನ: ಬಿಜೆಪಿ ಕಾರ್ಯಕರ್ತರನ್ನು ವಶಕ್ಕೆ ಪಡೆದ ಕೆಲವೇ ನಿಮಿಷಗಳಲ್ಲಿ ವಿಶ್ವ ಹಿಂದೂ ಪರಿಷತ್‌ನ ಕಾರ್ಯಕರ್ತರು ಕುರುಬಾರಹಳ್ಳಿ ಸರ್ಕಲ್‌ಗೆ ಆಗಮಿಸಿ ದರು. ಅವರು ಸಹ ಪೊಲೀಸರ ಸರ್ಪಗಾವಲು ಭೇದಿಸಿ ಚಾಮುಂಡಿಬೆಟ್ಟದತ್ತ ಸಾಗಲು ಯತ್ನಿಸಿದರು.

ಈ ಸಂದರ್ಭದಲ್ಲಿ ಕುರುಬಾರಹಳ್ಳಿ ಸರ್ಕಲ್‌ನಿಂದ ಒಂದಿಂಚು ಮುಂದೆ ಹೋಗಲು ಬಿಡದ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಅವರನ್ನು ಸಿಎಆರ್ ಮೈದಾನಕ್ಕೆ ಕರೆದೊಯ್ದರು.

ಇನ್ಯಾರು ಬರುವುದಿಲ್ಲ ಎಂದು ಪೊಲೀಸರು ನಿಟ್ಟುಸಿರು ಬಿಡುತ್ತಿರುವಾ ಗಲೇ ಮಾಜಿ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಸಂಘ ಪರಿವಾರದ ಕೆಲ ಕಾರ್ಯಕರ್ತರು ಚಾಮುಂಡಿಬೆಟ್ಟದ ಕಡೆ ನುಗ್ಗಲು ಮುಂದಾದರು. ಆದರೆ ಕುರುಬಾರ ಹಳ್ಳಿ ಸರ್ಕಲ್‌ನಲ್ಲಿ ಬ್ಯಾರಿಕೇಡ್ ಹಾಕಿ ಅವರನ್ನು ತಡೆದ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದರು. ಪೊಲೀಸರ ನಡೆಗೆ ಪ್ರತಿಭಟನಾಕಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಹಿಂದೂಸ್ತಾನದಲ್ಲಿ ಹಿಂದೂಗಳಿಗೇ ಮಾನ್ಯತೆ ಇಲ್ಲ. ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದೂಗಳ ಪ್ರತಿಭಟನೆಗಳನ್ನು ಹತ್ತಿಕ್ಕುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆ ನಡೆಸಲು ಇಂದು ಬೆಳಿಗ್ಗೆ 7.30 ಗಂಟೆಗೆ ಒಂದೊಂದು ತಂಡಗಳಲ್ಲಿ ಆಗಮಿಸಿದ ಹಿಂದೂಪರ ಸಂಘಟನೆಗಳ ಕಾರ್ಯಕರ್ತರನ್ನು ಸಿಎಆರ್ ಮೈದಾನದಲ್ಲಿ ಇರಿಸಲಾಗಿತ್ತು ಮಧ್ಯಾಹ್ನವಾದರೂ ಪ್ರತಿಭಟನಾಕಾರರಿಗೆ ಊಟದ ವ್ಯವಸ್ಥೆ ಮಾಡಿಲ್ಲ ಎಂದು ಸಿಎಆರ್ ಮೈದಾನದಲ್ಲಿ ಸಂಘ ಪರಿವಾರದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರಿಗಿಂತ ಪೊಲೀಸರೇ ಹೆಚ್ಚಾಗಿದ್ದರು



ಸಂಘ ಪರಿವಾರ ಹಾಗೂ ದಲಿತ ಮಹಾಸಭಾದ ಕಾರ್ಯಕರ್ತರು ಹಮ್ಮಿಕೊಂಡಿದ್ದ ಚಾಮುಂಡಿಬೆಟ್ಟ ಚಲೋ ವೇಳೆ ಪ್ರತಿಭಟನಾಕಾರರಿಗಿಂತ ಪೊಲೀಸರೇ ಹೆಚ್ಚಾಗಿದ್ದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿಂದು ಮಣಿ, ಸುಂದರ್ ರಾಜ್ ಅವರು ಬಂದೋಬಸ್ತ್ ನೇತೃತ್ವ ವಹಿಸಿದ್ದರು.

ಸಿಎಆರ್, ಕೆಎಸ್‌ಆರ್‌ಪಿ, ಕಮಾಂಡೋ ಪಡೆ ಸೇರಿದಂತೆ ನರಸಿಂಹರಾಜ ವಲಯದ ಎಲ್ಲಾ ಇನ್ಸ್‌ಪೆಕ್ಟರ್‌ಗಳನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು.

ಪ್ರತಿಭಟನಾಕಾರರು ಕುರುಬಾರಹಳ್ಳಿ ಸರ್ಕಲ್ ನಲ್ಲಿ ಕೆಲವು ನಿಮಿಷ ಕೂಡ ನಿಲ್ಲಲು ಬಿಡದೆ ವಶಕ್ಕೆ ಪಡೆದರು. ಹೆಚ್ಚಿನ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜನೆ ಮಾಡಿದ್ದ ಕಾರಣ ಯಾವುದೇ ಅಹಿತಕರ ಘಟನೆಗೆ ಅವಕಾಶವಾಗಲಿಲ್ಲ. ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಕರೆದೊಯ್ಯಲು ಕೆಎಸ್‌ಆರ್‌ಪಿ ಬಸ್‌ಗಳು ಮಾತ್ರವಲ್ಲದೆ ಖಾಸಗಿ ವಾಹನಗಳನ್ನು ಬಳಕೆ ಮಾಡಲಾಗಿತ್ತು.

ಕೇಸರಿಶಾಲು, ಪಂಚೆ ಧರಿಸಿ ಚಾಮುಂಡಿ ದರ್ಶನಕ್ಕೆ ಹೋಗಕೂಡದು!

ಮೈಸೂರು, ಸೆ.9– 'ಚಾಮುಂಡಿ ಚಲೋ' ನಡೆಸಲು ಮುಂದಾದವರನ್ನು ಬಂಧಿಸಿದ್ದ ಪೊಲೀಸರು, ಹಲವರನ್ನು ಸಂಜೆವರೆಗೂ ಬಿಡುಗಡೆ ಮಾಡಲಿಲ್ಲ.

ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಮಂದಿಯನ್ನು ಬಂಧಿಸಿದ ಪೊಲೀಸರು, ಸಿಎಆರ್ ಮೈದಾನ, ಆಲನಹಳ್ಳಿ ಹಾಗೂ ಹೆಬ್ಬಾಳು ಠಾಣೆ ಬಳಿ ಕರೆದೊಯ್ದಿದ್ದರು. ಕೆಲವರನ್ನು ಮಧ್ಯಾಹ್ನದ ವೇಳೆಗೆ ಬಿಡುಗಡೆ ಮಾಡಲಾಯಿತು.

ಆದರೆ ಹೊರ ಜಿಲ್ಲೆಗಳಿಂದ ಬಂದಿದ್ದವರು ನಾವು ಚಾಮುಂಡಿಬೆಟ್ಟಕ್ಕೆ ಹೋಗಲೇಬೇಕೆಂದು ಪಟ್ಟು ಹಿಡಿದು, ಪೊಲೀಸರೊಂದಿಗೆ ವಾಕ್ಸಮರ ನಡೆಸಿದ್ದರಿಂದ ಅಂತಹವರನ್ನು ಬಿಡುಗಡೆ ಮಾಡಲು ವಿಳಂಬ ಮಾಡಿದರು. ಇದರಿಂದ ಆಕ್ರೋಶಗೊಂಡ ಕಾರ್ಯಕರ್ತರು, ಅಲ್ಲಿಯೇ ಚಾಮುಂಡೇಶ್ವರಿ ದೇವಿಗೆ ಜೈಕಾರ ಹಾಕಿ, ಭಜನೆ ಮಾಡಿದರು.

ಕಡೆಗೆ ಸಹಜ ರೀತಿಯಲ್ಲಿ ಚಾಮುಂಡಿ ಬೆಟ್ಟಕ್ಕೆ ತೆರಳಿ ದರ್ಶನ ಪಡೆಯಲು ಅಡ್ಡಿಯಿಲ್ಲ. ಆದರೆ ಈ ಪರಿಸ್ಥಿತಿಯಲ್ಲಿ ಕೇಸರಿ ಶಾಲು, ಪಂಚೆ ಧರಿಸಿ ಗುಂಪಾಗಿ ಹೋಗುವುದು ಸೂಕ್ತವಲ್ಲ. ಅಲ್ಲಿ ಯಾವುದೇ ರೀತಿಯ ಘೋಷಣೆಗಳನ್ನೂ ಕೂಗಬಾರದು ಎಂದು ತಿಳಿಸಿ, ಸಂಜೆ 6 ಗಂಟೆ ವೇಳೆಗೆ ಬಹುತೇಕ ಎಲ್ಲರನ್ನೂ ಬಿಡುಗಡೆ ಮಾಡಿದರೆಂದು ತಿಳಿದುಬಂದಿದೆ

ಮದ್ದೂರು ಬಂದ್ ಯಶಸ್ವಿ

144 ಸೆಕ್ಷನ್ ಅನ್ನು ಜಾರಿಗೊಳಿಸಲಾಗಿದ್ದು, ಅದನ್ನು ಮಂಗಳವಾರವೂ ಮುಂದುವರೆಸಿದ್ದು, ಅಗತ್ಯ ಬಿದ್ದರೆ ಬುಧವಾರವೂ ಮುಂದುವರೆಯುವ ಸಾಧ್ಯತೆ ಇದೆ.

ಸದ್ಯದ ಪರಿಸ್ಥಿತಿಯ ಬಗ್ಗೆ ಮಂಗಳವಾರ ಬೆಳಿಗ್ಗೆ ಇಡೀ ಪಟ್ಟಣವನ್ನು ಪ್ರದಕ್ಷಿಣೆ ಹಾಕಿ ಪೊಲೀಸ್ ಸಿಬ್ಬಂದಿಗೆ ಅಗತ್ಯ ಸಲಹೆಗಳನ್ನು ಕೊಟ್ಟು ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಸದ್ಯ ಮದ್ದೂರಿನಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಿದ್ದು, ಮದ್ಯದಂಗಡಿ ಸಹ ಬಂದ್ ಮಾಡಿದ್ದೇವೆ. ಬಂದ್ ಸಂದರ್ಭದಲ್ಲಿ ಕಿಡಿಗೇಡಿಗಳು ಈ ಅವಕಾಶ ಬಳಸಿಕೊಂಡು ಪ್ರಚೋದನೆ ನೀಡುವ ಸಾಧ್ಯತೆ ಇದ್ದು, ಅಂತಹವರ ಮೇಲೆ ತೀವ್ರ ನಿಗಾ ವಹಿಸಿದ್ದೇವೆ. ಹೆಚ್ಚಿನ ಬಂದೋಬಸ್ತ್ ಅನ್ನು ಎಲ್ಲಾ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿಯಾಗಿಯೇ ಮಾಡಲಾಗಿದ್ದು, ನಾಲ್ವರು ಎಸ್ಪಿಗಳು, ಮೂವರು ಎಎಸ್ಪಿಗಳು, 15 ಮಂದಿ ಡಿವೈಎಸ್ಪಿಗಳು, 30 ಇನ್ಸ್‌ಪೆಕ್ಟರ್ ಸೇರಿದಂತೆ ಸುಮಾರು 800ಕ್ಕೂ ಅಧಿಕ ಪೊಲೀಸರಲ್ಲದೆ, 15 ಕೆಎಸ್‌ಆರ್‌ಪಿ, 5 ಡಿಆರ್ ತುಕಡಿಗಳು ಸಹ ಕಾರ್ಯ ನಿರ್ವಹಿಸುತ್ತಿದ್ದಾರೆ. ಆಯಾಕಟ್ಟಿನ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ತಿಳಿಸಿದರು.

26 ಮಂದಿ ಭಾಗಿ: ಮೊದಲ ದಿನದ ಕಲ್ಲು ತೂರಾಟ ಘಟನೆಯಲ್ಲಿ ಒಟ್ಟು 26 ಜನ ಭಾಗಿಯಾಗಿದ್ದು, ಈ ಪೈಕಿ 22 ಜನರನ್ನು ವಶಕ್ಕೆ ಪಡೆಯಲಾಗಿದೆ. ನಾಲ್ಕು ಜನರು ಬಂಧನ ಬಾಕಿ ಇದೆ ಬಂಧಿತರೆಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದರೂ ಅವರನ್ನು ಮತ್ತೆ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಿದ್ದೇವೆ. ಆರೋಪಿಗಳಿಗೆ ಯಾರದ್ದಾದರೂ ಕುಮ್ಮಕ್ಕು ಇದೆಯೇ ಅಥವಾ ಇದು ಪೂರ್ವನಿಯೋಜಿತವೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಪರಾರಿಯಾಗಿರುವ ನಾಲ್ಕು ಮಂದಿಯ ಬಂಧನಕ್ಕೆ ಬಲೆ ಬೀಸಿದ್ದು, ಇತರೆ ಕಿಡಿಗೇಡಿಗಳ ಚಲನ–ವಲನವನ್ನು ಸ್ಥಳೀಯ ಸಿಸಿ ಕ್ಯಾಮೆರಾಗಳ ಫುಟೇಜ್ ನೋಡಿ ತನಿಖೆ ಮಾಡುತ್ತಿದ್ದೇವೆ ಎಂದರು.

ಹೋಬಳಿ ಕೇಂದ್ರಗಳು ಸಹ ಬಂದ್: ಮದ್ದೂರಿನಲ್ಲಿ ಬಂದ್ ಬಿಸಿ ಕೇವಲ ಮದ್ದೂರು ನಗರಕ್ಕೆ ಸೀಮಿತವಾಗಿರಲಿಲ್ಲ. ಮದ್ದೂರು ತಾಲೂಕಿನ ಪ್ರಮುಖ ಹೋಬಳಿ ಕೇಂದ್ರಗಳಾದ ಕೆ.ಎಂ.ದೊಡ್ಡಿ, ಬೆಸಗರಹಳ್ಳಿ, ಕೆಸ್ತೂರು ಹಾಗೂ ಕೊಪ್ಪ ಹೋಬಳಿಗಳು ಸಹ ಬಂದ್ ಆಗಿದ್ದವು.

ಕೆರೆಗೋಡಿನಲ್ಲೂ ಭಾರೀ ಪ್ರತಿಭಟನೆ: ಹನುಮ ಧ್ವಜ ಹಾರಾಟ ವಿಚಾರದಲ್ಲಿ ಮುನ್ನೆಲೆಗೆ ಬಂದಿದ್ದ ಮಂಡ್ಯ ತಾಲೂಕಿನ ಕೆರಗೋಡು ಗ್ರಾಮದಲ್ಲೂ ಮದ್ದೂರು ಘಟನೆ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಕಲ್ಲು ತೂರಾಟ ಖಂಡಿಸಿ ಹನುಮಧ್ವಜ ಸಮಿತಿಯಿಂದ ಪ್ರತಿಭಟನೆ ನಡೆಸಿದ್ದು, ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಲಾಯಿತು. ಕಿಡಿಕೇಡಿಗಳನ್ನು ಬಂಧಿಸಿ ಕಠಿಣ ಕ್ರಮಕ್ಕೆ ಆಗ್ರಹಿಸಲಾಯಿತು. ಪ್ರತಿಭಟನೆಯಲ್ಲಿ ಹನುಮ ಧ್ವಜ ಸಮಿತಿ ಸದಸ್ಯ ವಿನೋಭಾ ಸೇರಿ ಹಲವರು ಭಾಗಿಯಾಗಿದ್ದರು. ಇತ್ತ ಮಂಡ್ಯ ನಗರದ ಡಿಸಿ ಕಚೇರಿ ಎದುರು ಸಹ ನಗರ ಬಿಜೆಪಿ ಘಟಕದ ವತಿಯಿಂದ ಘಟನೆ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ನಾಳೆ ಮಳವಳ್ಳಿ ಬಂದ್ : ಮದ್ದೂರು ಘಟನೆಯ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಆಗ್ರಹಿಸಿ ಹಿಂದೂ ಜಾಗರಣ ವೇದಿಕೆ ನಾಳೆ ಮಳವಳ್ಳಿಯಲ್ಲಿ ಬಂದ್ ಆಚರಿಸಲು ತೀರ್ಮಾನಿಸಿದೆ

ಸಿಬ್ಬಂದಿಯನ್ನೇ ಬೋನಿನಲ್ಲಿ ಕೂಡಿ ಹಾಕಿದ ಬೇಸತ್ತ ಗ್ರಾಮಸ್ಥರು!

ನಂತರ ಸ್ವಲ್ಪದೂರದಲ್ಲಿ ಇಟ್ಟಿದ್ದ ಬೋನಿನೊಳಗೆ ಕರು ಸತ್ತಿರುವುದನ್ನು ನೋಡಲು ಒಳಗೆ ಹೋದ ಸಿಬ್ಬಂದಿಯನ್ನು ಹಿಂದೆಯೇ ಬಂದ ರೈತರು ಬೋನಿನೊಳಗೆ ಕೂಡಿಹಾಕಿ ದಿಗ್ಬಂಧನ ವಿಧಿಸಿದರು. ಜೀಪಿನ ಚಕ್ರದ ಗಾಳಿ ಬಿಟ್ಟು, ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಆಗಮಿಸಬೇಕು ಎಂದು ಪ್ರತಿಭಟಿಸಿದರು. ವಿಷಯ ತಿಳಿದ ಕೂಡಲೇ ಬಂಡೀಪುರ ಉಪವಿಭಾಗದ ಎಸಿಎಫ್ ಎನ್.ಪಿ.ನವೀನ್ ಕುಮಾರ್, ಗುಂಡ್ಲುಪೇಟೆ ಎಸಿಎಫ್ ಸುರೇಶ್, ಪ್ರಭಾರ ಆರ್‌ಎಫ್‌ಒ ಶಿವಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ಜಯಕುಮಾರ್, ವನರಾಜು, ಸಬ್‌ಇನ್ಸ್‌ಪೆಕ್ಟರ್ ಮಹೇಶ್ ಜತೆ ಸ್ಥಳಕ್ಕೆ ಆಗಮಿಸಿದರು.

ಅರಣ್ಯ ಇಲಾಖೆ ಸಿಬ್ಬಂದಿ ಹುಲಿ ಸೆರೆ ಕಾರ್ಯಾಚರಣೆಯನ್ನು ಗಂಭೀರವಾಗಿ ಪರಿಗಣಿಸದೆ ಬರಿ ಭರವಸೆ ನೀಡುತ್ತಿದ್ದಾರೆ. ಇದರಿಂದ ತಮ್ಮ ಜಮೀನುಗಳಿಗೆ ಮತ್ತು ಕಾರ್ಮಿಕರು ಕೂಲಿಕೆಲಸಗಳಿಗೆ ಹೋಗಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ಕಳೆದ 20 ದಿನಗಳಿಂದಲೂ ಹುಲಿ ಸೆರೆ ಕಾರ್ಯಾಚರಣೆ ಗಂಭೀರ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ಮಾಡಿರುವ ಅಧಿಕಾರಿಗಳ ವಿರುದ್ದ ಕ್ರಮಕೈಗೊಳ್ಳಬೇಕು, ಕೂಡಲೇ ಹುಲಿ ಸೆರೆಗೆ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ವೇಳೇ ಪ್ರತಿಭಟನಾಕಾರರೊಂದಿಗೆ ಮಾತನಾಡಿದ ಎಸಿಎಫ್ ನವೀನ್‌ಕುಮಾರ್ ಈಗಿನಿಂದಲೇ ಸಾಕಾನೆಗಳನ್ನು ಕರೆತಂದು ಕೂಂಬಿಂಗ್ ನಡೆಸಿ ಹುಲಿಯನ್ನು ಸೆರೆಹಿಡಿಯಲು ಕ್ರಮಕೈಗೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ನಾನೇ ಗಮನಹರಿಸಿ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದು ಭರವಸೆ ನೀಡಿ ಬೋನಿನೊಳಗೆ ಬಂಧಿಯಾಗಿದ್ದ ಸಿಬ್ಬಂದಿಯನ್ನು ಹೊರಗೆ ಕರೆತಂದರು.

ಬೊಮ್ಮಲಾಪುರ ಸಮೀಪ ಕಾಣಿಸಿಕೊಳ್ಳುತ್ತಿರುವ ಹುಲಿ ಸೆರೆ ಹಿಡಿಯುವ ಕಾರ್ಯಾಚರಣೆಯಲ್ಲಿ ಸರಿಯಾಗಿ ಕರ್ತವ್ಯ ಪಾಲಿಸದ ಹಾಗೂ ಇಂದಿನ ಘಟನೆಗೆ ಕಾರಣರಾದ ಸಿಬ್ಬಂದಿ ಮತ್ತು ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಲಾಗುವುದು. ಹಾಗೇಯೇ ನಮ್ಮ ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿಪಡಿಸಿದವರ ವಿರುದ್ದವೂ ಪೊಲೀಸರಿಗೆ ದೂರು ನೀಡಲಾಗುವುದು

-ಎಸ್.ಪ್ರಭಾಕರ್

ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ.

ವಿಷ ಕೊಡಿ...!?

ಮೂರು ಬಾರಿ ಬೇಡಿಕೊಂಡರೆ, ಬಟ್ಟೆಗಳಿಗೆ ಫಂಗಸ್ ಆಗಿದೆ ಎಂದು ಹಲವು ಬಾರಿ ಅಳಲು ತೋಡಿ ಕೊಂಡರು. ನಟ ದರ್ಶನ್ ಮತ್ತು ಇತರ ಆರೋಪಿಗಳನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬೇರೆಡೆಗೆ ಸ್ಥಳಾಂತರಿಸಬೇಕೆಂದು ಕೋರಿದ್ದ ಅರ್ಜಿಯನ್ನು ಬೆಂಗಳೂರಿನ ಕೋರ್ಟ್ ವಜಾ ಮಾಡಿದೆ. ಕನಿಷ್ಠ ಮೂಲ ಸೌಕರ್ಯ ನೀಡ ಬೇಕೆಂದು ದರ್ಶನ್ ಕೋರಿದ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿ, ಜೈಲು ನಿಯಮಾವಳಿ ಪ್ರಕಾರ ಏನೆಲ್ಲಾ ಸೌಲಭ್ಯ ಕೊಡಬೇಕು ಅದನ್ನು ನೀಡಿ, ಕಾರಾಗೃಹದೊಳಗೆ ಓಡಾಡಲು ಅವಕಾಶ ಮಾಡಿ ಹಾಗೂ ಹಾಸಿಗೆ, ದಿಂಬು ನೀಡುವಂತೆಯೂ ಸೂಚಿಸಿದೆ.

ನೂತನ ಉಪ ರಾಷ್ಟ್ರಪತಿ

ಗೆಲುವಿಗೆ ನಿಗದಿಪಡಿಸಲಾಗಿತ್ತು. ಎನ್‌ಡಿಎ ಮತಗಳ ಸಂಖ್ಯೆ 427. ಆದರೆ ರಾಧಾಕೃಷ್ಣನ್ ಗಳಿಸಿರುವುದು 452 ಮತ. ಎನ್‌ಡಿಎ ಅಭ್ಯರ್ಥಿ ರಾಧಾಕೃಷ್ಣನ್ ಪರ ಭಾರೀ ಅಡ್ಡ ಮತದಾನವಾಗಿದೆ ಎಂದು ಹೇಳಲಾಗಿದೆ. ಅಕ್ಟೋಬರ್ 20, 1957ರಂದು ತಮಿಳುನಾಡಿನ ಕೊಂಗು ಪ್ರದೇಶದ ತಿರುಪ್ಪೂರಿನಲ್ಲಿ ಜನಿಸಿದ ರಾಧಾಕೃಷ್ಣನ್ ಅವರು, 17ನೇ ವಯಸ್ಸಿನಲ್ಲಿಯೇ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸೇರಿದರು. ನಂತರ ಅವರು ಭಾರತೀಯ ಜನತಾ ಪಕ್ಷ(ಬಿಜೆಪಿ) ಕಾರ್ಯಕರ್ತರಾಗಿ, ತಮಿಳುನಾಡಿನ ಬಿಜೆಪಿ ಅಧ್ಯಕ್ಷರಾಗಿ, ಎರಡು ಬಾರಿ ಸಂಸದರಾಗಿ, ಆನಂತರ ಜಾರ್ಖಂಡ್, ಮಹಾ ರಾಷ್ಟ್ರ ಸೇರಿದಂತೆ ಅನೇಕ ರಾಜ್ಯಗಳ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು, ಸೆ.9– ಸೆ.10ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕೆಆರ್.ನಗರ ಪಟ್ಟಣ, ಚಂದಗಾಲು, ಹೊಸೂರು, ಸಿದ್ದಾಮರ, ಬ್ಯಾಡರಹಳ್ಳಿ, ದೊಡ್ಡಕೊಪ್ಪಲು, ಲಾಲದೇವನಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳು, ಹಳಿಯೂರು, ಹೊಸ ಕೋಟೆ, ಕುಪ್ಪೆ, ಮಾಯಗೌಡನ ಹಳ್ಳಿ, ಮಾವತ್ತೂರು ಹಾಗೂ ಕೆಸ್ತೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳು. ನಂಜನಗೂಡು ಉಪವಿಭಾಗ–2ರ ತಗಡೂರು ಮತ್ತು ಬದನವಾಳು ಶಾಖಾ ವ್ಯಾಪ್ತಿಯ ಅಳಗಂಚಿ, ಅಳಗಂಚಿಪುರ, ಮಲ್ಲೂಪುರ, ಮಡಹಳ್ಳಿ, ಗೋಣಹಳ್ಳಿ, ಕೋಣನೂರು, ಚಿಕ್ಕಕೌಲಂದೆ, ದೊಡ್ಡಕೌಲಂದೆ, ಗಟ್ಟವಾಡಿ ಪುರ, ಗಟ್ಟವಾಡಿ, ಹರಗನಪುರ, ಕೆ.ಆರ್. ಪುರ, ಹೆಳವರಹುಂಡಿ, ದೇವನೂರು, ಚುಂಚನಹಳ್ಳಿ ನಂಜನಹಳ್ಳಿ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಸಾವು; ಪುತ್ರನಿಗೆ ಗಾಯ

ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕಾರಿನ ಮುಂಭಾಗದ ಸೀಟಿನಲ್ಲಿದ್ದ ಕಾಳಿಮಾಡ ಸೋಮಯ್ಯ ಅವರು ಸ್ಥಳದಲ್ಲೇ ಮೃತಪಟ್ಟಿದ್ದು, ಹಿಂಬದಿ ಸೀಟಿನಲ್ಲಿ ಪ್ರಯಾಣಿಸುತ್ತಿದ್ದ ಕಾಳಿಮಾಡ ಸರಸ್ವತಿ ಅವರು ಗಂಭೀರ ಗಾಯಗೊಂಡು ಆಸ್ಪತ್ರೆಗೆ ಕರೆದೊಯ್ಯುವ ಸಂದರ್ಭ ಮೃತಪಟ್ಟಿದ್ದಾರೆ. ಗಾಯಾಳು ಸಜನ್ ಅವರನ್ನು ಚನ್ನಪಟ್ಟಣ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರಿನಲ್ಲಿದ್ದ ರ್‍ಯಾಟ್ ವಿಲ್ಲರ್ ಶ್ವಾನ ಕೂಡ ಅಪಾಯದಿಂದ ಪಾರಾಗಿದೆ. ಕಾಳಿಮಾಡ ಸೋಮಯ್ಯ ಅವರು ಬೆಂಗಳೂರು ಬಾಗಲಕುಂಟೆಯಲ್ಲಿ ವಾಸವಾಗಿದ್ದರು ಎಂದು ತಿಳಿದು ಬಂದಿದೆ. ಘಟನಾ ಸ್ಥಳಕ್ಕೆ ಚನ್ನಪಟ್ಟಣ ಸಂಚಾರಿ ಪೊಲೀಸರು ಭೇಟಿ ನೀಡಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಲ್ಲು ತೂರಾಟ ಪೂರ್ವ ನಿಯೋಜಿತ ಕೃತ್ಯದ ಶಂಕೆ

ನಮ್ಮ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಪತ್ರಕರ್ತರಿಗೆ ಮಾಹಿತಿ ನೀಡಿದರು. ಘಟನೆಯಲ್ಲಿ ಕೇವಲ ಮದ್ದೂರಿನವರು ಮಾತ್ರವಲ್ಲದೇ ಪಕ್ಕ ಚನ್ನಪಟ್ಟಣದ ಎರಡೂ ಮೂರು ಜನ ಇದ್ದಾರೆ. ಅವರು ಇಲ್ಲಿಗೆ ಊಟಕ್ಕೆ ಬಂದಿರುವ ಬಗ್ಗೆ ಮಾಹಿತಿ ಸಿಕ್ಕಿದೆ. ಸಿಸಿಟಿವಿ ವಿಡಿಯೋ ಪರಿಶೀಲನೆ ಮಾಡುತ್ತಿದ್ದೇವೆ. ಈಗಾಗಲೇ 22 ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪರಿಸ್ಥಿತಿ ಶಾಂತ ರೀತಿಯಲ್ಲಿದ್ದು, ಮುಂದೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ವಹಿಸಲಾಗಿದೆ ಎಂದರು. ಮದ್ದೂರಿನಲ್ಲಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಪೊಲೀಸರ ಪಥ ಸಂಚಲನ ಸಹ ಆಯಾಕಟ್ಟಿನ ಪ್ರದೇಶದಲ್ಲಿ ನಡೆಯುತ್ತಿದ್ದು, ನಾಳೆವರೆಗೂ ಬಂದೋಬಸ್ತ್ ಮುಂದುವರಿಯಲಿದೆ. 4 ಮಂದಿ ಎಸ್ಪಿ, ಮೂರು ಎಎಸ್ಪಿ, 600 ಪೊಲೀಸರು, ಸೇರಿದಂತೆ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಿದ್ದು, ರಾತ್ರಿ ವೇಳೆಯೂ ಕಟ್ಟೆಚ್ಚರ ವಹಿಸಲಾಗಿದೆ. ನಾಳೆ ಸಾಮೂಹಿಕ ಗಣೇಶ ಮೂರ್ತಿ ವಿಸರ್ಜನೆ ಇದೆ ವಿಶೇಷ ಬಂದೋ ಬಸ್ತ್ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಇನ್ನು ಮುಂದೆ ಜಿಲ್ಲೆಯಲ್ಲಿ ಈ ರೀತಿ ದುರ್ಘಟನೆ ನಡೆಯದಂತೆ ಕ್ರಮ ವಹಿಸಬೇಕೆಂದು ಮಂಡ್ಯ ಜಿಲ್ಲಾ ಪೊಲೀಸರಿಗೆ ಸೂಚನೆ ನೀಡಿದ್ದೇನೆ. ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕೆಂದು ಹೇಳಿದ್ದು, ಮುಂದೆ ಇಂತಹ ಘಟನೆ ಮರುಕಳಿಸದಂತೆ ಸಾರ್ವಜನಿಕರು ಸಹ ತಮ್ಮ ಜವಾಬ್ದಾರಿ ಅರಿಯಬೇಕೆಂದು ಮನವಿ ಮಾಡಿದರು.

ಮೈಸೂರು ಮಿತ್ರ

ಕುವೆಂಪು ಅವರ ನಾಡಗೀತೆಗೆ 100 ವರ್ಷ

ಗಂಗೋತ್ರಿಯ ಕುವೆಂಪು ಕೂಟದಲ್ಲಿ ಜಗದ ಕವಿಯ ಚಿತ್ರಾವಳಿ ದರ್ಶನ


● ದಸರಾ ಕವಿಗೋಷ್ಠಿ ಉಪ ಸಮಿತಿ ಸಿದ್ಧತೆ ● ಸಾಹಿತ್ಯಾಸಕ್ತರ ಹೃನ್ಮನ ಸೆಳೆಯುವ ಚಿತ್ರಣ

ಮೈಸೂರು, ಸೆ.9(ಎಂಕೆ)– ಜಯ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ... ಎಂಬ ಪದಪುಂಜಗಳ ಮೂಲಕ ಕನ್ನಡ ನಾಡಿನ ಹಿರಿಮೆಯನ್ನು ವಿಶ್ವಕ್ಕೆ ಪರಿಚಯಿಸಿದ ಜಗದ ಕವಿ... ಯುಗದ ಕವಿ... ರಾಷ್ಟ್ರಕವಿ ಕುವೆಂಪು ಅವರ ಚಿತ್ರಕೂಟ ಸಾಹಿತ್ಯ ಪ್ರಿಯರಿಗೆ ಸ್ವಾಗತ ಕೋರಿದೆ...!

ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2025ರ ದಸರಾ ಕವಿಗೋಷ್ಠಿ ಈ ವರ್ಷ ಕುವೆಂಪು ಕನಸಿನ ಮಾನಸಗಂಗೋತ್ರಿ ಆವರಣದಲ್ಲಿರುವ ಬಿಎಂಶ್ರೀ ಸಭಾಂಗಣದಲ್ಲಿ ನಡೆಯಲಿದ್ದು, ಕವಿಗೋಷ್ಠಿಗೆ ಆಗಮಿಸುವ ಕವಿಗಳು, ಸಾಹಿತ್ಯಾಸಕ್ತರ ಹೃನ್ಮನ ಸೆಳೆಯಲು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಕುವೆಂಪು ಚಿತ್ರಕೂಟ ಸಿದ್ಧವಾಗಿದೆ.

1924ರಲ್ಲಿ ಕುವೆಂಪು ಅವರಿಂದ ರಚಿತವಾದ ನಾಡಗೀತೆಗೆ 100 ವರ್ಷಗಳು ತುಂಬಿರುವ ಹಿನ್ನೆಲೆ ದಸರಾ ಕವಿಗೋಷ್ಠಿಯಲ್ಲಿ ನೂರು ಜನರ ಧ್ವನಿಗೂಡಿಸಿ, ನಾಡಗೀತೆ ಹಾಡಿಸುವ ಹಾಗೂ ಕುವೆಂಪು ಅವರ ಅಪರೂಪದ ಚಿತ್ರಗಳ ಸಂಗ್ರಹವಾದ ಕುವೆಂಪು ಚಿತ್ರಕೂಟ ವೀಕ್ಷಣೆಗೆ ಅವಕಾಶ ನೀಡಲು ದಸರಾ ಕವಿಗೋಷ್ಠಿ ಉಪ ಸಮಿತಿ ನಿರ್ಧರಿಸಿದೆ.

ರಾಷ್ಟ್ರಕವಿ ಕುವೆಂಪು ಅವರು, ಯುವಕರಾಗಿದ್ದಾಗಿನ ಭಾವಚಿತ್ರದಿಂದ ಹಿಡಿದು ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಅವರೊಂದಿಗೆ ಹೆಲಿಕಾಪ್ಟರ್‌ನಲ್ಲಿ ಕುಪ್ಪಳ್ಳಿಯನ್ನು ವೀಕ್ಷಣೆ ಮಾಡಿ ಅಭಿನಂದನೆ ಸ್ವೀಕರಿಸಿದವರೆಗಿನ ಪ್ರಮುಖ ಘಟನಾವಳಿಗಳ ಕಪ್ಪು-



ಬಿಳುಪಿನ ಚಿತ್ರಾವಳಿಗಳು ನೋಡುಗರ ಹೃದಯದಲ್ಲಿ ಕವನಗಳ ಸಾಲನ್ನು ಮೂಡಿಸುವಂತಿವೆ.

'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಕುವೆಂಪು ಅವರ ಚೆಂದದ ಬರವಣಿಗೆ, ಕನ್ನಡದಲ್ಲಿ ಎಂಎ ಸ್ನಾತಕೋತ್ತರ ಪದವಿ ಪಡೆದು ಸೂಟು ಧರಿಸಿ ಕುಳಿತಿರುವುದು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಘಟಿಕೋತ್ಸವದ ಭಾಷಣ ಮಾಡುತ್ತಿರುವುದು, ಡಾ.ರಾಜ್‌ಕುಮಾರ್ ಅವರಿಂದ ಕರ್ನಾಟಕ ರತ್ನ ಸ್ವೀಕರಿಸುತ್ತಿರುವುದು, ವರಕವಿ ದ.ರಾ.ಬೇಂದ್ರೆ ಅವರೊಂದಿಗೆ ಇರುವುದು, ಜ್ಞಾನಪೀಠ ಪ್ರಶಸ್ತಿ ಪಡೆದ ಅಮೃತ ಘಳಿಗೆ, ಕುಟುಂಬಸ್ಥರು, ಕುಪ್ಪಳ್ಳಿಯ ಕವಿ ಮನೆ ಸೇರಿದಂತೆ ಕಣ್ಣು ಹಾಯಿಸಿದ ಕಡೆಯೆಲ್ಲಾ ಕುವೆಂಪು ಎನ್ನುವಂತೆ ಚಿತ್ರಕೂಟ ಅಕ್ಷರ ಪ್ರಿಯರ ಮನಸೆಳೆಯುವಂತಿದೆ.

ಕುವೆಂಪು ಸಾಹಿತ್ಯ ಭಂಡಾರ: ಕುವೆಂಪು ಚಿತ್ರಕೂಟದಲ್ಲಿ ಕುವೆಂಪು ಅವರ ಚಿತ್ರಾವಳಿಗಳ ಜೊತೆಗೆ ಕುವೆಂಪು ಸಮಗ್ರ ಸಾಹಿತ್ಯ ಭಂಡಾರವನ್ನು ವೀಕ್ಷಣೆಗೆ ಇಡಲಾಗಿದೆ. ಕುವೆಂಪು ರಚಿತ ಎಲ್ಲಾ ಕೃತಿ, ಕವನ ಸಂಕಲನ, ಕಾದಂಬರಿ, ಮಹಾಕಾವ್ಯಗಳು ವೀಕ್ಷಣೆಗೆ ಲಭ್ಯವಿದ್ದು, ತಣ್ಣನೆಯ ವಾತಾವರಣದಲ್ಲಿ ಕುಳಿತು ಒಂದಷ್ಟು ಕಾಲ ಓದಲು ಅವಕಾಶ ಕಲ್ಪಿಸಲಾಗಿದೆ.

ಮಧ್ಯಾಹ್ನ 3 ರಿಂದ 5ರವರೆಗೆ: ದಸರಾ ಕವಿಗೋಷ್ಠಿಯ ಸಂದರ್ಭದಲ್ಲಿ ಕವಿಗೋಷ್ಠಿ ಜೊತೆಗೆ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕುವೆಂಪು ಚಿತ್ರಕೂಟ ವೀಕ್ಷಣೆಗೆ ಅವಕಾಶ ನೀಡಲಾಗುವುದು. ಅಲ್ಲದೆ ನಾಡಗೀತೆ ರಚಿತವಾಗಿ 100 ವರ್ಷಗಳು ಪೂರೈಸಿದ ಹಿನ್ನೆಲೆಯಲ್ಲಿ ವಿಶೇಷವಾಗಿ ಸಂಭ್ರಮಿಸಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ದಸರಾ ಕವಿಗೋಷ್ಠಿ ಉಪ ಸಮಿತಿ ಕಾರ್ಯಾಧ್ಯಕ್ಷರಾದ ಪ್ರೊ.ಎನ್.ಕೆ.ಲೋಲಾಕ್ಷಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

> ನಾಡಗೀತೆಗೆ 100 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಏಕಕಾಲದಲ್ಲಿ 100 ಜನರಿಂದ ನಾಡಗೀತೆ ಹಾಡಿಸಲು ಹಾಗೂ ಕನ್ನಡಿಗರಿಗೆ ನಾಡಗೀತೆಯ ಬಗ್ಗೆ ಅರಿವು ಮೂಡಿಸಲು ನಿರ್ಧರಿಸಲಾಗಿದೆ. ಅಲ್ಲದೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಿರುವ ಕುವೆಂಪು ಚಿತ್ರಕೂಟ ವೀಕ್ಷಣೆಗೂ ಅವಕಾಶ ನೀಡಲಾಗುವುದು.
> – ಪ್ರೊ.ಎನ್.ಕೆ.ಲೋಲಾಕ್ಷಿ,
> ಕಾರ್ಯಾಧ್ಯಕ್ಷರು,
> ದಸರಾ ಕವಿಗೋಷ್ಠಿ ಉಪ ಸಮಿತಿ

ಬಿಎಂಶ್ರೀ ಸಭಾಂಗಣ ಸಿದ್ಧವಾಗುತ್ತಿದೆ: 400 ಆಸನಗಳ ವ್ಯವಸ್ಥೆ ಇರುವ ಬಿ.ಎಂ.ಶ್ರೀ ಸಭಾಂಗಣದಲ್ಲಿ ಈ ವರ್ಷ ದಸರಾ ಕವಿಗೋಷ್ಠಿ ಆಯೋಜಿಸಲು ನಿರ್ಧರಿಸಿದ್ದು, ಸಭಾಂಗಣ ಸಿದ್ಧತೆ ಕಾರ್ಯಗಳನ್ನು ನಡೆಸಲಾಗುತ್ತಿದೆ. ಕವಿಗೋಷ್ಠಿಯು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ವೇದಿಕೆಯಾಗಿದ್ದು, ಕರ್ನಾಟಕ ಮಾತ್ರವಲ್ಲದೇ ಬೇರೆ ಬೇರೆ ರಾಜ್ಯ ಹಾಗೂ ಅಂತಾರಾಷ್ಟ್ರೀಯ ಕವಿಗಳು ಆಗಮಿಸಿ ಕವನ ವಾಚನ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಅಪಾರ ಅಭಿಮಾನಿ ದೇವರು ಹೊಂದಿದ 'ಭೀಮ' ಭಾರ ಹೊರುವುದರಲ್ಲಿ 'ಭಲೇ ಭೀಮ'



ದಸರಾ ಗಜಪಡೆಯ ಕಿರಿಯ ಗಂಡಾನೆ ಭೀಮನಿಗೆ ಮಂಗಳವಾರ ಬೆಳಗ್ಗೆ ಭಾರ ಹೊರಿಸುವ ತಾಲೀಮು ನಡೆಸಲಾಯಿತು.

ಮೈಸೂರು, ಸೆ.9(ಎಂಟಿವೈ)– ದಸರಾ ಗಜಪಡೆಯ ಗಂಡಾನೆಗಳಲ್ಲಿ ಕಿರಿಯ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಅತೀ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಭೀಮನಿಗೆ ಮಂಗಳವಾರ ಬೆಳಗ್ಗೆ ಭಾರ ಹೊರುವ ತಾಲೀಮು ನಡೆಸಲಾಯಿತು.

ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಬಳಿ ಭೀಮನಿಗೆ ಗಾದಿ, ನಮ್ದಾ, ತೊಟ್ಟಿಲು ಕಟ್ಟಿ, ಮರಳು ಮೂಟೆ ಇಟ್ಟು ತಾಲೀಮಿಗೆ ಕರೆದೊಯ್ಯಲಾಯಿತು. ಸುಮಾರು 550 ಕೆಜಿ ಭಾರ ಹೊತ್ತು ಕಾವೇರಿ ಮತ್ತು ಹೇಮಾವತಿ ಕುಮ್ಕಿ ಆನೆಗಳೊಂದಿಗೆ ತಾಲೀಮಿನಲ್ಲಿ ಸಾಗಿದ ಭೀಮ, ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ವೃತ್ತ ಆರ್‌ಎಂಸಿ ವೃತ್ತ ಬಂಬೂ ಬಜಾರ್, ಹೈವೆ ವೃತ್ತದ ಮೂಲಕ ನೆಲ್ಸನ್ ಮಂಡೇಲಾ ರಸ್ತೆಯಲ್ಲಿ ಸಾಗಿ ಪಂಜಿನ ಕವಾಯತು ಮೈದಾನ ತಲುಪಿತು.

ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ 5 ಕಿ.ಮೀ. ಅಂತರವನ್ನು 1.20 ಗಂಟೆಯಲ್ಲಿ ತಲುಪಿ, ಭರವಸೆ ಮೂಡಿಸಿದ್ದಾನೆ. ಈಗಾಗಲೇ ಅಂಬಾರಿ ಆನೆ ಅಭಿಮನ್ಯುವಿನೊಂದಿಗೆ ಪ್ರಶಾಂತ, ಧನಂಜಯ, ಮಹೇಂದ್ರ ಆನೆಗೆ ಭಾರ ಹೊರಿಸುವ ತಾಲೀಮು ಯಶಸ್ವಿಯಾಗಿ ನಡೆಸಲಾಗಿದ್ದು, ಇಂದು ಭೀಮನಿಗೆ ಭಾರ ಹೊರಿಸಲಾಯಿತು. ಭಾರ ಹೊರುವ ತಾಲೀಮಿನ ಹಿನ್ನೆಲೆಯಲ್ಲಿ ಬೃಹತ್ ಗಾತ್ರದ ಹೂವಿನ ಹಾರವನ್ನು ಅಭಿಮಾನಿಗಳು ಭೀಮನಿಗೆ ಹಾಕಿ ಅಭಿಮಾನ ಮೆರೆದರು. ತಾಲೀಮಿನಲ್ಲಿ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಆರ್‌ಎಫ್‌ಓ ನದೀಮ್, ಪಶುವೈದ್ಯ ಡಾ.ಆದರ್ಶ್, ಸಹಾಯಕರಾದ ಅಕ್ರಂ, ರಂಗರಾಜು ಹಾಗೂ ಇನ್ನಿತರರು ಭಾಗವಹಿಸಿದ್ದರು. ಸಂಜೆ ಅರಮನೆ ಆವರಣದಲ್ಲಿಯೇ ತಾಲೀಮು ನಡೆಸಲಾಯಿತು.

ಮೃದಂಗ ವಿದ್ವಾನ್ ಎಂ.ಆರ್.ರಾಜಪ್ಪ ಪುಣ್ಯ ಸಂಸ್ಮರಣೋತ್ಸವ ಪ್ರಯುಕ್ತ

ಭರತನಾಟ್ಯ, ಶಾಸ್ತ್ರೀಯ ಸಂಗೀತ, ಯಕ್ಷಗಾನ ಪ್ರದರ್ಶನ

ಮೈಸೂರು,ಸೆ.9(ಪಿಎಂ)–ಮೈಸೂರು ಅರಮನೆ ಆಸ್ಥಾನದ ಮೃದಂಗ ವಿದ್ವಾನ್ ಆಗಿದ್ದ ಎಂ.ಆರ್.ರಾಜಪ್ಪ ಅವರ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮ ಮಂಗಳವಾರ ಮೈಸೂರಿನ ಕಲಾಮಂದಿರದಲ್ಲಿ ನಡೆಯಿತು.

ಸಂಸ್ಮರಣೋತ್ಸವ ಪ್ರಯುಕ್ತ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಪೈಕಿ ನೃತ್ಯಗಿರಿ ಶಾಲೆ ವಿದ್ಯಾರ್ಥಿಗಳ ಭರತ ನಾಟ್ಯ ಸಹ ಗಮನ ಸೆಳೆಯಿತು. ಗಣೇಶ ಸ್ತುತಿಯೊಂದಿಗೆ ಭರತನಾಟ್ಯ ಆರಂಭವಾಯಿತು. ಬಳಿಕ ಮುತ್ತಯ್ಯ ಭಾಗವತರ ರಚನೆಯ 'ಹಿಮಗಿರಿ' ಕೃತಿಯ ಗೀತೆಗೆ ನೃತ್ಯ ಪ್ರದರ್ಶಿಸಲಾಯಿತು. 'ಶುದ್ಧ ಧನ್ಯಾಸಿ' ರಾಗ ಹಾಗೂ 'ಆದಿ' ತಾಳದಲ್ಲಿ ಮೂಡಿಬಂದಿರುವ ಈ ಗೀತೆಗೆ ಸೊಗಸಾಗಿ ಹೆಜ್ಜೆ ಹಾಕಿದ ಭರತನಾಟ್ಯ ಕಲಾವಿದರು, ಸಭಿಕರ ಗಮನ ಸೆಳೆದರು. ಇದಲ್ಲದೆ, ಇನ್ನು ಹಲವು ಗೀತೆಗಳಿಗೆ ನೀಡಿದ ನೃತ್ಯ ಪ್ರದರ್ಶನ ಪ್ರೇಕ್ಷಕರ ರಂಜಿಸಿತು.



ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮೃದಂಗ ವಿದ್ವಾನ್ ಆಗಿದ್ದ ಎಂ.ಆರ್.ರಾಜಪ್ಪ ಅವರ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ನೃತ್ಯಗಿರಿ ಶಾಲೆ ವಿದ್ಯಾರ್ಥಿಗಳು ಭರತನಾಟ್ಯ ಪ್ರದರ್ಶಿಸಿದರು.

ಬಳಿಕ ನಡೆದ ವಾದ್ಯ ಸಂಗೀತ ಸಭಿಕರ ಮನತಣಿಸಿತು. ಎಂ.ಆರ್.ರಾಜಪ್ಪ ಅವರ ಪುತ್ರ ಡಾ.ಎಂ.ಆರ್. ಹನುಮಂತರಾಜು ನೇತೃತ್ವದಲ್ಲಿ ಶ್ರೀ ಸರಸ್ವತಿ ವಾದ್ಯವೃಂದ ತಂಡದಿಂದ 'ಲಯನಾದ ತರಂಗ' ಶೀರ್ಷಿಕೆಯಡಿ ಈ ವಾದ್ಯ ಸಂಗೀತ ನಡೆಯಿತು. ನಂತರ ಆಳ್ವಾಸ್ ಧೀಂಕಿಟ ಯಕ್ಷಗಾನ ಅಧ್ಯಯನ ಕೇಂದ್ರದಿಂದ ಯಕ್ಷಗಾನ ನಡೆಯಿತು.

ವಿಜ್ಞಾನ ಸಾಹಿತಿ ಪ್ರೊ.ಎಸ್.ರಾಮಪ್ರಸಾದ್, ಭಾಷಾಂತರಕಾರ ಡಾ.ಲಕ್ಷ್ಮೀನಾರಾಯಣ ಅರೋರಾ, ಮುಖಂಡ ಎಂ.ಆರ್.ರವೀಂದ್ರ ಹಾಗೂ ಎಂ.ಆರ್.ರಾಜಪ್ಪನವರ ಮಕ್ಕಳು ಮತ್ತು ಕುಟುಂಬ ವರ್ಗದವರು ಹಾಜರಿದ್ದರು.

ಮದ್ದೂರು ಗಲಭೆ ಆರೋಪಿಗಳ ಹೆಸರು ಬಹಿರಂಗ; ಪ್ರತಿಭಟನಾಕಾರರ ವಿರುದ್ಧವೂ ಪ್ರಕರಣ ದಾಖಲು



ಮದ್ದೂರು: ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ ಮಾಡಿ ಬಂಧಿತರಾಗಿರುವ 22 ಮಂದಿ ಆರೋಪಿಗಳು ಬಹಿರಂಗಗೊಂಡಿದ್ದು, ಮಹಮ್ಮದ್ ಆವೇಜ್ ಆಲಿಯಾಸ್ ಮುಳ್ಳು, ಮಹಮದ್ ಇರ್ಫಾನ್ ಆಲಿಯಾಸ್ ಮಿಯಾ, ನವಾಜ್ ಖಾನ್ ಆಲಿಯಾಸ್ ನವಾಜ್, ಇಮ್ರಾನ್ ಪಾಷಾ ಆಲಿಯಾಸ್ ಇಮ್ರಾನ್, ಉಮರ್ ಫಾರೂಕ್ ಆಲಿಯಾಸ್ ಉಮರ್, ಸೈಯದ್ ದಸ್ತಗಿರ್ ಆಲಿಯಾಸ್ ಸಯ್ಯದ್ ರಶೀದ್, ಖಾಸಿಫ್ ಅಹಮದ್ ಆಲಿಯಾಸ್ ಖಾಸಿಫ್, ಅಹಮದ್ ಸಲ್ಮಾನ್ ಆಲಿಯಾಸ್ ಮುಕ್ಕುಲ್ಲಾ, ಮುಸವೀರ್ ಪಾಷಾ ಆಲಿಯಾಸ್ ಒಡೆಯ, ಕಲಾಂದರ್ ಖಾನ್, ಮಹಮದ್ ಅಜೀಜ್, ಇನಾಯತ್ ಪಾಷಾ, ಸುಮೇರ್ ಪಾಷಾ, ಮಹಮದ್ ಖಲೀಂ ಆಲಿಯಾಸ್ ಕೈಫ್, ಸಕ್ಲೇನ್ ಪಾಷಾ, ಸಿಕಂದರ್ ಅಲಿಖಾನ್, ಸಾದಿಕ್ ಉಲ್ಲಾ, ಹರ್ಷದ್ ಖಾನ್, ಮೆಹಬೂಬ್ ಪಾಷಾ, ಪರ್ವಿಜ್ ಪಾಷಾ, ಇರ್ಫಾನ್ ಪಾಷಾ, ಸುಹೇಬ್ ಖಾನ್ ಬಂಧಿತರಾಗಿದ್ದು, ಸದ್ಯ ಎಲ್ಲರೂ ನ್ಯಾಯಾಂಗ ಬಂಧನದಲ್ಲಿದ್ದಾರೆ. ಬಂಧಿತರ ವಿರುದ್ಧ ವಿವಿಧ ಸೆಕ್ಷನ್ ಅಡಿ ಪ್ರಕರಣ ದಾಖಲಾಗಿದೆ.

ನಿನ್ನೆ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗಿಯಾದವರ ಮೇಲೂ ಪ್ರಕರಣ ದಾಖಲಾಗಿದ್ದು, ಕಲ್ಲು ತೂರಾಟ, ಬಾವುಟ, ಬಂಟಿಂಗ್ಸ್ ಕಿತ್ತೆಸೆದ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಭಟನಾಕಾರರ ಮೇಲೆ ಪ್ರತ್ಯೇಕ ಎರಡು ಎಫ್‌ಐಆರ್ ದಾಖಲಾಗಿದೆ. ಮುಸ್ಲಿಂ ಧರ್ಮದ ಬಾವುಟಕ್ಕೆ ಬೆಂಕಿ ಹಾಕಿ, ಈದ್ ಮಿಲಾದ್ ಹಬ್ಬದ ಹಿನ್ನಲೆ ಹಾಕಿದ್ದ ಬಂಟಿಂಗ್ಸ್ ಕಿತ್ತೆಸೆದವರ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ. ಮಸೀದಿಗೆ ನುಗ್ಗಲು ಯತ್ನಿಸಿ ಕಟ್ಟಡಕ್ಕೆ ಕಲ್ಲು ತೂರಿದ ವಿಚಾರವಾಗಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪಡಿಸಿ ಪೊಲೀಸರ ಮೇಲೆ ಹಲ್ಲೆ ಮಾಡಲಾಗಿದೆ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆಸಿದ ಗಿರೀಶ್, ಸೌಮ್ಯ, ರಮ್ಯ, ಪಲ್ಲವಿ ಸೇರಿದಂತೆ 500 ಜನರ ಮೇಲೆ ಎಫ್‌ಐಆರ್ ದಾಖಲಾಗಿದ್ದು, ಸದ್ಯ ಗಲಭೆ ಸೇರಿ ಒಟ್ಟು ಐದು ಎಫ್‌ಐಆರ್ ದಾಖಲು ಮಾಡಿದಂತಾಗಿದೆ.

ವಕಾಲತ್ತು ವಹಿಸದಿರಲು ನಿರ್ಧಾರ: ಮದ್ದೂರಿನಲ್ಲಿ ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಪರ ವಕಾಲತ್ತು ವಹಿಸದಂತೆ ಮದ್ದೂರು ವಕೀಲರ ಸಂಘ ನಿರ್ಧಾರ ಮಾಡಿದೆ. ಇಂದು ಕೋರ್ಟ್ ಕಲಾಪ ಬಹಿಷ್ಕಾರ ಮಾಡಿ ನಿರ್ಧಾರ ಕೈಗೊಂಡ ಮದ್ದೂರು ವಕೀಲರ ಸಂಘವು ಸಭೆಯಲ್ಲಿ ಆರೋಪಿಗಳ ಪರ ವಕಾಲತ್ತು ವಹಿಸದಂತೆ ಒಮ್ಮತದ ತೀರ್ಮಾನ ಕೈಗೊಂಡಿದ್ದು, ಜಿಲ್ಲಾ ವಕೀಲರ ಸಂಘಕ್ಕೂ ಈ ಬಗ್ಗೆ ಮನವಿ ಮಾಡಲಾಗುವುದು ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ಶಿವಣ್ಣ ಹೇಳಿದ್ದಾರೆ.

ಸೆ.14ಕ್ಕೆ ಮೈಸೂರಿನಲ್ಲಿ ಮೊಬೈಲ್ ಫೋಟೋಗ್ರಫಿ ವರ್ಕ್‌ಶಾಪ್

ಮೈಸೂರು, ಸೆ. 9– ಹವ್ಯಾಸಿ ಛಾಯಾಗ್ರಾಹಕ ಜಿ.ಎಲ್.ತ್ರಿಪುರಾಂತಕ ಅವರು ಸೆ. 14ರ ಭಾನುವಾರದಂದು ಮೈಸೂರಿನ ಮೆಟ್ರೊಪೋಲ್ ಸರ್ಕಲ್‌ನಲ್ಲಿ ರುವ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಒಂದು ದಿನದ ಮೊಬೈಲ್ ಫೋಟೋ ಗ್ರಫಿ ಹಾಗೂ ವಿಡೀಯೋಗ್ರಫಿ ಕಾರ್ಯಾಗಾರವನ್ನು ಏರ್ಪಡಿಸಿದ್ದಾರೆ.

ಇದು ಐದನೇ ಕಾರ್ಯಾಗಾರವಾಗಿದ್ದು, ಇವರೊಟ್ಟಿಗೆ ಹಿರಿಯ ಛಾಯಾ ಗ್ರಾಹಕರಾದ ಬಿ.ಎಸ್.ರಾಜಾರಾಂ ಅವರು ಸಹ ಕಾರ್ಯಾಗಾರದಲ್ಲಿ ತರಬೇತುದಾರರಾಗಿರುತ್ತಾರೆ. ಸಾಧಾರಣ ಮೊಬೈಲ್ ಕ್ಯಾಮೆರಾದಲ್ಲಿಯೇ ಅಸಾಧಾರಣ ಚಿತ್ರ ಹಾಗೂ ವಿಡಿಯೋ ಮಾಡುವುದು, ಮೊಬೈಲ್ ಆ್ಯಪ್‌ಗಳನ್ನು ಬಳಸಿ ಎಡಿಟಿಂಗ್ ಮಾಡುವ ವಿಧಾನಗಳನ್ನು ಪ್ರಾತ್ಯಕ್ಷಿಕೆ ಮೂಲಕ ಈ ತರಬೇತಿ ಕಾರ್ಯಾಗಾರದಲ್ಲಿ ತಿಳಿಸಿಕೊಡಲಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಫೋಟೋ ಹಾಗೂ ವಿಡೀಯೋಗಳನ್ನು ಅಪ್‌ಲೋಡ್ ಮಾಡುವ ತರಬೇತಿಯನ್ನು ಸಹ ನೀಡಲಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗೆ ಮೊಬೈಲ್ 9686677284 ಮೂಲಕ ಸಂಪರ್ಕಿಸಬಹುದು.

ಐದನೇ ಪುಟದಿಂದ

ವಿರುದ್ಧವೂ ಪ್ರಕರಣ ದಾಖಲು


ಅಡಿ ಪ್ರಕರಣ ದಾಖಲಾಗಿದೆ. ನಿನ್ನೆ ಪ್ರತಿ ಭಟನಾ ಮೆರವಣಿಗೆಯಲ್ಲಿ ಭಾಗಿಯಾದ ವರ ಮೇಲೂ ಪ್ರಕರಣ ದಾಖಲಾಗಿದ್ದು, ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ ಖಂಡಿಸಿ ನಡೆದಿದ್ದ ಪ್ರತಿಭಟನೆ ವೇಳೆಯೂ ನಡೆದಿದ್ದ ಕಲ್ಲು ತೂರಾಟ, ಬಾವುಟ, ಬಂಟಿಂಗ್ಸ್ ಕಿತ್ತೆಸೆದ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಎರಡು ಎಫ್‌ಐಆರ್ ದಾಖಲಾಗಿದೆ ಮುಸ್ಲಿಂ ಧರ್ಮದ ಬಾವುಟಕ್ಕೆ ಬೆಂಕಿ ಹಾಕಿ, ಈದ್ ಮಿಲಾದ್ ಹಬ್ಬದ ಹಿನ್ನೆಲೆ ಹಾಕಿದ್ದ ಬಂಟಿಂಗ್ಸ್ ಕಿತ್ತೆಸೆದವರ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ. ಮಸೀದಿಗೆ ನುಗ್ಗಲು ಯತ್ನಿಸಿ ಕಟ್ಟಡಕ್ಕೆ ಕಲ್ಲು ತೂರಿದ ವಿಚಾರವಾಗಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ಪೊಲೀಸರ ಮೇಲೆ ಹಲ್ಲೆ ಮಾಡಲಾಗಿದೆ. ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆಸಿದ ಗಿರೀಶ್, ಸೌಮ್ಯ, ರಮ್ಯ, ಪಲ್ಲವಿ ಸೇರಿದಂತೆ 500 ಜನರ ಮೇಲೆ ಎಫ್‌ಐಆರ್ ದಾಖಲಾಗಿದ್ದು, ಸದ್ಯ ಗಲಭೆ ಸೇರಿ ಒಟ್ಟು ಐದು ಎಫ್‌ಐಆರ್ ದಾಖಲು ಮಾಡಿದಂತಾಗಿದೆ.

ವಕಾಲತ್ತು ವಹಿಸದಿರಲು ನಿರ್ಧಾರ: ಮದ್ದೂರಿನಲ್ಲಿ ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಪರ ವಕಾಲತ್ತು ವಹಿಸದಿರಲು ಮದ್ದೂರು ವಕೀಲರ ಸಂಘ ನಿರ್ಧಾರ ಮಾಡಿದೆ. ಇಂದು ಕೋರ್ಟ್ ಕಲಾಪ ಬಹಿಷ್ಕಾರ ಮಾಡಿ ನಿರ್ಧಾರ ಕೈಗೊಂಡ ಮದ್ದೂರು ವಕೀಲರ ಸಂಘವು ಸಭೆಯಲ್ಲಿ ಆರೋಪಿಗಳ ಪರ ವಕಾಲತ್ತು ವಹಿಸದಂತೆ ಒಮ್ಮತದ ತೀರ್ಮಾನ ಕೈಗೊಂಡಿದ್ದು, ಜಿಲ್ಲಾ ವಕೀಲರ ಸಂಘಕ್ಕೂ ಈ ಬಗ್ಗೆ ಮನವಿ ಮಾಡಲಾಗುವುದು ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ಶಿವಣ್ಣ ಹೇಳಿದ್ದಾರೆ.

ಮಾಲ್ ಮೇಲಿಂದ ಬಿದ್ದ ಸುನೀಲ್ ನೆರವಿಗೆ ಹೋದ ಚಂದ್ರು ಸಹ ಸಾವು

ಮೈಸೂರು, ಸೆ.9– ಮೈಸೂರಿನ ಬಿಎಂ ಹೆಬಿಟೇಟ್ ಮಾಲ್‌ನಲ್ಲಿ ಸುಮಾರು 60 ಅಡಿ ಎತ್ತರದಿಂದ ಬಿದ್ದು ಸಾವನ್ನಪ್ಪಿದ ನೌಕರನ ರಕ್ಷಣೆಗೆ ಮುಂದಾಗಿ ಗಂಭೀರವಾಗಿ ಗಾಯಗೊಂಡಿದ್ದ ಯುವಕನೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

ಸೋಮವಾರ ಸಂಜೆ ಮಾಲ್‌ನ ಒಳ ಆವರಣದಲ್ಲಿ ಸುಮಾರು 60 ಅಡಿ ಎತ್ತರದಲ್ಲಿ ಅಳವಡಿಸಿದ್ದ ಬ್ಯಾನರ್ ತೆರವುಗೊಳಿಸುತ್ತಿದ್ದಾಗ ಪಿಓಪಿ ಮೇಲ್ಛಾವಣಿ ಶೀಟ್ ಮುರಿದು ಸುನೀಲ್ ಕೆಳಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟರು. ಸುನೀಲ್ ಬೀಳುವುದನ್ನು ಗಮನಿಸಿದ ಚಂದ್ರು ರಕ್ಷಣೆಗೆ ಮುಂದಾಗಿ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಕೂಡಲೇ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ತಡರಾತ್ರಿ ಸಾವನ್ನಪ್ಪಿದ್ದಾರೆ. ಚಂದ್ರು ತಂದೆ ವೀರಭದ್ರಪ್ಪಶೆಟ್ಟಿ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಕಟ್ಟಡದ ಮ್ಯಾನೇಜರ್ ಶ್ರೀಧರ್‌ನನ್ನು ನಿರ್ಲಕ್ಷ್ಯತೆ ಹಿನ್ನಲೆಯಲ್ಲಿ ಬಂಧಿಸಿದ್ದಾರೆ.



ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

ಶ್ರೀ ಬಾಲಕೃಷ್ಣ ಎಂ.ಎಸ್.

ಇವರು ದಿ: 31.08.2025ನೇ ಭಾನುವಾರ ದೈವಾಧೀನರಾಗಿದ್ದು, ತತ್ಸಂಬಂಧ ಮೃತರ ಆದರ ತತ್ಸಂಬಂಧವಾಗಿ ಮತ್ತು ಭೂಶಾಂತಿ ಕಾರ್ಯವನ್ನು 10–09–2025 ಬುಧವಾರ ಬೆಳಗ್ಗೆ 10.30ಕ್ಕೆ, ಮೃತರ ಸ್ವಗೃಹ ಎಂ. ಶೆಟ್ಟಹಳ್ಳಿ ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.



ಮೊದಲನೇ ವರ್ಷದ ಚಿರಸ್ಮರಣೆ

ಇಂದಿಗೆ ನೀವು ನಮ್ಮನಗಲಿ ಒಂದು ವರ್ಷ ಕಳೆದರು ಸದಾ ನಿಮ್ಮ ನೆನಪಿನಲ್ಲಿರುವ ಇವರ ಆತ್ಮಕ್ಕೆ ಚಿರಶಾಂತಿ ಕೋರುವ ಪತ್ನಿ, ಮಕ್ಕಳು ಮತ್ತು ಕುಟುಂಬವರ್ಗದವರು

ಶ್ರೀ ಬಸವರಾಜು ರವರು
ಆರೋಗ್ಯ ಇಲಾಖೆ, ಕುರುಬಾರಹಳ್ಳಿ

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು –570010
ದೂರವಾಣಿ: 0821–2424673/74 ಇಮೇಲ್: commr_amh@yahoo.in

ಟೆಂಡರ್ ಅಧಿಸೂಚನೆ ಸಂಖ್ಯೆ:ಆ.ಪು.ಸಂ.ಪ/ಸಂ.ವಿ.ಸೇ.ಟೆ–17/2025–26 ದಿನಾಂಕ: 04.09.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಸೇವಾ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. Events organised by the Department as part of Mysore Dasara Festival - 2025. ಆಸಕ್ತ ಯಾವುದೇ ಅರ್ಹ ಗುತ್ತಿಗೆದಾರರು/ಸಂಸ್ಥೆ/ಏಜೆನ್ಸಿಯವರು ಸದರಿ ಸೇವೆಗಳ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಇಂಡೆಂಟ್ ನಂ:DAMH/2025-26/SE0028 ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ, ವಿವರ ಇಂತಿವೆ.

ಕಾಮಗಾರಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ	12.09.2025, 17.00 ಗಂಟೆ
ಆನ್ ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ	18.09.2025, 16.00 ಗಂಟೆ
ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	20.09.2025, 16.30 ಗಂಟೆ
ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	22.09.2025, 11.00 ಗಂಟೆ

ಸಹಿ/– ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

DIPR/MYS/KAVITA/929/2025-26



3ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷವಾಯಿತು. ನಿಮ್ಮ ನೆನಪು ನಮ್ಮಲ್ಲಿ ಶಾಶ್ವತವಾಗಿದೆ. ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ.

ನಿಮ್ಮ ಸದಾ ಸ್ಮರಿಸುವ ಮಕ್ಕಳು ಮತ್ತು ಮೊಮ್ಮಕ್ಕಳು ಮತ್ತು ಕುಟುಂಬಸ್ಥರು.

ಎ. ಮೇರಿ ತರೇಸ



ನಿಧನ

ವೆಂಕಟೇಶ್‌ಗೌಡ

ನಿವೃತ್ತ KSRTC(TC) ಹೆಬ್ಬಾಳ್ 1ನೇ ಹಂತ
ಜನನ : 1-6-1952 ಮರಣ : 9-9-2025

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.

ಸಂಖ್ಯೆ:ಕಾಇಂ/ವಿ.ಜ.ನಿನಿ/ಎಯೋವಿ/ನಂ.3/ಅರಸೀಕೆರೆ/2025–26/666
ದಿನಾಂಕ:19.08.2025

RATES OF NON-SR ITEMS ಕೊಟೇಷನ್ ನೋಟಿಫಿಕೇಷನ್

ಕಾರ್ಯಪಾಲಕ ಇಂಜಿನಿಯರ್ ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ ನಂ.03 ಅರಸೀಕೆರೆ ರವರು Rates of NON-SR ITEMS for the work of "Consultancy services for Submission of Wildlife Mitigation and Management Plan for wildlife warden for the project-Diversion of forest land for construction of Yettinahole Gravity Canal from Chainage 0.000 Km to 261.69 Km in Hassan-Tumkur district" ಗೆ ಕೊಟೇಷನ್ ಅನ್ನು ಆಹ್ವಾನಿಸಿದ್ದು, ಕೊಟೇಷನ್ ಅನ್ನು ಮುಚ್ಚಿದ ಲಕೋಟೆಯಲ್ಲಿ ಕಾರ್ಯಪಾಲಕ ಇಂಜಿನಿಯರ್ ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ ನಂ.03 ಅರಸೀಕೆರೆ ಕಛೇರಿಗೆ ದಿನಾಂಕ:16.09.2025ರ ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು ಮತ್ತು ಸದರಿ ಮುಚ್ಚಿದ ಲಕೋಟೆಯನ್ನು ದಿನಾಂಕ:17.09.2025 ರಂದು ಈ ಕೆಳಗೆ ಸಹಿ ಮಾಡಿರುವ ಕಾರ್ಯಪಾಲಕ ಇಂಜಿನಿಯರ್ ರವರ ಸಮ್ಮುಖದಲ್ಲಿ ಈ ಕಛೇರಿಯಲ್ಲಿ ತೆರೆಯಲಾಗುವುದು. ಸೂಚನೆ 1.ಕೊಟೇಷನ್ ದರಗಳನ್ನು ಸರಕು ಮತ್ತು ಸೇವಾ ತೆರಿಗೆ ಹೊರತುಪಡಿಸಿ ಸಲ್ಲಿಸಬೇಕು. 2.ಐಟಂವಾರು ವಿವರಗಳನ್ನು ದಿನಾಂಕ:16.09.2025 ರವರೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ ನಂ.03 ಅರಸೀಕೆರೆ ಕಛೇರಿಯಿಂದ ಪಡೆದುಕೊಳ್ಳತಕ್ಕದ್ದು. ಷರತ್ತು ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಕೊಟೇಷನ್‌ಅನ್ನು ತಿರಸ್ಕರಿಸುವ ಅಥವಾ ಬದಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3 ಅರಸೀಕೆರೆ

ವಾ.ಸಾ.ಸಂ/ಇ/ಹಿ.ಸ/ಹಾಸನ/538/ಕೆ.ಎಸ್.ಎಂ.ಸಿ.ಎ/2025–26

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ) ಇ–ಪೋರ್ಟಲ್ ನಲ್ಲಿ ಮಾತ್ರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು – 570020
Ph. 0821-2515598 Email: eevccdn2@gmail.com

ಅಲ್ಪಾವಧಿ ಇ-ಟೆಂಡರ್ ಸಂಖ್ಯೆ: 08/2025-26 ದಿನಾಂಕ: 09.09.2025

ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಅರ್ಹತೆಗೆ ಬೇಕಾಗುವ ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು. ಕಾಮಗಾರಿಗಳ ಕನಿಷ್ಠ ಮೊತ್ತ ರೂ.25.00 ಲಕ್ಷದಿಂದ ರೂ.500.00 ಲಕ್ಷದವರೆಗಿನ 37 ಸಂಖ್ಯೆಯ ಅಚ್ಚುಕಟ್ಟು ರಸ್ತೆಗಳ ಸುಧಾರಣೆ, ತಡೆಗೋಡೆಗಳ ನಿರ್ಮಾಣ ಮತ್ತು ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಪರಿಶಿಷ್ಟ ಜಾತಿಯವರಿಗೆ 01, ಪರಿಶಿಷ್ಟ ಪಂಗಡದವರಿಗೆ 01, ಪ್ರವರ್ಗ–1 ಜಾತಿಯವರಿಗೆ 1, ಪ್ರವರ್ಗ–2ಎ ಜಾತಿಯವರಿಗೆ 02, ಸಾಮಾನ್ಯವರ್ಗದವರಿಗೆ 32, ಕಾಮಗಾರಿಗಳನ್ನು ಮೀಸಲಿರಿಸಲಾಗಿದೆ. ಸದರಿ ಕಾಮಗಾರಿಗಳಲ್ಲಿ ಟೆಂಡರ್ ಕ್ವಾರಿಸ್/ಕ್ಲಾರಿಫಿಕೇಷನ್ **ಕೊನೆಯ ದಿನಾಂಕ: 15–09–2025 ಸಾಯಂಕಾಲ 05.00** ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸಲು **ಕೊನೆಯ ದಿನಾಂಕ: 18–09–2025 ಸಾಯಂಕಾಲ 05.30** ಗಂಟೆಯವರೆಗೆ ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 20–09–2025 ಬೆಳಗ್ಗೆ 11.30 ಗಂಟೆ** ಹಾಗೂ ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 25–09–2025 ಬೆಳಗ್ಗೆ 11.30 ಗಂಟೆ** ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ: **www.kppp.karnataka.gov.in** ರಲ್ಲಿ ಪಡೆಯಬಹುದು. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಕೆಪಿಪಿ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು